Rs. 30,000 each up to 14th April 1952 and afterwards at Rs. 12,000 per month. Further the repayment of the balance found due as on 15th January 1956 is made repayable in twelve equal quarterly instalments.

(*b*)

	Rs. As. Ps.
Ordinary Interest.	3,89,591-14-6.
Penal Interest.	65,391-12-6.
Total.	4,54,983-11-0.

(*c*) *Vide* (*a*) (ii) above.

(*d*) The accounts of the Mills have been audited up to the end of 31st March, 1957, and a dividend of 4 per cent has been declared to the share holders.

Correspondence between Bombay and Mysore Governments on Border Adjustments.

Q.—3519. Sri K. HANUMANTHAIYA (Ramanagaram).—

Will the Government be pleased to state:—

(*a*) whether the Chief Minister has written any letter to the Chief Minister, Bombay State, on the subject of border adjustments of areas of the States of Bombay and Mysore;

(*b*) if so, whether a copy of the correspondence will be placed on the Table of the House;

(*c*) the areas which are under consideration for purposes of these adjustments;

(*d*) the opinion of Government in regard to these areas?

A.—Sri S. NIJALINGAPPA (Chief Minister):—

(*a*) Yes.

(*b*), (*c*) and (*d*) At this stage, Government do not consider it advisable, in public interest, to disclose this information.

Business of the House.

ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಸ್ವಾಮಿ, ಪ್ರಶ್ನೋತ್ತರಗಳ ಕಾಲದ ಮೇಲೆ ಸದಸ್ಯರು ಹೇಳ ಬೇಕಾದ statement ಗೆ ಅವಕಾಶವಿದೆಯೆಂದು ನಾನು ತಿಳಿದಿದ್ದೇನೆ.

Mr. SPEAKER.—The Hon'ble Member must represent to me in my chambers.

ಶ್ರೀ ಕೆ. ಕೆಂಚಪ್ಪ.—ಇಲ್ಲಿಯೂ ಹೇಳುವುದಕ್ಕೆ ಅವ ಕಾಶವಿದೆಯೆಂದು ನಾನೆನು ತಿಳಿದಿದ್ದೇನೆ. ತಾವು ರೂಲಿಂಗ್ ಕೊಡುವುದರಲ್ಲೂ convention ಏನಿದೆ ಯೆಂದು ನೋಡಬೇಕು.

Mr. SPEAKER.—I have said that I am not going to give permission to anybody to make a representation unless prior permission is obtained from me in my chambers.

ಶ್ರೀ ಕೆ. ಕೆಂಚಪ್ಪ.—Prior permission Chambers ನಲ್ಲೇ ಆಗಬೇಕೆ?

ಅಧ್ಯಕ್ಷರು.—ಹೌದು.

Sri C. J. MUCKANNAPPA (Gubbi).—What has happened to my adjournment motion?

Mr. SPEAKER.—I have given a reply. It will come to the Hon'ble Member.

Sri C. J. MUCKANNAPPA.—Will it be read out in the House?

Mr. SPEAKER.—It may or may not be read. I do not propose to read it. I have decided that it is not so much of importance as to be read in the House. I do not allow the Hon'ble Member to make a submission.

BUDGET FOR 1958-59—DEMANDS FOR GRANTS.

Demand No. 1—Taxes on Income other than Corporation Tax and Estate Duty.

4. Taxes on Income other than Corporation Tax and Estate Duty.

Mr. SPEAKER.—Motion moved:

"That a sum not exceeding Rs. 66,000 be granted to the Government to defray the charges which will come in course of payment during the year ending 31st day of March 1959, in respect of 'Taxes on Income other than Corporation tax and Estate Duty'."

Demand No. 3—State Excise.

8. State Excise Duties.

Mr. SPEAKER.—Motion moved:

"That a sum not exceeding Rs. 28,61,000 be granted to the

(MR. SPEAKER)

Government to defray the charges which will come in course of payment during the year ending 31st day of March 1959, in respect of 'State Excise Duties'."

Demand No. 4—Stamps.

9. *Stamps.*

MR. SPEAKER.—Motion moved:

"That a sum not exceeding Rs. 2,49,000 be granted to the Government to defray the charges which will come in course of payment during the year ending 31st day of March 1959, in respect of 'Stamps'."

Demand No. 6—Registration.

11. *Registration.*

MR. SPEAKER.—Motion moved:

"That a sum not exceeding Rs. 13,43,000 be granted to the Government to defray the charges which will come in course of payment during the year ending 31st day of March 1959, in respect of 'Registration'."

Demand No. 8—Other Taxes Administration.

13. *Other Taxes and Duties.*

MR. SPEAKER.—Motion moved:

"That a sum not exceeding Rs. 47,22,000 be granted to the Government to defray the charges which will come in course of payment during the year ending 31st day of March 1959, in respect of 'Other Taxes and Duties'."

Demand No. 24—Rural Development.

40-A. *Rural Development.*

MR. SPEAKER.—Motion moved:

"That a sum not exceeding Rs. 1,46,90,000 be granted to the Government to defray the charges which will come in course of payment during the year ending 31st day of March 1959, in respect of 'Rural Development'."

*ಶ್ರೀ ಬಿ. ಚಾಮಯ್ಯ (ಪಾಂಡವಪುರ).—ಸ್ವಾಮಿ, ಈಗ ನಮ್ಮ ಮುಂದಿರುವುದು ರೂರಲ್ ಡೆವಲಪ್‌ಮೆಂಟ್ ಡಿಮ್ಯಾಂಡ್ ಆಗಿದೆ. ಈ ವಿಷಯದಲ್ಲಿ ನಾನು ಸರ್ಕಾರದವರ ಗಮನಕ್ಕೆ ಕೆಲವು ವಿಷಯಗಳನ್ನು ತರಬೇಕೆಂದು ನಿಂತಿದ್ದೇನೆ. ಈಗ ನಮ್ಮ ದೇಶದಲ್ಲಿ ಹೊಸ ಮೈಸೂರು, ಹಳೆಯ ಮೈಸೂರು ಎರಡೂ ಸೇರಿಸಿ ಸುಮಾರು 28,897 ಹಳ್ಳಿಗಳಿವೆ. ಪ್ರಜಾ ಸಂಖ್ಯೆ 194ಲಕ್ಷ ಚಿಲ್ಲರೆಯಿದೆ. ಇದರ ಪೈಕಿ ಹಳ್ಳಿಯ ಪ್ರಜಾ ಸಂಖ್ಯೆಯೇ ಒಂದು ಕೋಟಿ 49 ಲಕ್ಷದಷ್ಟಾಗುತ್ತದೆ. ಉಳಿದ ಕೇವಲ 44 ಲಕ್ಷ ಚಿಲ್ಲರೆಯಷ್ಟು ಪಟ್ಟಣವಾಸದ್ದಾಗಿರುತ್ತದೆ. ಇಷ್ಟೊಂದು ಪ್ರಜಾ ಸಂಖ್ಯೆ ಹಳ್ಳಿಯಲ್ಲಿರುವಾಗ ಅದರ ಉದ್ಧಾರಕ್ಕಾಗಿ ಕೊಟ್ಟಿರುವುದು ಒಂದು—66 ಲಕ್ಷದ 55ಸಾವಿರ, ಇನ್ನೊಂದು Social welfareಗೆಂದು 80ಲಕ್ಷದ 35ಸಾವಿರ—ಒಟ್ಟು ಒಂದುಕೋಟಿ 46 ಲಕ್ಷದಷ್ಟು ಮಾತ್ರ ಅಂದರೆ, ಹಳ್ಳಿಗಳ ಪ್ರಜಾಸಂಖ್ಯೆಗೆ ನೀವು ಕೊಟ್ಟಿರತಕ್ಕ ಹಣವನ್ನು ಲೆಕ್ಕಹಾಕಿದರೆ ತಲ್ಹಾ ಒಂದೊಂದು ರೂಪಾಯಿಯೂ ಬರುವುದಿಲ್ಲ.

ಅಧ್ಯಕ್ಷರು.—ನಾನು ಒಂದು ಮಾತು ಹೇಳ ಬಯಸುತ್ತೇನೆ. ಈಗ ಸಭೆಯ ಮುಂದೆ 3, 4, 6, 8, 24 ಈ ಎಲ್ಲ ಡಿಮ್ಯಾಂಡುಗಳೂ ಇವೆ. ಎಲ್ಲದರ ಮೇಲೂ ಒಟ್ಟಿಗೆ ಸದಸ್ಯರು ಮಾತನಾಡಬಹುದು.

ಶ್ರೀ ಬಿ. ಚಾಮಯ್ಯ.—ನಾನು ಹೇಳುವುದಿಷ್ಟು, ತಾವು ಇಷ್ಟು ಜನರೂ ಹಳ್ಳಿಗಳಿಂದ ಚುನಾಯಿತರಾಗಿ ಬಂದಿದ್ದೀರಿ. ಇವೊತ್ತಿನ ದಿವಸ ಶ್ರೀಮಾಚೆನ್ನಿಗರಾಮಯ್ಯನವರು ಮಂತ್ರಿ ಪದವಿಯನ್ನು ಅಲಂಕಾರ ಮಾಡಿದ್ದಾರೆ ಅದು ಯಾರಿಂದ? ಹಳ್ಳಿಯವರಿಂದ. ಆದ್ದರಿಂದ ತಾವು ಅವರ ಯೋಗಕ್ಷೇಮವನ್ನು ನೋಡಬೇಕು. ಅಂದಮೇಲೆ ಹಳ್ಳಿಯವರಿಗೆ ತಲೆಗೊಂದು ರೂಪಾಯಿ ಕೊಟ್ಟರೆ ಸರಿಯೇ? ಅದೇ. ತಾವು ಪಟ್ಟಣಗಳಿಗೆ, ಬೆಂಗಳೂರು ಸಿಟಿ, ಮೈಸೂರು ಸಿಟಿಗಳಿಗೆ ಕೊಟ್ಟಿರುವುದನ್ನೂ ಇದನ್ನೂ ಹೋಲಿಕೆ ಮಾಡಿದರೆ ಅದಕ್ಕೂ ಇದಕ್ಕೂ ಹೊಲಿಕೆಯೇ ಇಲ್ಲ. ನೀವು ಹಳ್ಳಿಗಳವರಿಗೆ ಇಷ್ಟು ಕೊಡುವುದರಿಂದ ಏನೇನೂ ಪ್ರಯೋಜನವಾಗುವುದಿಲ್ಲ. Rural water supplyಗೆಂದು 20ಲಕ್ಷ ರೂಪಾಯಿಗಳನ್ನು ಒದಗಿಸಿದ್ದೀರಿ. ಇದರಲ್ಲಿ 10ಲಕ್ಷ ರೂಪಾಯಿಗಳು ಇಂಡಿಯಾ ಸರ್ಕಾರದವರು ಕೊಟ್ಟಿರುವ ಗ್ರಾಂಟು.

ಶ್ರೀ ಆರ್. ಚೆನ್ನಿಗರಾಮಯ್ಯ (ಸ್ಥಳೀಯ ಪ್ರಜಾಧಿಕಾರ ಶಾಖೆಯ ಮಂತ್ರಿಗಳು).—ಮೈಸೂರು ಮತ್ತು ಬೆಂಗಳೂರು ಸಿಟಿಗಳಿಗೆ ಎಷ್ಟು ಕೊಟ್ಟಿದ್ದಾರೆಂಬುದನ್ನು ಹೇಳಿ ನೋಡೋಣ?

ಶ್ರೀ ಬಿ. ಚಾಮಯ್ಯ.—ಬೇಕಾದರೆ ಆಮೇಲೆ ಹೇಳುತ್ತೇನೆ. ನಾನು ಹೇಳಿದ್ದು ಹಳ್ಳಿಗಳಿಗೆ ಬಹಳ ಕಡಮೆ ಎಂದು. ಈ ನೀರು ನರಬರಾಯಿಯ ವಿಚಾರವಾಗಿ ಹೇಳುವುದಾದರೆ 10ಲಕ್ಷ ರೂಪಾಯಿಗಳನ್ನು ಇಂಡಿಯಾ ಸರ್ಕಾರದವರು ಕೊಟ್ಟಿದ್ದಾರೆ. ನೀವು 10ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿರುವುದು. ಈಗ ನಮ್ಮ ದೇಶದಲ್ಲಿರುವ 25,000 ಹಳ್ಳಿಗಳಲ್ಲಿ ಎಷ್ಟೋ ಹಳ್ಳಿಗಳಲ್ಲಿ ಇನ್ನೂ ನೀರು ನರಬರಾಯಿಯ ಸೌಕರ್ಯವಿಲ್ಲ. ಎಷ್ಟೋ ಹಳ್ಳಿಗಳಲ್ಲಿ ಬಾವಿಗಳೇ ಇಲ್ಲ. ಪ್ರತಿಯೊಂದು ಹಳ್ಳಿಗೂ ಬಾವಿಗಳನ್ನು ಒದಗಿಸ

ಬೇಕಾದ್ದು ಸರ್ಕಾರದವರ ಕರ್ತವ್ಯ. ಅಂಥಾದ್ದರಲ್ಲಿ ಈಗ ಸರ್ಕಾರದವರು ಬಾವಿಗಳನ್ನು ಒದಗಿಸುವಾಗ ಯಾವ ಪದ್ಧತಿಯನ್ನು ಅನುಸರಿಸುತ್ತಿದ್ದಾರೆಂದರೆ ಹಳ್ಳಿಗಳವರು ಕೆಲಸ ಮಾಡಬೇಕು ಅಥವಾ ದುಡ್ಡು ಕೊಡಬೇಕು ಎಂದು ಮಾಡಿದ್ದಾರೆ. Technical work ಎನ್ನುವುದು ಹಳ್ಳಿಯವರಿಂದ ಸಾಧ್ಯವಿಲ್ಲ. ಆದ್ದರಿಂದ ಸರ್ಕಾರದವರು ಪೂರ್ತಿ ಖರ್ಚನ್ನೂ ತಾವೇ ವಹಿಸಿಕೊಂಡು ಬಾವಿ ತೆಗೆಯಿಸಿಕೊಡಬೇಕೆಂದು ಹೇಳುತ್ತೇನೆ.

ಸ್ಯಾವಿ ಇನ್ನೊಂದು ನ್ಯಾಷನಲ್ ವಾಟರ್ ಸಪ್ಲೈ ಸ್ಕೀಮು ಎಂದು ಇದೆ. ಇದಕ್ಕೆ ಇಂಡಿಯಾ ಸರ್ಕಾರದವರು ಹಣ ಕೊಡುತ್ತಾರೆ. ಇದರ ಉದ್ದೇಶ ಹಳ್ಳಿಯ ಜನರಿಗೆ ವಾಟರ್ ಸಪ್ಲೈ ಮಾಡಬೇಕು, ಬೋರ್ ವೆಲ್ಸ್ ತೆಗೆಸಬೇಕು ಮತ್ತು ಪಂಪು ಸೆಟ್ಟುಗಳನ್ನು ಕೊಡಬೇಕು. ಎನ್ನುವುದು ಹಿಂದೆ ಶ್ರೀ ಗುಂಡಪ್ಪ ಗೌಡರು ಮಂತ್ರಿಗಳಾಗಿದ್ದಂಥ ಕಾಲದಲ್ಲಿ ಬೋರ್ ವೆಲ್ಸ್ ತೆಗೆಸಬೇಕು ಎಂದು ಮೆಷಿನ್ ತರಿಸಿ ಕೆಲವು ಕಡೆ ಬೋರ್‌ವೆಲ್ಸ್ ತೆಗೆಸಿದರು. ಅಂಥಾ ಮೆಷಿನ್‌ಗಳು 13 ಇವೆ ಆ ಮೆಷಿನ್ಸ್ ಈಗ ಎಲ್ಲಿವೆಯೋ ಪತ್ತೆಯೇ ಇಲ್ಲ. ಬಳ್ಳಾರಿ ಜಿಲ್ಲೆಯಲ್ಲಿ ಸೇರಿಕೊಂಡಿವೆಯೆಂದು ಹೇಳುತ್ತಾರೆ. ಆ ಮೆಷಿನ್ಸ್ ತರಿಸಿ ಎಲ್ಲೆಲ್ಲಿ ಬೋರ್ ವೆಲ್ಸ್ ಇವೆಯೋ ಅಲ್ಲಿಗೆ ಪಂಪುಸೆಟ್ಸ್ ಕೊಡಿಸಿ ಸರ್ಕಾರದವರು ಹಳ್ಳಿಯವರಿಗೆ ಸಲೀಸಾಗಿ ವಾಟರ್ ಸಪ್ಲೈ ಆಗುವ ಹಾಗೆ ಏರ್ಪಾಡು ಮಾಡಬೇಕು ಎಂದು ತಮ್ಮನ್ನು ಪ್ರಾರ್ಥನೆ ಮಾಡುತ್ತೇನೆ.

ಇನ್ನು ರೂರಲ್ಸ್ ಹೆಲ್ತ್ ಮತ್ತು ಸ್ಯಾನಿಟೇಷನ್ ಇವುಗಳಿಗಾಗಿ 10ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಪಬ್ಲಿಕ್ ಹೆಲ್ತ್‌ನಲ್ಲೂ ಕೂಡ ಇದಕ್ಕಾಗಿ 4ಲಕ್ಷ ಚಿಲ್ಲರೆ ರೂಪಾಯಿಗಳನ್ನು ಒದಗಿಸಿದ್ದಾರೆ. ಹೀಗೆ ಒಂದು ಕಡೆ ಪಬ್ಲಿಕ್ ಹೆಲ್ತ್‌ನಲ್ಲೂ 4 ಲಕ್ಷ ರೂಪಾಯಿಗಳನ್ನು ಸ್ಯಾನಿಟೇಷನ್ ಮತ್ತು ಡ್ರೈನೇಜಿಗೆ ಒದಗಿಸಿ ಇನ್ನೊಂದು ಕಡೆ ರೂರಲ್ ಹೆಲ್ತ್ ಮತ್ತು ಸ್ಯಾನಿಟೇಷನ್‌ನಲ್ಲೂ ಹಣ ಒದಗಿಸಿರುವುದು. ಡೂಪ್ಲಿಕೇಷನ್ ಆಗುತ್ತದೆ. ಒಂದೇ ಕಡೆ concentrate ಮಾಡಿದರೆ ಅದರಿಂದ ಜನಗಳಿಗೆ ಸಹಾಯ ಮಾಡಲು ಅನುಕೂಲವಾಗುತ್ತದೆ. ಸ್ಯಾನಿಟೇಷನ್ ಮತ್ತು ಡ್ರೈನೇಜ್ ವಿಚಾರದಲ್ಲಿ ಪಬ್ಲಿಕ್ ಹೆಲ್ತ್ ಇಲಾಖೆ ಏನು ಕೆಲಸ ಮಾಡುತ್ತಿದೆ ಎಂದು ಇವೊತ್ತಿನವರೆಗೂ ಗೊತ್ತಿಲ್ಲ. ಆದ್ದರಿಂದ ಎರಡು ಕಡೆ ಹಣ ಒದಗಿಸಿರುವುದನ್ನು ಬಿಟ್ಟುಬಿಟ್ಟು ಒಂದೇಕಡೆ ಒದಗಿಸಿ ಸಬ್‌ಸ್ಟಾನ್‌ಷಿಯಲ್ ಆಗಿ ಹಳ್ಳಿಗಳಲ್ಲಿ ಕೆಲಸ ಆಗಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಎಸ್ಟಾಬ್ಲಿಷ್‌ಮೆಂಟಿಗೋಸ್ಕರ ಎರಡು ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇದು ಬಹಳ ಹೆಚ್ಚು. ಇದನ್ನು ಕಡಮೆ ಮಾಡಬೇಕು.

ರೂರಲ್ ಕಮ್ಯುನಿಕೇಷನ್‌ಗೋಸ್ಕರ 11ಲಕ್ಷ ರೂಪಾಯಿಗಳನ್ನು ತಾವು ಬಡ್ಜೆಟ್ಟಿನಲ್ಲಿ ಒದಗಿಸಿದ್ದೀರಿ. ತಾವು ಹಳ್ಳಿಯಿಂದ ಬಂದಿದ್ದೀರಿ. ತಮಗೆ ರೂರಲ್ ಕಮ್ಯುನಿಕೇಷನ್ ಎಷ್ಟರ ಮಟ್ಟಿಗೆ ಇದೆ ಎಂಬುದು ಗೊತ್ತು. ಒಂದು ಹಳ್ಳಿಯಿಂದ ಇನ್ನೊಂದು ಹಳ್ಳಿಗೆ ಹೋಗಬೇಕಾದರೆ ಬಹಳ ತೊಂದರೆಯಾಗುತ್ತದೆ. ಹಳ್ಳಿಯವರು ತಮ್ಮ ಗಾಡಿ ಸಾಮಾನುಗಳನ್ನು ಸಾಗಿಸಬೇಕಾದರೂ ತೊಂದರೆ ಇದೆ. ಜಮೀನುಗಳಿಗೆ ಗೊಬ್ಬರಗೋದು ವಗೈರೆ ಸಾಗಿಸುವುದಕ್ಕೆ ತೊಂದರೆ ಇದೆ. ಸ್ಟೇಟ್ ಫಂಡ್ ರೋಡ್ಸ್ ಇವೆ ಅವಕ್ಕೆ ಬೇಕಾದಷ್ಟು ದುಡ್ಡು ಖರ್ಚು ಮಾಡುತ್ತಿದ್ದಾರೆ. ಸ್ಟೇಟ್ ಫಂಡ್ ರೋಡ್ ಜಮೀನುಗಳ ಮಧ್ಯೇ ಹೋಗುತ್ತದೆ. ರೈತರನ್ನು ಕೇಳದೆ ಮಾಡದೆ ಜಮೀನಿನ ಮಧ್ಯದಲ್ಲಿ ಡ್ರೇನುಗಳನ್ನು ತೆಗೆದುಕೊಂಡು ಹೋಗುತ್ತಾರೆ. ಮೈಸೂರು ಕೆನಾನೂರ್‌ರನ್ನೆ ನೋಡಿ. ಎಷ್ಟು ರೈತರ ಜಮೀನು ಹೋಗುತ್ತದೆ? ಸರ್ಕಾರದವರು ಎಲ್ಲಾ ರೈತರ ಅಭಿಪ್ರಾಯತೆಗೆದುಕೊಂಡು ಜಮೀನಿನಲ್ಲಿ ಡ್ರೇನು ಹೊಡೆಯಬೇಕು. ರೈತರ ಜಮೀನನ್ನು ಪ್ರವೇಶಮಾಡಿ ಅಲ್ಲಲ್ಲಿ ಡ್ರೇನ್ ಹೊಡೆಯುತ್ತಾರೆ. ಇದನ್ನು ತಪ್ಪಿಸಬೇಕು. ಇದಕ್ಕೆ ಎಷ್ಟೋ ದುಡ್ಡು ಖರ್ಚು ಮಾಡುತ್ತಿದ್ದಾರೆ. ಆದರೂ ಅದನ್ನು ಮೇನ್‌ಟೈನ್ ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲ. ರೂರಲ್ ಕಮ್ಯುನಿಕೇಷನ್ಸ್ ಸರಿಯಾಗಿಲ್ಲದೆ ಜನಗಳು ತೊಂದರೆಪಡುತ್ತಿದ್ದಾರೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ರೋಡುಗಳ ವಿಷಯ ಹೇಳುತ್ತಿದ್ದೀರಾ?

ಶ್ರೀ ಬಿ. ಚಾಮಯ್ಯ.—ಸ್ಟೇಟ್ ಫಂಡ್ ರೋಡುಗಳು. ಮೈಸೂರು ಕಡೆ ಹೋಗಿದ್ದರೆ ತಾವು ನೋಡಿರಬಹುದು. ಎಷ್ಟೋ ದುಡ್ಡನ್ನು ವೈಡನ್ ಮಾಡುವುದಕ್ಕೆ ಖರ್ಚು ಮಾಡುತ್ತಿದ್ದಾರೆ. ಅದರಲ್ಲಿ ಕೇವಲ ಸ್ವಲ್ಪ ದುಡ್ಡನ್ನು ಹಳ್ಳಿಗಳ ಕಡೆ ತಿರುಗಿಸಿದರೆ ಹಳ್ಳಿಗಳಿಗೆ ಸಹಾಯವಾಗುತ್ತದೆ. ಸ್ವಲ್ಪ ಸಂಚಾರ ಮಾಡುವ ಹಾಗಾಗುತ್ತದೆ.

ಇಂಡಿಯಾ ಸರ್ಕಾರದವರು ಸುಮಾರು 19ಲಕ್ಷ ರೂಪಾಯಿಗಳನ್ನು ಎಕ್ಸ್-ಕ್ರಿಮಿನಲ್ಸ್ ಮತ್ತು ಅನ್‌ಟಚ್ಚಬಲಿಟಿ ನಿವಾರಣೆ ಮಾಡುವುದಕ್ಕೋಸ್ಕರ ಕೊಟ್ಟಿದ್ದಾರೆ. ಆ 19ಲಕ್ಷ ರೂಪಾಯಿಗಳಲ್ಲಿ 5ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಈ ಬಗ್ಗೆ ಇನ್ನು ಉಳಿದ 14ಲಕ್ಷ ರೂಪಾಯಿಗಳನ್ನು ಎಕ್ಸ್-ಕ್ರಿಮಿನಲ್ಸ್ ಮತ್ತು ಅನ್‌ಟಚ್ಚಬಲಿಟಿ ರಿಮೂವ್ ಮಾಡುವುದಕ್ಕೆ ತಾವು ಖರ್ಚು ಮಾಡುತ್ತಾ ಇಲ್ಲ. ಅದನ್ನು ಬೇರೆಯದಕ್ಕೆ ಖರ್ಚು ಮಾಡಿದ ಹಾಗೆ ಕಾಣುತ್ತದೆ. ತಾವು ಜವಾಬು ಕೊಡುವಾಗ ಇದನ್ನು ಹೇಳುತ್ತೀರೆಂದು ನಾನು ನಂಬಿದ್ದೇನೆ.

Sri M. MALLIKARJUNASWAMY (Malavalli—Scheduled Castes).—Mr. Speaker, Sir, it is with great pleasure I rise to support the Demand. For the first time as you know I am upon the floor of this Legislature and I therefore want the Chair to allow some more time than the allotted time.

Mr. Speaker, Sir, the importance of rural development can hardly be over exaggerated when Mother Bharath lives in her villages. If we just look at the social, economic and educational aspects of rural life in India it is heart-rending. Socially they are divided due to diverse castes and creeds. Economically too, they are very backward. General poverty is the essential feature of rural area. Educationally, they are still backward. Colossal ignorance and stupendous poverty are the two maladies which are eating into the body and the soul of the people.

(SRI M. MALLIKARJUNASWAMY)

Caste system is still there. That too after the attainment of independence casteism is taking deep roots. Of course, untouchability and unapproachability as living notions are losing their significance in Gandhian era. Common man is not worried about the observance of untouchability. But it is only the educated people, leaders motivated by self-aggrandisement who exploit the mass ignorance and sow seeds of communalism for their selfish ends. Unless the educated people change their outlook it is not possible to eradicate this untouchability which has been a blot on Hinduism and Hindu Society since a long time (ages). It is more so with the officers. Until and unless such officers are brought to book untouchability will not be eradicated from the Aryavartha.

In the words of Stalin, India is something like a gigantic ethnological museum and no social or economic upheaval could be brought about. In my opinion, the super-structure of Hindu society is firmly standing on the bedrock of these scheduled caste people. It is these people who do all sorts of drudgery in the houses, farms and factories of caste Hindus. Unless these people are properly cared for in the long run they turn out to be antagonistic elements, reduce themselves into proletarian class and it will definitely tell upon the very existence of capitalistic economy. The hon'ble member Sri B. Basavalingappa referred to these people as being treated like cattle. But I say even cattle are being treated better than these human species and they are being treated like chattels.

As a serious student of political history I want to give my verdict that there are people who say that we had a past, and glorious history. But in my opinion, there is nothing but blank in our political history. The past history of our country is a history of humiliation, subjugation, subordination, slavery and what not. Therefore, our history need be recast in the light of present conditions by introducing great personages like Mahatma Gandhi and Dr. Ambedkar who strove hard just before and after independence. It is for the first time as we know, we are having a strong centralised government, in the history of our country. I, therefore feel, as true patriot if at all we want to maintain our hard-won independence intact, we must reorganise and reorientate and rejuvenate the entire Hindu society on the principles of equality, fraternity and liberty.

2-30 P.M.

In my opinion, the feeling that we are Indians and we are Hindus is still in embryo. The four-fold division of Hindu society was hit upon by our ancient Hindu seers and sociologists for the achievement of "Para Shreya" the highest chief good based on the principle each for all and all for each. But, today what we see is, that it took a bad turn and gave birth to casteism and caste based on profession. It is this caste system that dehumanized, devitalized and demoralised the Hindus and dealt a lethal blow to the Hindu solidarity and to the feeling of oneness and brotherhood.

I, therefore, sincerely feel that fusion of blood alone can bring back the feeling of oneness in these people. I advocate inter-caste marriage, but it should be among the untouchables themselves. My contention is that untouchability among the untouchables should be eradicated in the first place before we think of eradicating the untouchability that is subsisting between the touchable Hindus and the untouchables.

While advocating the Inter-caste marriage among the caste Hindus themselves I would like to give my own theory that it should be only on that line. I would like to classify the people of our country into two classes namely, the vegetarians and the non-vegetarians based on their food cults. The Brahmins and Lingayets being the vegetarian class, they can resort to inter-caste marriage and freely give and take girls in marriage. There are meat eating Brahmins and Lingayets and they, in turn, can give and take

girls freely from the non-vegetarians like the Gowdas and others. Here also we must note down the fact that there are vegetarians among the non-vegetarian classes who will also do well for blood relation with other vegetarian class like Brahmins and Lingayets.

It is with such a fusion of blood we can bring the social and economic equality with that of political equality we are having at present after independence. Political democracy, in my opinion, can survive only when social and economic democracies usher in. Or else our political democracy will remain only as top-dressing and it may let loose at any moment and become bare and nacked and Dr. Ambedkar's verdict on Indian Democracy would come true that, "Democracy is only a top-dressing in the Indian soil which is essentially undemocratic."

To maintain political democracy intact and to achieve the other two democracies, namely, social and economic and to bring about the feeling of oneness by the fusion of blood, it is quite imperative that the provisions pertaining to compulsory education adumbrated in the sacred book of our Indian Constitution should be implemented at all costs. Then only we can think of realising the high principles of socialistic pattern of society and welfare state which is secular in character. Universal education as you know, is an essential prerequisite to have a successful democracy. I, therefore, feel that it is quite imperative and important that provision of compulsory education in our Constitution should be implemented. I am quite aware of the magnitude of the problem in relation to that of financial back up. I, therefore, request the Government to introduce compulsory education at the first stage as an initial step to the Scheduled Castes and other backward classes at least. For this, money could be had from any source.

As the Scheduled Class people are the most neglected masses of this ancient country, I sincerely feel that education is the only sovereign remedy and panacia for all the existing maladies and anomalies, be they political, social or economic, that this community as such is confronted with. If the Government were to realise the gravity and seriousness of the problem and take it to their heart, money would come from any quarter and any source without difficulty. We are really highly grateful to the State for the interest they have taken in spreading education among the Scheduled Caste children. For instance, that grant-in-aid given to various hostels in the State is not in keeping with the ever-growing number of Scheduled Caste school going children. The boarding stipend given at present is at the same level as it was 10 years; it is static for the last ten years. I appeal to the Government to see that this is at least doubled.

Then, Let me come to construction of hostel buildings. The construction of hostel buildings to accommodate these students is also imperative. When I say this, it should not be taken to mean that I am advocating a separatist tendency. If all the students of the Scheduled Castes are accommodated in the general hostels and if the Government subsidise them in view of the fact that the Scheduled Caste students are not in a position to meet the exhorbitant boarding bill of the general hostels, then only I welcome that idea. If any quota for admission in these general hostels is fixed, it would be definitely a clog on their educational advancement.

Coming to the housing scheme of these people, the amount is lesser than the previous year in spite of the fact that the area is doubled now. Even the amount provided for sinking wells should also be provided out of general funds and such wells should be sunk near or in the vicinity round about the Harijan habitant. Then only we can think of the eradication of untouchability.

Regarding rural sanitation and drainage provisions, there should also be provided out of general funds. While doing so, we must not be blind to the fact that we are having panchayat Raj in our country. The

(SRI M. MALLIKARJUNASWAMY)

panchayets of which caste-stricken caste Hindu elements are the domineering factor would purposely neglect the sanitary and drainage works undertaken by them to be extended over to the Harijan locality. Government should give definite instruction to these Gram-Panchayats that they should take up the work in the first place where these Scheduled Castes people live.

Coming to the distribution of lands for these people for dwelling purposes, I say that mixed colony should be encouraged.

Sir, coming to the land problem and the land laws, I would like to say that if one turns the pages of the history of land records, one will see how these lands have come to be acquired. There is the proverbial tendency of the bigger whales or fish swallowing the smaller ones. Land is the generous bounty of benevolent Mother Nature. I, therefore, say that this ceiling should be lowered. As you know, the burning problem of the day is the land tenure problem. I would like to say that we must do something to solve this problem and the ceiling should be lowered.

Coming to prohibition, I would like to say that prohibition should be introduced throughtout the length and breadth of Karnatak. Sri Mallaradhya, while speaking, referred to the policy of Government as that of "Ardha Nareeshwara". I should say, it is both a woman and a man. It is man where it is introduced in rural areas, because it has done positive good to the Harijans. This is my sincere opinion and all those who have seen the working of this prohibition will say the same thing. But, in labour areas like K.G.F., it has become a woman, as the labourers after day's hard work require the drink to relieve them of the stress and strain of hard work.

Coming to the ratio of reservation, I say that ratio of reservation should be kept up in all concerns of Government, either partially owned or fully owned by Government.

Coming to the statement made by our exhalted leader Sri Najalingappa, that there are no deserving candidates available for the Public Service Commission, I would say that there are deserving people. The only thing is that he should give his heart to this problem.

Lastly, Sir, I say that as a matter of constitutional right we are asking for all these things and here I would like to say that till the period provided in the Constitution is over we want all these concessions, and Demands for the same.

Only one word more and it is this. It is very gratifying to note the statement of Sri Nijalingappa, that he would fight out casteism out of this soil. In this connection I would like to say that we are indeed blessed to have Sri Nijalingappa. Really, he is a Sharana Nijalingappa. I should like to suggest that he should organise a cosmopolitan Mutt of which he should alone become the presiding deity and eradicate casteism from this soil. With these words I thank you, Mr. Speaker and resume my seat.

*SRI C. M. ARUMUGHAM (Kolar Gold Fields-S.C.).—Mr. Speaker, there was a storm before and let there be calm. Therefore I will be very calm and put one or two grievances as regards rural development schemes and then I will finish my speech.

It is a known fact that as regards rural development, Government, either in the First Five Year Plan or Second Five-Year Plan, is spending money mostly in the town or city areas. So far as rural parts are concerned, they are still as they were.

SRI R. CHENNIGARAMAIAH.—Rural development is only for rural areas.

SRI C. M. ARUMUGHAM.—Everywhere you find that the houses constructed either by a Caste Hindu or a Brahmin are not good and so instead of spending money only for the Scheduled Castes and creating hatred, I suggest that it is better for the Government to increase the amount so that it may be given both to the Scheduled Castes and Caste Hindus. I will give one specific instance with regard to the spending of the amount. Before that I want to

know whether I have permission to speak for only ten minutes?

Mr. SPEAKER.—Yes, for everybody.

Sri C. M. ARUMUGHAM.—Usually you allow one or two minutes more.

Some amount is fixed for each taluk for the construction of houses and some times the Taluk Amildars get prejudiced while spending the amount. Last year, instead of giving Rs. 300 in Bangarpet the Amildar gave only Rs. 150. He has not given another Rs. 150. God alone knows what happened to another Rs. 150. In Bangarpet Taluk 70 families had applied for construction of houses. He has not given one pie even to one family. He says "when you have constructed a house why do you want money?". If a person says that he has no house the Amildar says "complete the house and come". After the House is completed he says "the house is completed. Why do you want money?" This time he has made part payments like Rs. 70, 80. etc., He must give materials worth Rs. 300. Instead of that he has given Rs. 70 or Rs. 80. I have also brought this to the notice of the Director of Social Welfare. There is a lot of corruption even in the distribution of the amount.

I therefore suggsest that the Amildar may be given amounts for distribution to all communities so that he may not be prejudicial to one community. Then he will take some interest. Otherwise the amount lapses. Sometimes he gives only a portion of the amount and sometimes he never gives the amount.

Sri R. CHENNIGARAMAIAH.—I have already said that a committee is going to be appointed very soon in this behalf.

Sri C. K. RAJAIAH SETTY (Chicknaikanhalli).—Till then should the amount go to waste?

Sri R. CHENNIGARAMAIAH.—No.

Sri C. M. ARUMUGHAM.—The Government may appoint a committee. I have seen with my own eyes. If the Hon'ble Minister wants to help the Scheduled Castes and Scheduled Tribes alone there will not be co-oepration. Consult the Chief Minister and your colleagues and increase the amount and simultaneously help the caste Hindus also.

Now coming to providing drinking water wells, in Kolar District there are about 100 villages where there are no wells. The Caste Hindus and Scheduled classes take water form a tank or pond. You talk much of Five-Year Plans and you have been proud of them; if you really want to help the rural people you must at least provide them with wells instead of spending lakhs of rupees for towns on water supply schemes. You had better spend more money on wells in the villages which are about 100 in Kolar District.

As roads in villages, there are no proper roads in villages and even approach roads are not there. You have granted money for district relief work and in taluks, the Amildars have to spend money for the development of these approach roads. While doing so, instead of giving the work to village panchayets, it is given to a contractor. There is a regular contractor and he makes a lot of money.

The Health Minister said yesterday that in rural parts there was no medical aid. I can only suggest that there must be a mobile dispensary which must go to every village at least once in a week and attend to patients. If any person happens to fall ill he has now to go to headquarters by bullock cart or sometimes by walk. I hope the Minister in charge will kindly bear this in mind if he wants to do some rural development work for the benefit of the people.

So far as the constitutional right is concerned, of course, the Constitution provides various things both for Scheduled Castes and backward communities. You say there is reservation in appointments. Before speaking on that I wish to say that I am not for reservation of seats in the Legislature, in the Parliament or in the Minicipalities or in the District Boards. If there is reservation in the Legislature you will not be able to do anything. You will have to depend on the mercy of the people. If there is no caste system or untouchability and no reservation, the candidate having merit will be returned. According to the strength of the population candidates in other communi-

(SRI C. M. ARUMUGHAM)

ties are returned. But why should there be reservation of seats for Scheduled Castes alone? Even the Chief Minister is interested in the upliftment of the Scheduled Castes and he tries to help these people. But so far as reservation is concerned he is bound by the Constitution. If there had been no constitutional provision there would not have been 27 members in this House. If there was no convention that there must be a Harijan Minister I do not think the Hon'ble Sri Chennigaramaiah would have had the honour to sit in the Treasury Benches. I want that reservation must be done away with.

In the services today for the past ten years there is only one I.A.S. officer for the whole State and there is no I.P.S. Officer at all belonging to the Scheduled Castes. I do not know what has happened. In the gazetted cadre you can find only 2.5 per cent and in the non-gazetted cadre only 5 per cent. Even in the labour cadre employed in the Government industries Scheduled Castes or Backward Classes are not able to get 18 per cent. I do not know how long it will take. I am therefore suggesting that there must be a committee.

MR. SPEAKER.—Hon'ble Member's time is up.

SRI C. M. ARUMUGHAM.—I have not finished a quarter of my speech.

MR. SPEAKER.—The Hon'ble Minister can take a couple of minutes. I do not want any member to sit down even without finishing his sentence. I will be lenient to that extent.

SRI C. M. ARUMUGHAM.—Therefore in regard to appointment and promoton also there must be a committee to protect the constitutional rights of the Scheduled Castes and the Scheduled Tribes. There is reservation of 18 per cent for Scheduled Castes and Scheduled Tribes. The Government Order dated 14th February 1958 says that out of that, 15 per cent shall be reserved for Scheduled Castes and the remaining 3 per cent for Scheduled Tribes, but this notification does not make the position quite clear. If there are not a sufficient number of Scheduled Caste candidates what should be done? or if there are not enough Scheduled Tribe candidates what should be done? The Government order says that it should go to the backward communities. But I would strongly urge that if a sufficient number of Scheduled Caste or Scheduled Tribe candidates do not come forward in the first advertisement, the Public Service Commission should readvertise the posts till they get the required number of those candidates. Last time, they advertised 250 First Division Clerks from Scheduled Castes and Scheduled Tribes, but only 25 applicants were there from these communities. Do they mean to say that there are not candidates among those communities who want jobs? There are, but they are not aware of the vacancies. Therefore, until you get the required quota, you must go on advertising. Then there are agencies like the Harijan League, etc. Through them also they must advertise in the villages that Government want some candidates from these communities for appointment.

As regards promotion also if one community is concentrated in a chain of successive posts from the Deputy Commissioner to the clerk, we cannot expect any justice to be done for the Scheduled Castes and Scheduled Tribes and backward communities. For instance, in Kolar District the Deputy Commissioner, the Sub-Divisional Officer, the Executive Engineer and even the Personal Asisistant to the Deputy Commissioner all belong to one community. Naturally the whole of the Scheduled Castes, Scheduled Tribes and backward communities fear that they would not get their rightful quota. To rectify this position and to protect the constitutional rights of these backward people, there must be a committee appointed.

Our Government spends about one-fifth of the budget on education. In this connection I want to say something about scholarships.

MR. SPEAKER.—The Hon'ble member's time is up.

SRI C. M. ARUMUGHAM.—As regards appointment of individual officers, my experience is that each

officer wants to appoint the people of his own community. I am told that even the Ministers, including our Minister Sri Chennigaramaiah, appoint their own community men as their Personal Secretaries. If that is the case with Ministers, how can we expect the other officers to be above this temptation?

Mr. SPEAKER.—You said that the Minister for Backward Classes was your own man. Do you mean to say that the other Ministers are not your men?

Sri C. M. ARUMUGHAM.—In the matter of scholarship, the Scheduled Castes and Scheduled Tribes have suffered. No doubt they are getting scholarships. In the Medical College at Bangalore a Scheduled Caste candidate has to pay Rs. 500 in the beginning from his pocket; he will get this sum as scholarship only at the end of the year. It is very difficult for him to find this money to pay in the beginning. A committee must be formed to help these people. I do not know what the Director of Social Welfare is doing. He is not taking any interest in these community candidates. I do not know what kind of social welfare he is doing.

When the previous Government was in office, there was a practice of sending backward community candidates to foreign countries for advanced studies. Actually before the Nijalingappa Ministry came to power there was an order passed by the previous Government on 27th October to send one Scheduled Caste candidate to Japan to study certain subjects, but when this Government came to power it cancelled that order. I do not know why. My feeling is that unless we reserve some of the high executive posts for Scheduled Castes and Scheduled Tribes, the suffering of these people will not be removed.

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು-ಅನುಸೂಚಿತ ಜಾತಿಗಳು).—ಸ್ವಾಮಿ, ಸರ್ಕಾರದವರು ನಮ್ಮ ಮುಂದಿಟ್ಟಿರುವ ಗ್ರಾಮಾಭಿವೃದ್ಧಿ ಯೋಜನೆಯ ಡಿಮ್ಯಾಂಡಿನ ಒಂದು ಕೋಟಿ 46 ಲಕ್ಷ 90 ಸ್ತಾವಿರ ರೂಪಾಯಿಗಳನ್ನು ಅನುಮೋದಿಸುತ್ತಾ ಗ್ರಾಮಾಭಿವೃದ್ಧಿಯ ವಿಚಾರದಲ್ಲಿ ಕೆಲವು ವಿಷಯಗಳನ್ನು ಹೇಳುತ್ತೇನೆ. ನಮ್ಮ ಮೈಸೂರು ರಾಜ್ಯ ಹಳ್ಳಿಗಾಡಿನ ರಾಜ್ಯ. ಹಳ್ಳಿಗಾಡಿನ ಜನಸಂಖ್ಯೆ, ಶ್ರೀ ಚಾಮಯ್ಯನವರು ಹೇಳಿದಹಾಗೆ ಜಾಸ್ತಿಯಾಗಿದೆ. ಹಳ್ಳಿಗಾಡುಗಳು ಉದ್ಧಾರವಾಗಬೇಕೆಂದು ನಾವು ಭರತಖಂಡವನ್ನು ಪರಕೀಯರಿಂದ ತೆಗೆದುಕೊಂಡಾಗಾಯ್ತು ನಿಂದಲೂ ಹೇಳುತ್ತಿದ್ದೇನೆ. ಈಗಾಗಲೆ ನಮ್ಮ ಇಂಡಿಯಾ ಸರ್ಕಾರದವರು ರಾಷ್ಟ್ರೀಯ ವಿಸ್ತರಣಾ ಯೋಜನೆಯೊಂದನ್ನು ತಯಾರಿಸಿ ಅನೇಕ ಕಡೆ ಹಳ್ಳಿಗಾಡುಗಳನ್ನು ಸ್ವಲ್ಪ ಅಭಿವೃದ್ಧಿಸ್ಥಿತಿಗೆ ತರುತ್ತಿದ್ದಾರೆಂದು ಕಾಣಬರುತ್ತಿದೆ ಈ ರೀತಿಯಾದ ಯೋಜನೆಗಳು ಮುಂದೆಯೂ ಕೂಡ ಹೆಚ್ಚಾದರೆ ನಮ್ಮ ನಾಡಿನ ಹಳ್ಳಿಯ ಅಭಿವೃದ್ಧಿ ಚೆನ್ನಾಗಿ ಆಗುತ್ತದೆಂದು ನಾನು ಭಾವಿಸುತ್ತೇನೆ. ಈಗ ಇಂಡಿಯಾ ಸರ್ಕಾರದ ಹಣವಲ್ಲದೆ ನಮ್ಮ ಮೈಸೂರು ಸರ್ಕಾರದವರು ಹಳ್ಳಿಯ ಅಭಿವೃದ್ಧಿಗಾಗಿ ಒದಗಿಸಿರತಕ್ಕಂಥ ಹಣ ಬಹಳ ಕಡಮೆ. ಈ ಹಣವನ್ನು ನಮ್ಮ ದೇಶದ ಹಳ್ಳಿಗಳಿಗೆ ಹಂಚಿದರೆ ಪ್ರತಿಯೊಂದು ಹಳ್ಳಿಗೂ ಬಹಳ ಕಡಮೆ ದೊರೆಯುತ್ತದೆ; ಅದು ಸಾಲದು ಎಂದು ನಾನು ಹೇಳಬಯಸುತ್ತೇನೆ. ಮಾನ್ಯ ಹಣಕಾಸಿನ ಮಂತ್ರಿಗಳು ಈ ಡಿಮ್ಯಾಂಡನ್ನು ಸಭೆಯ ಮುಂದಿಡುವಾಗ ಬಜೆಟ್ಟಿನಲ್ಲಿ ಇದಕ್ಕೆ ಕೊನೆಯ ಪಕ್ಷ ವಿದ್ಯಾಭ್ಯಾಸಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದಾರೋ ಅದರ ಅರ್ಧ ಭಾಗದಷ್ಟನ್ನಾದರೂ ಒದಗಿಸಬೇಕಾಗಿತ್ತು, ಈಗಾದರೂ ಕೂಡ ಈ ಬಾಬಿಗೆ ಹೆಚ್ಚು ಹಣ ಒದಗಿಸಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

3 P.M.

ಸ್ವಾಮಿ, ಹಳ್ಳಿಗಾಡಿನಲ್ಲಿ ಕುಡಿಯುವ ನೀರಿನ ತೊಂದರೆ ಎಷ್ಟಿದೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಸುಮಾರು 30 ಅಡಿ ತೆಗೆದರೆ ನೀರು ಬೇಕಾದಷ್ಟು ಬರುತ್ತದೆ. ಮಳೆಗಾಲದಲ್ಲಿ ಹಾಸನ ಜಿಲ್ಲೆಯಲ್ಲಿ ವಿಪರೀತ ಮಳೆಯಾದರೂ ಕೂಡ ಬೇಸಿಗೆಯಲ್ಲಿ ನೀರಿನ ತೊಂದರೆ ಇದೆ. 80 ಅಡಿ ಆಳ ತೆಗೆದರೂ ಬಾವಿಯಲ್ಲಿ ನೀರು ಬರುವುದಿಲ್ಲ. ನಿಜವಾಗಿ ಹೇಳಬೇಕಾದರೆ ಮಲೆನಾಡಿನಲ್ಲಿ ಕುಡಿಯುವ ನೀರಿನ ಸ್ಥಿತಿ ಬಹಳ ಚಿಂತಾಜನಕವಾಗಿದೆ. ಆದುದರಿಂದ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವದಕ್ಕೋಸ್ಕರ ಈ ಬಜೆಟ್ಟಿನಲ್ಲಿ ಇನ್ನೂ ಹೆಚ್ಚಿಗೆ ಹಣ ಒದಗಿಸಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಏಕೆಂದರೆ ಮನುಷ್ಯನು ಒಂದು ದಿವಸ ಊಟವಿಲ್ಲದೆ ಇರಬಹುದು. ಆದರೆ ಒಂದು ಚೆಂಬು ನೀರು ಕುಡಿದು ಇರಬೇಕಾಗುತ್ತದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಹೆಚ್ಚಾಗಿ ಹಣ ಖರ್ಚುಮಾಡಿ ನೀರಿನ ಸೌಕರ್ಯವನ್ನು ಒದಗಿಸುತ್ತಾ ಇದ್ದೀರಿ. ಆದರೆ ಹಳ್ಳಿಗಾಡಿನ ಬಹು ಸಂಖ್ಯಾತ ಜನರಿಗೆ ಗ್ರಾಮಗಳಲ್ಲಿ ಕುಡಿಯುವ ನೀರಿನ ಸೌಕರ್ಯವನ್ನು ಒದಗಿಸಿ ಕೊಡಬೇಕೆಂದು ಕಳೆದ 10 ವರ್ಷಗಳಿಂದ ಒಂದೇ ಸಮ ಹೇಳುತ್ತಲೇ ಇದ್ದೇವೆ. ಹೆಚ್ಚಿಗೆ ಹಣ ಕೊಟ್ಟು ಕುಡಿಯುವ ನೀರಿನ ಸೌಕರ್ಯ ಒದಗಿಸಿಕೊಡದೆ ಇದ್ದರೆ ಹಳ್ಳಿಗಾಡಿನ ಸುಧಾರಣೆಯಾಗುವುದಿಲ್ಲ. ಇಂಡಿಯಾ ಸರಕಾರದಿಂದ ಆಗಲಿ, ಜನಗಳಿಂದ ಸಾಲವನ್ನಾದ್ದರೂ ಎತ್ತಿ ಬೆಂಗಳೂರಿನಂಥ ದೊಡ್ಡ ಪಟ್ಟಣಗಳಿಗೆ ಹೆಚ್ಚಾಗಿ ಹಣ ಖರ್ಚುಮಾಡಿ ನೀರಿನ ಸೌಕರ್ಯವನ್ನು ಮಾಡುತ್ತಾ ಇದ್ದೀರಿ ಹಾಗೆ ಪಟ್ಟಣಗಳಿಗೆ ಆಗಬಾರದೆಂದು ನಾನು ಹೇಳುವುದಿಲ್ಲ. ಇವೊತ್ತಿನ ದಿವಸ ಹಳ್ಳಿಗಳೊಳಗೆ ಜನರ ಪರಿಸ್ಥಿತಿ ಏನು ಇದೆ ಎಂಬುದನ್ನು ನೀವು ನೋಡಿದಂತಿಲ್ಲ. ಹಾಸನ ಜಿಲ್ಲೆಯನ್ನೇ ತೆಗೆದುಕೊಳ್ಳೋಣ. ಕುಡಿಯುವ ನೀರಿನ ಬಾವಿಗಳ ಸಲುವಾಗಿ ಎಷ್ಟೋ ಅರ್ಜಿಗಳು ಸರಕಾರಕ್ಕೆ ಬಂದಿವೆ. ಕೆಲವು ಅರ್ಜಿಗಳು ಡೆಪ್ಯೂಟಿ ಕಮಿಷನರ್ ಆಫೀಸಿನ

(ಶ್ರೀ ಎಚ್. ಕೆ. ಸಿದ್ದಯ್ಯ)

ಲ್ಲಿಯೇ ಬಿದ್ದುಕೊಂಡಿವೆ. ಈಗ ಹಣವಿಲ್ಲ ಎಂದು ಕೆಲವು ಸಾರಿ ಉತ್ತರ ಕೊಡುತ್ತೀರಿ. ಆದಷ್ಟು ಜಾಗ್ರತೆ ಹಳ್ಳಿಗಾಡಿನ ಜನಗಳಿಗೆ ಕುಡಿಯುವ ನೀರಿನ ಕೊರತೆಯನ್ನು ಹೋಗಲಾಡಿಸಲು ಸಾಕಷ್ಟು ಹಣ ಒದಗಿಸಿ, ನೀರಿನ ತೊಂದರೆಯನ್ನು ಪರಿಹರಿಸಬೇಕು ಎಂದು ಈ ಸಂದರ್ಭದಲ್ಲಿ ನಾನು ಬಹಳ ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ರಸ್ತೆಗಳ ವಿಚಾರವಾ ಹೇಳುತ್ತೇನೆ. ಡಿಸ್ಟ್ರಿಕ್ಟ್ ಬೋರ್ಡ್ ರಸ್ತೆಗಳನ್ನು ಮಾಡಿದ್ದಾರೆ. ಆದರೆ ಅದಕ್ಕೆ ರುವ ಗ್ರಾಂಟು ಸಾಲದು. ನಮ್ಮ ಸಂಸ್ಥಾನದಲ್ಲಿ ಅನೇಕ ಕಡೆಗಳಲ್ಲಿ ನಂತೆಗಳು ಆಗುತ್ತವೆ. ಅಂಥ ಸ್ಥಳಗಳಲ್ಲಿ ರಸ್ತೆಗಳನ್ನು ಸರಿಯಾಗಿಮಾಡಿಲ್ಲ. ಮಾಡಿ ದಂಥ ರಸ್ತೆಗಳ ಮೇಲೆ ಗಿಡಗಳು ಬೆಳೆದು ಮೊದಲು ರಸ್ತೆ ಇದ್ದುದು ಸಹ ಗೊತ್ತಾಗುವುದಿಲ್ಲ. ಈ ರಸ್ತೆಯ ನಿರ್ಮಾಣದ ಕೆಲಸದಲ್ಲಿ ಅನೇಕ ತೊಂದರೆಗಳು ಇರ ಬಹುದು. ಈಗ ಕೊಡುತ್ತಿರುವ ಹಣದ ಸಹಾಯ ಸಾಲದು; ಆದ್ದರಿಂದ ಮುಖ್ಯವಾಗಿ ಹೆಚ್ಚು ಹಣ ರಸ್ತೆ ಗಳಿಗಾಗಿ ಒದಗಿಸಬೇಕು, ಎಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತೇನೆ.

ಈಗ ವಿಶಾಲ ಮೈಸೂರು ರಾಜ್ಯ ರಚನೆಯಾಗಿದೆ. ಇದರಲ್ಲಿ ಹಳೆಯ ಮೈಸೂರು ಪ್ರದೇಶ ಬೇರೆ, ಹೊಸ ಮೈಸೂರು ರಾಜ್ಯ ಬೇರೆ ಎಂದು ಹಿಂದುಳಿದ ವರ್ಗದ ಜನರಲ್ಲಿ ಎರಡು ಭಾಗ ಲೆಕ್ಕಾಚಾರ ಮಾಡಿ ಹೇಳು ವುದು ಸರಿಯಲ್ಲ. ಒಂದೇ ಒಂದು ವಿಶಾಲ ಮೈಸೂರು ರಾಜ್ಯವೆಂದು ಹೇಳಬೇಕು. ಹಳೆಯಮೈಸೂರು ಹೊಸ ಮೈಸೂರು ಎಂದು ಪದಗಳನ್ನು ಉಪಯೋಗಿಸುತೇವೆ. ಆದರೆ ಅದು ಹಾಗಾಗಬಾರದು. ಈಗ ಒಂದೇ ರಾಜ್ಯ ವಾಗಿದೆ. ದೇಶವು ಎಲ್ಲ ಒಂದೇ. ಆದ್ದರಿಂದ ದೇಶ ದಲ್ಲಿರತಕ್ಕಂಥ ಎಲ್ಲ ಜನರು ಒಂದೇ ಎಂಬ ಸಮಗ್ರ ಭಾವನೆಯಿಂದ ತಿಳಿದುಕೊಂಡು ಹೇಳಬೇಕು.

ಇನ್ನು ನಮ್ಮ ಮೈಸೂರು ಸರಕಾರವು ಹಿಂದುಳಿದ ವರ್ಗದವರ ಅಭಿವೃದ್ಧಿಗಾಗಿ ಬಹಳ ಕಾಲದಿಂದ ಹಣ ಖರ್ಚುಮಾಡಿ ಮುಂದಕ್ಕೆ ತರಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಈ ಪ್ರಯತ್ನ ನೋಡಿದರೆ ನನಗೆ ಬೇಜಾರು ಆಗುತ್ತವೆ. ಹಿಂದುಳಿದವರ್ಗದ ಜನಗಳ ಅಭಿವೃದ್ಧಿಯವಿಚಾರದಲ್ಲಿ ಒಂದು ಶಾಖೆ ಇದೆ, ಒಬ್ಬ ಮಂತ್ರಿಗಳೂ ಇದ್ದಾರೆ, ಎಷ್ಟೋ ಅಧಿಕಾರಿಗಳೂ ಇದ್ದಾರೆ. ವಿದ್ಯಾಭ್ಯಾಸಕ್ಕೋಸ್ಕರ ಒಂದು ಶಿಕ್ಷಣ ಸಮಿತಿ ಇದೆ. ದುಡ್ಡು ಖರ್ಚುಮಾಡಿ ಒಂದು ವ್ಯಾನ್ ಕೊಟ್ಟಿದ್ದಾರೆ. ಬೇಕಾದಷ್ಟು ಪ್ರಚಾರ ಕೆಲಸ ನಡೆ ಯುತ್ತಿದೆ. ವಿಶಾಲ ಮೈಸೂರು ರಾಜ್ಯದಲ್ಲಿ ಸುಮಾರು 50 ಲಕ್ಷ ಜನರು ಹಿಂದುಳಿದ ವರ್ಗದ ಜನರು ಇದ್ದಾರೆ. ಆದರೆ ಈ ಜನರ ಉದ್ಧಾರ ಮಾಡಬೇಕು ಎಂದು ಒಂದು ಸರಿಯಾದ ಯಾವುದೊಂದು ಪ್ರಚಾರ ಕಾರ್ಯ ನಮ್ಮ ಸರಕಾರ ಇದುವರೆಗೆ ಕೈಕೊಂಡಿಲ್ಲ. ಹಳ್ಳಿಗಳಿಗೆ ಬಂದು ನೋಡಬೇಕು. ಜನರು ಸ್ವಲ್ಪನಹ ಮುಂದಕ್ಕೆಬಂದಿಲ್ಲ. ಶೇಕಡಾ 75 ರಷ್ಟು ಹರಿಜನರು ಹಿಂದುಳಿದಿದ್ದಾರೆ ಎಂದು ನಾನು ಹೇಳುತ್ತೇನೆ. ಮಲೆನಾಡಿನಲ್ಲಿ ಅವರಿಗೆ ಇರಲು ಸರಿಯಾದ ಮನೆಗಳು ಇಲ್ಲ. ಹರಿಜನರಿಗೆ ಒಂಬತ್ತು ತಿಂಗಳು ಕಣ್ಣಲ್ಲಿ ರಕ್ತ ಬರುತ್ತದೆ ಮನೆಗಳು ಇಲ್ಲದೆ ಕಷ್ಟಪಡುತ್ತಿದ್ದಾರೆ. ವಿದ್ಯಾಭ್ಯಾಸ ಸೌಕರ್ಯವಿಲ್ಲ. ಹರಿಜನರಿಗೆ ಅನೇಕ ತೊಂದರೆಗಳು ಇವೆ. ಹರಿಜನರಿಗೆ ಇರುವ ಕಷ್ಟ ಇಷ್ಟೇ ಎಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಹರಿ ಜನರಿಗಾಗಿ ಸರಕಾರ ಬಡ್ಜೆಟ್ಟಿನಲ್ಲಿ ಒದಗಿಸಿದ ಹಣ ಬಹಳ ಕಡಮೆಯಾಗಿದೆ. ಆದಕಾರಣ ಇನ್ನೂ ಹೆಚ್ಚು ಹಣ ಒದಗಿಸಬೇಕು. ಹರಿಜನರಿಗಾಗಿ ಸ್ಕಾಲರ್‌ಷಿಪ್ ಹೆಚ್ಚಾಗಿ ಕೊಡಬೇಕು. 30 ವರ್ಷಗಳಿಂದ ಎಷ್ಟು ಕೊಡುತ್ತಿದ್ದರೋ ಅಷ್ಟೇ ಇದೆ. 15 ರೂಪಾಯಿ ಸ್ಕಾಲರ್‌ಷಿಪ್ ಹೇಗೆ ಸಾಕಾಗುವುದು? 50 ಅಥವಾ 100 ರೂಪಾಯಿಗಳನ್ನಾದರೂ ಕೊಡಬೇಕು. ಹರಿಜನ ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ಜಾಗಸಿಕ್ಕುವದಿಲ್ಲ, ಇದನ್ನು ಮನಗಂಡು ಇನ್ನು ಹೆಚ್ಚೆಚ್ಚು ವಿದ್ಯಾಭ್ಯಾಸ ಕ್ಕೋಸ್ಕರ ಮಕ್ಕಳನ್ನು ಶಾಲೆಗಳಲ್ಲಿ ಸೇರಿಸಿಕೊಳ್ಳುವ ಹಾಗೆ ಪ್ರಯತ್ನಮಾಡಬೇಕು.

ಅರಸೀಕೆರೆ, ಗಂಡಸಿ ಭಾಗ ಇವೆಲ್ಲ ದೊಡ್ಡವ್ಯಾ ಪಾರಸ್ಥಳಗಳಾಗಿವೆ. ನಂತೆಗಳು ದೊಡ್ಡ ಪ್ರಮಾಣದಲ್ಲಿ ನಡೆಯುತ್ತವೆ. ಈ ಪ್ರದೇಶವನ್ನು ಮಾನ್ಯ ಮಂತ್ರಿ ಗಳು ಬಂದು ನೋಡಿದ್ದಾರೆ. ಇಲ್ಲಿ ಕುಡಿಯುವ ನೀರಿನ ತೊಂದರೆ ಬಹಳ ಇದೆ. ಆದ್ದರಿಂದ ಜಾಗ್ರತೆಯಾಗಿ ಇಂಡಿಯಾ ಸರ್ಕಾರದವರಿಗೆ ಟೆಲಿಗ್ರಾಂ ಮೇಲೆ ಟೆಲಿಗ್ರಾಂ ಕಳಿಸಿ ಅವರ ಮಂಜೂರಾತಿ ಪಡೆದು, ನೀರಿನ ಅಭಾವವನ್ನು ಹೋಗಲಾಡಿಸಲು ಸೂಕ್ತ ಕ್ರಮ ತೆಗದುಕೊಳ್ಳಲು ಜಾಗ್ರತೆ ಹೆಚ್ಚು ಹಣ ಒದಗಿಸ ಬೇಕು ಎಂದು ಈ ಸಂದರ್ಭದಲ್ಲಿ ನಾನು ಸರಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ,

ಸ್ವಾಮಿ, ಹರಿಜನರಿಗೆ ಮನೆಗಳನ್ನು ಕಟ್ಟಿಸಿ ಕೊಡುವ ವಿಚಾರದಲ್ಲಿ ನಾಲ್ಕಾರು ಮನೆಗಳನ್ನು ಕಟ್ಟಿ ಸಿದರೆ ಏನು ಪ್ರಯೋಜನವಾಗುತ್ತದೆ? ಒಬ್ಬ ಮಂತ್ರಿ ಗಳು ಬಂದಾಗ ಮನೆಗಳನ್ನು ಕಟ್ಟಿಸಬೇಕೆಂದು ಹೇಳುವರು, ಇನ್ನೊಬ್ಬ ಮಂತ್ರಿಗಳು ಬಂದಾಗ ಬೇಡ ಎಂದು ಹೇಳುವುದನ್ನು ನೋಡಿದರೆ ಬಹಳ ವ್ಯಸನವಾಗು ತ್ತದೆ. ಇಪ್ಪತ್ತಿನ ದಿವಸ ಎಷ್ಟು ದುಡ್ಡು ಬೇಕು ಲೆಕ್ಕಾ ಹಾಕಿ, ಕ್ಯಾಬಿನೆಟ್‌ನಲ್ಲಿ ಚರ್ಚೆಮಾಡಿ, ಬೇಡ ಎನ್ನುವ ದಿಲ್ಲ. ಆಗುವುದಿಲ್ಲ ಅಂದರೆ ಬಿಟ್ಟು ಆಚೆಗೆ ಬಂದುಬಿಡಿ. ಹರಿಜನರ ಉದ್ಧಾರವಾಗಬೇಕಾದರೆ ಕೆಲಸ ಜಾಗ್ರತೆ ಮಾಡಬೇಕು. ವಿದ್ಯಾಭ್ಯಾಸಕ್ಕಾಗಿ ಒಂದು ಚಳವಳಿ ಯನ್ನಾದರೂ ಮಾಡಿ ಹೆಚ್ಚು ಹಣ ಒದಗಿಸಿಕೊಟ್ಟು ಎಲ್ಲಾ ಸೌಕರ್ಯ ಸೌಲಭ್ಯಗಳನ್ನೂ ಹರಿಜನರಿಗೆ ಒದ ಗಿಸಿಕೊಡಬೇಕು ಎಂದು ಈ ಸಂದರ್ಭದಲ್ಲ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ನಿಜವಾಗಿ ಹರಿಜನರ ಉದ್ಧಾರವಾಗಬೇಕಾದರೆ 10 ಜನಗಳಿಗೆ ಮನೆ 4 ಜನರಿಗೆ ಜಮೀನು ಕೊಟ್ಟರೆ ಸಾಲದು. ಈ ವಿಚಾರದಲ್ಲಿ ಸರಕಾರ ಮನಸ್ಸು ಮಾಡಿ ಹಿಂದುಳಿದ ವರ್ಗದವರ ಉದ್ಧಾರವಾಗ ಬೇಕಾದರೆ ಹೆಚ್ಚಾಗಿ ವಿದ್ಯಾಭ್ಯಾಸ ಸೌಕರ್ಯಕ್ಕಾಗಿ ಇನ್ನೂ ಹೆಚ್ಚು ಹಣ ಖರ್ಚುಮಾಡಬೇಕು. ಎಷ್ಟು ಹಣ ಖರ್ಚು ಮಾಡಿದರೂ ಅದು ಕಡಮೆಯೇ ಆಗು ತ್ತದೆ. ಹೆಣ್ಣು ಮಕಳ ಹಾಸ್ಟೆಲ್ ಮೈಸೂರಿನಲ್ಲಿ ಮಾತ್ರ ಇದೆ; ಇನ್ನೆಲ್ಲಿಯೂ ಇಲ್ಲ. ವಿಶಾಲ ಮೈಸೂರಿನ ಉಳಿದ ಹೊಸದಾಗಿ ಬಂದ ಪ್ರದೇಶದಲ್ಲರಬಹುದು. ಅದು ನನಗೆ ಗೊತ್ತಿಲ್ಲ. ಈಗಾಗಲೇ ಚಿಕ್ಕಮಗಳೂರು—ಹಾಸನ ಇವುಗಳನ್ನು ಸೇರಿಸಿ ಒಂದು ಗರ್ಲ್ಸ್ ಹೋಮನ್ನು ತೆಗೆಯಬೇ ಕೆಂದು ಸುಮಾರು 10 ವರ್ಷಗಳಿಂದಲೂ ಕೇಳಿದ್ದೇನೆ. ಮೊನ್ನೆ ಮಂತ್ರಿಗಳು ಹಾಸನಕ್ಕೆ ಬಂದಾಗ್ಗೆ ಅಗಲೂ ಕೂಡ ಈ ವಿಚಾರವನ್ನು ತಿಳಿಸಿದ್ದೇನೆ. ಏಕೆಂದರೆ ಹೆಣ್ಣು ಮಕ್ಕಳು ವಿದ್ಯಾವಂತರಾದರೆ ಅವರು ತಮ್ಮ ಹೊಟ್ಟೆಯಲ್ಲಿ ಹುಟ್ಟುವ ಮಕ್ಕಳಿಗೆ ಸುಲಭವಾಗಿ ವಿದ್ಯಾಭ್ಯಾಸ ಮಾಡಿಸುತ್ತಾರೆ. ಸರ್ಕಾರಕ್ಕೆ, ನಮಗೆ, ಎಲ್ಲರಿಗೂ ಮುಂದೆ ಕಷ್ಟತಪ್ಪುತ್ತದೆ. ಆದ್ದ ರಿಂದ ದೇಶದಲ್ಲಿ ಅಲ್ಲಲ್ಲಿ ಮುಖ್ಯವಾಗಿ ಬೇಕಾದಷ್ಟು

ಹೆಣ್ಣುಮಕ್ಕಳ ಬೋರ್ಡಿಂಗ್ ಹೋಂಗಳನ್ನು ಕಡ್ಡಾಯವಾಗಿ ತೆಗೆದು ವಿದ್ಯಾಭ್ಯಾಸ ಮಾಡಿಸಿದರೆ ಅನ್ಪೃಶ್ಯತೆ ಹೋಗುತ್ತದೆ. ರಾಮಾಯಣದ 16 ಮತ್ತು 17ನೆಯ ಆರ್ಟಿಕಲ್ಸ್ ಪ್ರಕಾರ ಅನ್ಪೃಶ್ಯತೆ ಹೋಗಿದೆ ಎನ್ನುತ್ತಾರೆ. ನಾವು ಹೊಗಿಲ್ಲ ಎಂದರೆ ನಮ್ಮ ಸುಚೇತರಿಗೆ ಕೋಪಬರಬಹುದು. ಅನೇಕ ಕಡೆಯಲ್ಲಿ ಸರ್ಕಾರೀ ಹರಿಜನ ನೌಕರರುಗಳಿಗೆ ಮನೆ ಸಿಕ್ಕುತ್ತಾ ಇಲ್ಲ. ಇಂತಹ ವಿಚಾರಗಳು ಎಷ್ಟೋ ಇವೆ. ತಾಲ್ಲೂಕ್ ಕಚೇರಿಗಳಲ್ಲಿ ಕೆಲಸ ಮಾಡುತ್ತಿರುವ ಹರಿಜನ ಗುಮಾಸ್ತರಿಗೆ ಮನೆಗಳೇ ಸಿಕ್ಕುತ್ತಿಲ್ಲ. ಈ ಬಗ್ಗೆ ಪ್ರತಿಯೊಂದು ತಾಲ್ಲೂಕ್ ಹೆಡ್ ಕ್ವಾರ್ಟರಿನಲ್ಲೂ ನಮ್ಮ ಹರಿಜನ ನೌಕರರಿಗೆ ನುಮಾರು 25 ಕ್ವಾರ್ಟರುಗಳನ್ನು ಕಟ್ಟಿಸಬೇಕೆಂದು ನಾನು ರೆಪ್ರೆಸೆಂಟೇಟಿವ್ ಅಸೆಂಬ್ಲಿ ಸದಸ್ಯನಾಗಿದ್ದಾಗಿನಿಂದ ರಾಯಿತಿನಿಂದ ಸರ್ಕಾರದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ನನ್ನ ಸಲಹೆ ಇನ್ನೂ ಕೈಗೂಡಿಲ್ಲ. ಈ ಕೆಲಸ ಬಹು ಮುಖ್ಯವಾಗಿ ಆಗಬೇಕಾದುದು. ಪ್ರತಿಯೊಂದು ತಾಲ್ಲೂಕಿನಲ್ಲಿ ಈಗಲಾದರೂ ಕೊನೆಯಪಕ್ಷ 25 ಸರ್ಕಾರೀ ಕ್ವಾರ್ಟರುಗಳನ್ನು ಕಟ್ಟಬೇಕು. ಬರಿಯ ಬೆಂಗಳೂರಿನಲ್ಲಿಯೇ ಮನೆಗಳನ್ನು ಕಟ್ಟುತ್ತಿದ್ದಾರೆ. ಹಳ್ಳಿಗಾಡಿನಲ್ಲಿಯೂ, ತಾಲ್ಲೂಕುಗಳಲ್ಲಿಯೂ ಮನೆ ಇಲ್ಲದೆ ಜನ ಬಹಳವಾಗಿ ಪೇಚಾಡುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸರ್ಕಾರೀ ನೌಕರರಿಗೆ ಕ್ವಾರ್ಟರುಗಳನ್ನು ಕಟಿಸ್ಪಿ ಕೊಡಬೇಕು. ಈಗ ಮೈಸೂರು ವಿಶಾಲವಾಯಿತು. ಬಹಳ ಅಭಿವೃದ್ಧಿ ಕಾರ್ಯಗಳು ನಡೆಯಬೇಕೆಂದು ಹೇಳುತ್ತೇನೆ. ಹೈದರಾಬಾದಿನಿಂದ ಬಂದಿರುವ ಕೆಲವು ಅಧಿಕಾರಿಗಳಿಗೆ ಕನ್ನಡವೇ ಬರುವುದಿಲ್ಲ. ಅವರು ಕನ್ನಡವನ್ನು ಓದಿಲ್ಲ. ಈಗ ಹಾಸನ ಜಿಲ್ಲೆಗೆ ಒಬ್ಬ ಸಬ್ ಡಿವಿಜ್ಞ್ ಆಫೀಸರನ್ನು ಮತ್ತು ಒಬ್ಬ ಡೆಪ್ಯುಟಿ ಕಮಿಷನರನ್ನು ಹಾಕಿದ್ದಾರೆ. ಅವರಿಗೆ ಕನ್ನಡ ಅರ್ಜಿಗಳನ್ನು ಓದುವುದಕ್ಕೇ ಬರುವುದಿಲ್ಲ. ಇದರಿಂದ ಜನಗಳಿಗೆ ಬಹಳ ಕಷ್ಟವಾಗುತ್ತಿದೆ. ಆದ್ದರಿಂದ ಯಾವ ಯಾವ ಅಧಿಕಾರಿಗಳನ್ನು ಯಾವಯಾವ ಸ್ಥಳಗಳಲ್ಲಿ ನೇಮಕ ಮಾಡಬೇಕೆಂಬುದನ್ನು ಸರ್ಕಾರದವರು ದಯವಿಟ್ಟು ಯೋಚನೆಮಾಡಿ ನೇಮಿಸಬೇಕು. ನಮ್ಮ ಜಿಲ್ಲೆಗೆ ಕನ್ನಡ ಬರುವಂಥ ಸಬ್ ಡಿವಿಜ್ಞ್ ಆಫೀಸರನ್ನು, ತಹಸೀಲ್‌ದಾರರನ್ನು ಮತ್ತು ಡೆಪ್ಯುಟಿ ಕಮಿಷನರನ್ನು ನೇಮಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಅಮಿಲಿಯೊರೇಷ್ಞ್ ಇತ್ಯಾದಿಗಳಿಗೆ ಸರ್ಕಾರದವರು ಹಣವನ್ನು ಕೊಡುತ್ತಿದ್ದಾರೆ. ಅದು ಬಹಳ ಕಡಮೆ. ಒಂದೊಂದು ತಾಲ್ಲೂಕಿಗೆ ಈ ವರ್ಷ 500 ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದಾರೆ. ಅದರಂತೆ ಹೋಬಳಿಗೊಂದರಂತೆ 100 ರೂಪಾಯಿಗಳನ್ನು ಐದು ಹೋಬಳಿಗಳಿಗೆ ಕೊಡಬೇಕು. ಸಾಮಾನ್ಯವಾಗಿ ಈಗಾಲೇ ನಮ್ಮಲ್ಲಿ ಮುಕ್ಕಾಲು ಭಾಗ ವ್ಯವಸಾಯಗಾರರೇ ಜಾಸ್ತಿ. ಒಂದು ಜೊತೆ ಸರಿಯಾದ ಎತ್ತು ಬೇಕಾದರೆ 500 ರೂಪಾಯಿಗಳಿಗೆ ಕಡಮೆಇಲ್ಲ. ಹಾಗಿರುವಾಗ ಸರ್ಕಾರದವರು ಒಂದೊಂದು ಹೋಬಳಿಗೆ 100 ರೂಪಾಯಿಗಳನ್ನು ಮಾತ್ರ ಕೊಟ್ಟರೆ ಯಾವ ರೀತಿ ವ್ಯವಸಾಯಮಾಡಬೇಕು ? ವ್ಯವಸಾಯಗಾರರು ಸರ್ಕಾರದವರು ಎತ್ತನ್ನು ಕೊಡುತ್ತಾರೆಂಬ ಆಶೆಯಿಂದ ನೂರಾರು ಅರ್ಜಿಗಳನ್ನು ಹಾಕಿ ಕೊನೆಗೆ ನಿರಾಶೆಯಿಂದ ಹೋಗುತ್ತಿದ್ದಾರೆ. ಈ ಬಾಬಿಗೆ ಒದಗಿಸಿರುವ ಹಣವನ್ನು ಸರಿಯಾದ ರೀತಿಯಲ್ಲಿ ಕೊಡಿ. ಕೊಟ್ಯಂತರ ರೂಪಾಯಿಗಳನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಿದ್ದರೂ, ಹರಿಜನರ ಉದ್ಧಾರಕ್ಕಾಗಿ ಹೆಚ್ಚು ಹಣವನ್ನು ಓದಗಿಸಿರುವುದು ನಮ್ಮ ಕಣ್ಣಿಗೆ ಕಾಣುವುದೇ ಇಲ್ಲ. ಹಾಗಾಗಬಾರದು. ನಮ್ಮ ಮಂತ್ರಿಗಳು ಸರ್ಕಾರದಲ್ಲಿ ಹೊಡೆದಾಡಿ ಹೆಚ್ಚು ಹಣವನ್ನು ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಜನಾಂಗದ ಉದ್ಧಾರಕ್ಕೆಗಿ ಒದಗಿಸುವಂತೆ ಏರ್ಪಾಡು ಮಾಡುವುದಕ್ಕೆ ವಿಶೇಷವಾಗಿ ಶ್ರಮಿಸಬೇಕೆಂದು ಪ್ರಾರ್ಥಿಸುತ್ತೇನೆ. ಇಷ್ಟು ಮಾತುಗಳನ್ನು ಹೇಳುವುದಕ್ಕೆ ನನಗೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಟಿ. ಜಂಬಣ್ಣ (ದಾವಣಗೆರೆ).— ಅಧ್ಯಕ್ಷರೆ, ರೂರಲ್ ಡೆವಲಪ್‌ಮೆಂಟ್ ಅಥವಾ ಗ್ರಾಮಾಭಿವೃದ್ಧಿ ಯೋಜನೆಯ ನಲುವಾಗಿ ಸರ್ಕಾರದವರು ಈ ವರ್ಷ ಒಂದು ಕೋಟಿ 46 ಲಕ್ಷದ 96 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ನಿರ್ಧರಿಸಿದ್ದಾರೆ. ಈಗಿನ ಕಾಲದಲ್ಲಿ ನಮ್ಮ ಸರ್ಕಾರದವರು ಗ್ರಾಮಾಭಿವೃದ್ಧಿಕಾರ್ಯಗಳ ಬಗ್ಗೆ ಅತ್ಯವಶ್ಯವಾಗಿ ಹೆಚ್ಚಿನ ನಿಗಾ ಕೊಡಬೇಕಾದುದು ಒಂದು ಮುಖ್ಯಾಂಶವಾಗಿದೆ. ಒಂದು ಕೋಟಿ ನಲವತ್ತಾರು ಲಕ್ಷ ಚಿಲ್ಲರೆ ರೂಪಾಯಿಗಳನ್ನು ಒಳಗೊಂಡಿರುವ ಬಾಬುಗಳು ಯಾವುವು ಎಂದರೆ ಸೋಷಿಯಲ್ ವೆಲ್ ಫೇರ್ ರೂರಲ್ ಹೆಲ್ತ್ ಅಂಡ್ ಸ್ಯಾನಿಟೇಷ್ಞ್, ವಾಟರ್ ಸಪ್ಲೈ, ಹೌಸಿಂಗ್, ಅರ್ಬನ್ ಬಿಲಿಟಿ, ಎಜುಕೇಷ್ಞ್, ಮೊಬೈಲ್ ಹೆಲ್ತ್ ಯೂನಿಟ್ ಅಗ್ರಿಕಲ್ಚರ್ ಮತ್ತು ಕಮ್ಯೂನಿಕೇಷನ್ಸ್, ಇತ್ಯಾದಿ. ಬಡ್ಜೆಟ್ಟಿನಲ್ಲಿ ಈ ವಿಷಯಗಳು ಬಹಳ ಚೆನ್ನಾಗಿ ಎದ್ದು ಕಾಣುತ್ತಿವೆ. ಆದರೆ ಸರ್ಕಾರ ಗ್ರಾಮಾಭಿವೃದ್ಧಿಯ ಬಗ್ಗೆ ಎಷ್ಟುವಿಧವಾದ ಕ್ರಮಗಳನ್ನು ಕೈಗೊಂಡಿದೆ ಎಂದು ಕೇಳಿದರೆ, ಈ ಬಗ್ಗೆ ಸರ್ಕಾರದವರು ಎಷ್ಟರಮಟ್ಟಿಗೆ ಕೆಲಸಮಾಡಬೇಕಾಗಿತ್ತೋ ಅಷ್ಟರಮಟ್ಟಿಗೆ ಕೆಲಸಮಾಡಿಲ್ಲ ಎಂಬ ಭಾವನೆ ಸಹಜವಾಗಿ ಬರುತ್ತದೆ. ಅವರ ಅಭಿಪ್ರಾಯದಲ್ಲಿ ನಮ್ಮ ಗ್ರಾಮಗಳು ಎಲ್ಲೋ ದೇವಲೋಕ ಇದ್ದಹಾಗೆ ಇವೆಯೆಂದು ಭಾವಿಸಿರಬಹುದು. ನಮ್ಮ ಅನುಭವದಲ್ಲಿ ನಿಜವಾಗಿ ಹೇಳವುದಾದರೆ, ಅದು ಒಂದು ದೊಡ್ಡ ನರಕದಂತಿದೆ. ಎಷ್ಟೋಹಳ್ಳಿಗಳು ನರಕದ ರೂಪದಲ್ಲಿವೆಯೆಂದು ಹೇಳಿದರೆ ಏನೂ ತಪ್ಪಾಗಲಾರದು. ಗ್ರಾಮಾಭಿವೃದ್ಧಿಕಾರ್ಯಗಳಿಗೆ ಸರ್ಕಾರದವರು ಒಂದು ಕೋಟಿ, ಎರಡು ಕೋಟಿ, 50 ಲಕ್ಷ, ಈ ರೀತಿ ಹಣವನ್ನು ವೆಚ್ಚಮಾಡುತ್ತಾ ಬಂದಿದ್ದಾರೆ. ಇದರ ಪರಿಣಾಮ ಏನೂ ಫಲಕಾರಿಯಾಗಿಲ್ಲ. ಕೇವಲ ರೈತರ ಅಭಿವೃದ್ಧಿಗಾಗಿ ಸರ್ಕಾರದವರು ಎಷ್ಟೋ ಪ್ರಯತ್ನಗಳನ್ನು ಮಾಡುತ್ತಿದ್ದೇವೆ ಮತ್ತು ಎಷ್ಟೋ ಹಳ್ಳಿಗಳನ್ನು ನಿಜವಾಗಿ ಉದ್ಧಾರಮಾಡಿದ್ದೇವೆ ಎಂದು ಹೇಳುತ್ತಾರೆ. ಲೆಕ್ಕಹಾಕಿ ನೋಡಿದರೆ 100ಕ್ಕೆ ಒಂದು ಹಳ್ಳಿಯೋ, ಸಾವಿರಕ್ಕೆ ಒಂದು ಹಳ್ಳಿಯೋ ಸರಿಯಾದ ಸ್ಥಿತಿಯಲ್ಲಿರಬಹುದೆಂದು ಹೇಳಬಹುದು. ಸರ್ಕಾರದವರು ನಿಜವಾಗಿ ಅತ್ಯವಶ್ಯವಾಗಿ ರೈತರಿಗೆ ಆಗಬೇಕಾದಂಥ ಗ್ರಾಮದ ಅಭಿವೃದ್ಧಿಕಾರ್ಯಗಳನ್ನು ಬಹಳವಾಗಿ ಕಡೆಗಾಣಿಸಿದ್ದಾರೆ. ಇದನ್ನು ಒಂದೊಂದಾಗಿ ಹೇಳುವುದಾದರೆ, ಕಾಲವಿಳಂಬವಾಗುತ್ತದೆ. ಸರ್ಕಾರದವರು ನಿಜವಾಗಿ ಸುಮಾರು 10 ಕೋಟಿ ರೂಪಾಯಿಗಳನ್ನು ಗ್ರಾಮಾಭಿವೃದ್ಧಿ ಕಾರ್ಯಗಳಿಗೆ ಪ್ರತಿವರ್ಷವೂ ಮೀಸಲಾಗಿಡದೆ ಹೋದಲ್ಲಿ, ಗ್ರಾಮಗಳ ಅಭಿವೃದ್ಧಿ ಸಾವಿರಾರು ವರ್ಷಗಳಾದರೂ ಆಗುವುದಿಲ್ಲ. ಒಂದು ಬಾವಿ ಕೊಡಿಸಿದರೂ, ಒಂದು ರಸ್ತೆ ಮಾಡಿದರೂ,

(ಶ್ರೀ ಕೆ. ಟಿ. ಜಂಬಣ್ಣ)

ಅದು 5 ವರ್ಷಗಳವರೆಗೂ ಆಗುವುದೇ ಇಲ್ಲ. ಹಳ್ಳಿಗಾಡಿನ ಜನಗಳ ಪರಿಸ್ಥಿತಿ ಮಾನ್ಯ ಸದಸ್ಯರಿಗೆ ಗೊತ್ತಿದೆ. ಏಕೆಂದರೆ ಅನೇಕರು ಹಳ್ಳಿಗಾಡಿನ ಜನರ ಪ್ರತಿನಿಧಿಗಳಾಗಿದ್ದಾರೆ. ಕೆಲವು ವರ್ಷಗಳ ಹಿಂದೆ ಹಳ್ಳಿಗಳು ಉತ್ಪಮಸ್ಥಿತಿಯಲ್ಲಿದ್ದು ಈಗ ಕಾಡುಗಳಾಗಿ ಕಾಣುತ್ತಿವೆ. ಈಗ ಆ ರೀತಿ ಆಗಬಾರದು. ಎಲ್ಲಿ ಅಂತಹ ಪರಿಸ್ಥಿತಿ ಬರುತ್ತದೋ ಎಂಬ ಭಯ ನಮಗೆ ಕಾಣುತ್ತಿದೆ. ಇನ್ನು ಸೋಷಿಯಲ್ ವೆಲ್‌ಫೇರ್ ಏಂದು ಹೇಳುತ್ತಾರೆ. ಅದಕ್ಕೆ ಅಷ್ಟಾಗಿ ಸರ್ಕಾರದ ವರು ನಿಗಾ ಕೊಟ್ಟಿಲ್ಲ. ಎಫೆಕ್ಟಿವ್ ಪ್ರೊಗ್ರೆಸ್ ಏನು? ಎಷ್ಟೋ ಹಳ್ಳಿಗಳಲ್ಲಿ ಸೋಷಿಯಲ್ ವೆಲ್‌ಫೇರ್ ಪರಿಣಾಮಕಾರಿಯಾಗಿದೆ ಎಂದು ಬಾಯಲ್ಲಿ ಹೇಳುತ್ತಾರೆಯೇ ಹೊರತು, ಕಾರ್ಯದಲ್ಲಿ ಏನೂ ಮುಂದುವರಿದಿಲ್ಲ. ಇನ್ನು ರೂರಲ್ ಹೆಲ್ತ್ ಅಂಡ್ ಸ್ಯಾನಿಟೇಷನ್ ಬಗ್ಗೆ ಹೇಳುವುದಾದರೆ ಅನೇಕ ಗ್ರಾಮಗಳಲ್ಲಿ ಸರಿಯಾದ ರಸ್ತೆಗಳೇ ಇಲ್ಲ. ಸರಿಯಾದ ವಸತಿಗೃಹಗಳಿಲ್ಲ; ವಾಟರ್ ಸಪ್ಲೈ ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ಏನು ರೂರಲ್ ಹೆಲ್ತ್ ಅಂಡ್ ಸ್ಯಾನಿಟೇಷನ್ ಸರ್ಕಾರ ಮಾಡುತ್ತಿದೆಯೋ ನನಗೆ ತಿಳಿಯಲಿಲ್ಲ. ಯಾವಾಗ, ಎಷ್ಟು ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರುಗಳು ಹಳ್ಳಿಗಳನ್ನು ನೋಡುತ್ತಿದ್ದಾರೆಂಬುದು ನನಗೆ ಗೊತ್ತಿಲ್ಲ. ಒಂದು ವೇಳೆ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರುಗಳು ಈ ಬಗ್ಗೆ ಇನ್‌ಸ್ಪೆಕ್ಷನ್ ಮಾಡಬೇಕಾದರೆ, ಯಾವುದೋ ಕೆಲವು ದೊಡ್ಡ ದೊಡ್ಡ ರಸ್ತೆ—ಪಕ್ಕದ ಸಣ್ಣ ಪುಟ್ಟ ಹಳ್ಳಿಗಳಿಗೆ ಹೋಗುತ್ತಾರೆಯೇ ಹೊರತು ಹಳ್ಳಿಗಾಡಿನಲ್ಲಿ ಅವರ ಸಂಚಾರವಿಲ್ಲ.

ಇನ್ನು ವಾಟರ್ ಸಪ್ಲೈ ವಿಷಯವಾಗಿ ಶ್ರೀಮಾನ್ ಸಿದ್ದಯ್ಯನವರು ಹೇಳಿದ್ದಾರೆ. ನಾನು ಆ ವಿಷಯದಲ್ಲಿ ಮಾತನಾಡಲು ಅನಾವಶ್ಯಕವಾಗಿ ಕಾಲ ತೆಗೆದುಕೊಳ್ಳುವುದಿಲ್ಲ ಅಟಚಬಲಿಟಿ ಸಾಮಾನ್ಯವಾಗಿ ನಗರಗಳಲ್ಲಿ ವಿದ್ಯಾವಂತರಿರುವ ಸ್ಥಳಗಳಲ್ಲಿ ಸ್ವಲ್ಪಮಟ್ಟಿಗೆ ಜಾರಿಗೆ ಬಂದಿದೆ. ಹಳ್ಳಿಗಾಡಿನಲ್ಲಿ ಅದು ಇನ್ನೂ ಜಾರಿಗೆಬಂದಿಲ್ಲ. ಹೊರೆಯು, ಮಾದಿಗ ಎಂದು ಕರೆಯುವುದನ್ನು ಬಿಟ್ಟಿಲ್ಲ. ಅವರ ಗುಡಿಸಲುಗಳು ಅತಿ ಹೇಯವಾದ ಸ್ಥಿತಿಯಲ್ಲಿವೆ. ಅವರು ಉಟ್ಟ ಬಟ್ಟೆ ಬರೆಗಳನ್ನು ಶುಭ್ರವಾದ ಸ್ಥಿತಿಯಲ್ಲಿಟ್ಟುಕೊಳ್ಳುವ ವ್ಯವಸ್ಥೆ ಇಲ್ಲ. ವಿದ್ಯಾ ವ್ಯವಸ್ಥೆಯಲ್ಲಂತೂ ಯಾವ ರೀತಿಯಲ್ಲಿಯೂ ಮುಂದುವರಿದಂತೆ ಕಾಣುವುದಿಲ್ಲ. ನೂರಾರುವರ್ಷಗಳಹಿಂದೆ ಅವರು ಯಾವ ಸ್ಥಿತಿಯಲ್ಲಿದ್ದರೋ, ಈಗಲೂ ಅದೇ ಸ್ಥಿತಿಯಲ್ಲಿದ್ದಾರೆ.

ಗ್ರಾಮಗಳಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸುವುದಕ್ಕೆ ಯಾವ ವಿಧವಾದ ಸೌಲಭ್ಯಗಳನ್ನೂ ಮಾಡಿಕೊಟ್ಟಿಲ್ಲ. ಅದು ಪ್ರಚಾರಕ್ಕೆ ಬಂದಿಲ್ಲ. ಮುಂದೆ ನೂರಾರು ವರ್ಷಗಳಾದರೂ ಅಸ್ಪೃಶ್ಯತೆ ಹೋಗುವ ಭರವಸೆ ಇಲ್ಲ. ಅವರಿಗೇ ಪ್ರತ್ಯೇಕವಾದ ಸ್ಥಳ ಏರ್ಪಡಿಸಿ ಅಸ್ಪೃಶ್ಯರು ಎಂದು ಹೇಳಿ ಅವರನ್ನು ಹೊರಗಡೆ ಇಡುತ್ತಾರೆ. ಸವರ್ಣ ಹಿಂದೂಗಳ ಜೊತೆಯಲ್ಲಿ ಅವರು ಬದುಕಿ ಬಾಳುವಂತೆ ಮಾಡಬೇಕು. ಅವರಿಗೆ ಈಗ ಆಗುತ್ತಾ ಇರುವ ಹಿಂಸೆ ಕಡಮೆಯಾಗಬೇಕು. ಇಲ್ಲದೇ ಹೋದರೆ ಅದು ಎಂದಿಗೂ ಸಾಧ್ಯವಾಗುವುದಿಲ್ಲ. ಅವರಿಗೆ ಮನೆ ಕಟ್ಟಿಕೊಳ್ಳಲು ಒಂದು ಯೋಜನೆ ಮಾಡಿದ್ದೀರಿ. ಹಳ್ಳಿಗಳಲ್ಲಿ ನಟ್ಟ ಇಟ್ಟಿಗೆ ಸಿಕ್ಕುವುದಿಲ್ಲ. ಅವರು ಹಸಿ ಇಟ್ಟಿಗೆಯಿಂದ ಮನೆಗಳನ್ನು ಕಟ್ಟಿರುತ್ತಾರೆ. ಹಿಂದುಳಿದ ಜನಾಂಗದವರಿಗೆ ಡಿಫ್ರೆಸ್ ಕ್ಲಾಸ್ ಗ್ರ್ಯಾಂಟ್ ಅಂತ ಹೇಳಿ ಹಣ ಕೊಡುತ್ತೀರಿ. ಅದನ್ನು ಪಡೆಯಬೇಕಾದರೆ ತಾಲ್ಲೂಕು ಆಫೀಸಿಗೆ ವರ್ಷಗಟ್ಟಲೆ ಅಲೆದಾಡಬೇಕಾಗುತ್ತದೆ. ಸಕಾಲಕ್ಕೆ ಹಣ ಮಂಜೂರಾಗುವುದಿಲ್ಲ ಮತ್ತು ಇದಕ್ಕೆ ಮೀಸಲಾಗಿಟ್ಟಿರತಕ್ಕ ಹಣ ಬಹಳ ಕಡಮೆ, ಅದು ಹೆಚ್ಚಾಗಬೇಕು. ಅತಿ ಸುಲಭವಾಗಿ ಮತ್ತು ಜಾಗ್ರತೆಯಾಗಿ ಅವರಿಗೆ ಹಣ ದೊರಕಬೇಕು. ಆ ರೀತಿ ಏರ್ಪಾಡು ಮಾಡಬೇಕೆಂದು ಸೂಚಿಸುತ್ತೇನೆ. ಸಾಮಾನ್ಯವಾಗಿ ಹೌಸಿಂಗ್ ಎಂದರೆ ಎಲ್ಲಾ ಜಾತಿಯವರಿಗೂ ಅನ್ವಯಿಸುತ್ತದೆ. ಪಟ್ಟಣದಲ್ಲಿ ಹೌಸ್ ಬಿಲ್ಡಿಂಗ್ ಕಾರ್ಪೊರೇಷನ್‌ಗೆ ಬೇಕಾದಷ್ಟು ಹಣ ಕೊಡುತ್ತಾ ಇದ್ದೀರಿ. ಆದರೆ ಹಳ್ಳಿಗಳಲ್ಲಿ ಮನೆ ಕಟ್ಟುವವರಿಗೆ ಆ ಸೌಲಭ್ಯ ಮಾಡಿಕೊಡದೆ ಅವರನ್ನು ಏಕೆ ಕಡೆಗಣಿಸಿದ್ದೀರೋ ಗೊತ್ತಾಗುತ್ತಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ.—ನೀವು ಹೇಳುವ ಹೌಸಿಂಗ್ ಇದರಲ್ಲಿ ಬರುವುದಿಲ್ಲ.

ಶ್ರೀ ಕೆ. ಟಿ. ಜಂಬಣ್ಣ.—ನಾನು ಸಾಮಾನ್ಯವಾಗಿ ಎಲ್ಲರಿಗೂ ಮನೆಗಳನ್ನು ಕಟ್ಟಿಸಿಕೊಡುವ ಸ್ಕೀಂ ಏನಿದೆ ಆ ವಿಷಯವಾಗಿ ಮಾತನಾಡುತ್ತಾ ಇದ್ದೇನೆ. ಗ್ರಾಮಾಂತರಗಳಲ್ಲಿ ಮನೆಗಳನ್ನು ಕಟ್ಟಿಕೊಳ್ಳಲಿಕ್ಕೆ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ.

ಮೊಬೈಲ್ ಹೆಲ್ತ್ ಯೂನಿಟ್ಸ್ ಇರಬೇಕಾದದ್ದು ಬಹಳ ಅವಶ್ಯಕ. ಇಂತಹ ಸೌಕರ್ಯ ಅನೇಕ ಹಳ್ಳಿಗಳಲ್ಲಿ ಕಾಣುವುದಿಲ್ಲ. ಅಲ್ಲದೆ ನರ್ಸ್ ಮತ್ತು ಮಿಡ್‌ವೈಫ್‌ಗಳೂ ಸಹ ಸಿಕ್ಕುವುದಿಲ್ಲ. ಕೊನೆಯ ಪಕ್ಷ ಹತ್ತು ಹಳ್ಳಿಗೆ ಒಬ್ಬ ಮಿಡ್‌ವೈಫ್ ಆದರೂ ಇದ್ದಾರೆಯೇ ಎಂದರೆ ಅದೂ ಇಲ್ಲ. ಇದು ಹೆಚ್ಚಿನ ಖರ್ಚು ಬರತಕ್ಕ ವಿಷಯ ಅಲ್ಲ. ಇದಕ್ಕೆ ಸ್ವಲ್ಪ ಗಮನ ಕೊಡಬೇಕು. ಮೊಬೈಲ್ ಯೂನಿಟ್ ವ್ಯವಸ್ಥೆ ಮಾಡಿ ಪ್ರತಿಯೊಂದು ಹಳ್ಳಿಗೂ ವಾರಕ್ಕೆ ಒಮ್ಮೆ ಅಥವಾ ಮೂರು ದಿವಸ ಗಳಿಗೊಮ್ಮೆಯಾದರೂ ಭೇಟಿ ಕೊಟ್ಟು ಅಲ್ಲಿನ ಜನರಿಗೆ ಬೇಕಾದ ಔಷಧೋಪಚಾರ ಮಾಡಬೇಕೆಂದು ಹೇಳಿ ಸಲಹೆ ಮಾಡುತ್ತೇನೆ.

ಹಳ್ಳಿಗಳಲ್ಲಿ ರಸ್ತೆಗಳು ಆಗದ ಹೊರತು ಗತ್ಯಂತರವೇ ಇಲ್ಲ. ಗೊಬ್ಬರ, ಗೋಡು ಸಾಗಿಸುವುದಕ್ಕೆ ಮತ್ತು ಅಲ್ಲಿ ಬೆಳೆದ ದವಸ ಧಾನ್ಯಗಳನ್ನು ಪಟ್ಟಣಗಳಿಗೆ ಸಾಗಿಸುವುದಕ್ಕೆ ರಸ್ತೆಗಳ ಏರ್ಪಾಡು ಆಗಲೇಬೇಕು. ಈಗ ತಾವು ರಸ್ತೆಗಳಿಗಾಗಿ ಒದಗಿಸಿರ ವ ಹಣ ಉಳುವವರಿಗೆ ಕಣ್ಣೊರೆಸಿದಂತೆ ಇದೆ. ಆದ್ದರಿಂದ ಯಾವ ಕೆಲಸವೂ ಆಗುವುದಿಲ್ಲ.

ಕೆಲವು ಹಳ್ಳಿಗಳು ಜೌಗು ಪ್ರದೇಶದಲ್ಲಿವೆ. ದಾವಣಗೆರೆ ತಾಲ್ಲೂಕು ಕೆರೆಯಾಗಳ ಹಳ್ಳಿ ಪ್ರತಿ ವರ್ಷವೂ ಮಳೆಗಾಲದಲ್ಲಿ ನೀರಿನಲ್ಲಿ ಮುಳುಗುತ್ತದೆ. ಅದೇ ರೀತಿ ಹರಿಹರ ತಾಲ್ಲೂಕು ಸಾಲಕಟ್ಟಿ ಕೂಡ ಜೌಗು ಪ್ರದೇಶವಾಗಿದೆ. ಹಿಂದೆ ಈ ಎರಡು ಹಳ್ಳಿಗಳ ಸಲುವಾಗಿ ಜಿಲ್ಲಾ ಅಧಿಕಾರಿಗಳಿಗೆ ಕೇಳಿಕೊಂಡಿದ್ದೆ ಮತ್ತು ಹೋದ ವರ್ಷ ಇದೇ ಅಧಿವೇಶನದಲ್ಲಿ ಹಣ ಒದಗಿಸಿಕೊಡಬೇಕೆಂದು ಹೇಳಿದ್ದೆ. ಈ ಬಜೆಟ್‌ನಲ್ಲಿ ಎಲ್ಲಿ ನೋಡಿದರೂ ಯಾವ ಬಾಬಿನಲ್ಲಿ ಇದಕ್ಕೆ ಹಣ ಒದಗಿಸಿದ್ದೀರೋ ಗೊತ್ತಾಗುವುದಿಲ್ಲ. ಆದ್ದರಿಂದ ಇದಕ್ಕಾಗಿ ಯಾವುದಾದರೂ ಒಂದು ಬಾಬಿನಿಂದ ಹಣ ಒದಗಿಸಲು ನಿರ್ದಿಷ್ಟ ಪಡಿಸಬೇಕೆಂದು ತಮ್ಮಲ್ಲಿ ಸೂಚಿಸುತ್ತೇನೆ.

ಹರಿಜನ ಉಪಾಧ್ಯಾಯರ ವಿಚಾರದಲ್ಲಿ ನಡೆದಿರುವ ಒಂದೇ ಒಂದು ವಿಷಯವನ್ನು ಹೇಳಿ ಮುಗಿಸುತ್ತೇನೆ. ದಾವಣಗೆರೆಯಲ್ಲಿ ಇಬ್ಬರು ಹರಿಜನ ಉಪಾಧ್ಯಾಯರು ಇದ್ದರು. ಅವರನ್ನು ಹೋದ ವರ್ಷ ಅತ್ತಿಗೆರೆ ಮತ್ತು ಬಾಡ ಈ ಎರಡು ಹಳ್ಳಿಗಳಿಗೆ ವರ್ಗ ಮಾಡಿದರು.

ಪ್ರಾಪ್ತಿ ಕ್ರಮಾಂಕ Accession No ಲ್ಲ
ದಿನಾಂಕ Date

ಮೊದಲು ಆ ಹಳ್ಳಿಯವರು ಏನೋ ತಿಳಿದುಕೊಂಡರು. ಹೊಸ ಮೇಷ್ಟ್ರರು ಬಂದರು ಎಂದು ತಿಳಿದುಕೊಂಡು ಅವರಿಗೆ ಮನೆ ಮಾಡಿ ಕೊಡುತ್ತೇವೆ, ಅನುಕೂಲ ಮಾಡುತ್ತೇವೆ ಎಂದು ಹೇಳಿದರು. ನಾಲ್ಕು ದಿವಸ ಆದ ಮೇಲೆ ಹರಿಜನರು ಎಂದು ತಿಳಿಯಿತು. ಆಗ ನಮ್ಮ ಊರಿನಲ್ಲಿ ಮನೆ ಇಲ್ಲ ಎಂದು ಹೇಳಿದರು. ಪ್ರತಿ ದಿವಸವೂ ಅವರು ದಾವಣಗೆರೆಯಿಂದ ಈ ಗ್ರಾಮಗಳಿಗೆ 10-14 ಮೈಲು ಬಸ್ಸಿನಲ್ಲಿ ಹೋಗಿ ಪಾಠ ಹೇಳುವ ಪರಿಸ್ಥಿತಿ ಬಂತು. ಇದನ್ನು ಅಲ್ಲಿ ವಿದ್ಯಾ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಅವರ ಗೋಳು, ಅವರ ಕಷ್ಟ ಹೇಳತೀರದು. ವಿದ್ಯಾವಂತರಾದವರೂ ಕೂಡ ಒಬ್ಬ ಉಪಾಧ್ಯಾಯರು ಬಂದರೆ ಅವರಿಗೆ ಇರುವುದಕ್ಕೆ ಮನೆ, ಕುಡಿಯುವುದಕ್ಕೆ ನೀರು, ಉಪಯೋಗಿಸಲು ಅವಕಾಶ ಕೊಡಲಲ್ಲ ಎಂದರೆ ನಾಚಿಕೆಗೇಡು. ಅಂತೂ ಅವರನ್ನು ಅಲ್ಲಿಂದ ಬೇರೆ ಕಡೆಗೆ ವರ್ಗ ಮಾಡಿಸಲು ಬೆಂಗಳೂರಿನವರೆಗೂ ಬರಬೇಕಾಯಿತು. ಮೊಳಕಾಲ್ಮೂರು ತಾಲ್ಲೂಕಿನಲ್ಲಿ ಒಂದು ಹಳ್ಳಿಗೆ ಅವರನ್ನು ವರ್ಗ ಮಾಡಿದರೆಂದು ಗೊತ್ತಾಗುತ್ತದೆ. ಅದ್ದರಿಂದ ಈ ಹರಿಜನ ಉಪಾಧ್ಯಾಯರುಗಳನ್ನು ದೂರದೂರದ ಹಳ್ಳಿಗಳಿಗೆ ವರ್ಗ ಮಾಡಬಾರದು ಎಂದು ಹೇಳಿ ನನಗೆ ಕೆಲವು ನಿಮಿಷಗಳ ಕಾಲ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸುತ್ತೇನೆ.

3-30 P.M.

*ಶ್ರೀ ಜಿ. ದುಗ್ಗಪ್ಪ (ಹೊಳಲ್ಕೆರೆ-ಅನುಸೂಚಿತ ಜಾತಿಗಳು).—ಮಾನ್ಯ ಸಭಾಪತಿಗಳೇ, ಈ ದಿವಸ ಸಭೆಯ ಮುಂದಿಟ್ಟಿರತಕ್ಕ ಮನವಿಗಳ ಬಗ್ಗೆ ನನ್ನ ಅನುಮತಿ ನೀಡುತ್ತ ಈಗ ಒಂದೆರಡು ಮಾತುಗಳನ್ನಾಡಲು ತಮ್ಮ ಅಪ್ಪಣೆ ಬೇಡುತ್ತೇನೆ.

ಸ್ವಾಮಿ, ಟ್ಯಾಕ್ಸ್‌ಗಳನ್ನು ಹಾಕತಕ್ಕ ವಿಚಾರ ಹೇಳುವುದಾದರೆ ಸರ್ಕಾರಕ್ಕೆ ನಾವು ಈ ಟ್ಯಾಕ್ಸ್‌ಗಳನ್ನು ಹಾಕುವುದು ಬೇಡ ಎಂದು ಏನೂ ಹೇಳುವುದಿಲ್ಲ. ಇವುಗಳನ್ನು ಹಾಕತಕ್ಕದ್ದು ಅವಶ್ಯಕ. ರಾಜ್ಯದಲ್ಲಿ ಅನೇಕ ಅಭಿವೃದ್ಧಿಯ ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾಗಿದ್ದರೆ ಸರ್ಕಾರಕ್ಕೆ ಆದಾಯ ಬರಲೇಬೇಕು. ಸರ್ಕಾರಕ್ಕೆ ಒಂದು ಹೆಚ್ಚಿನ ಆದಾಯ ಬರಬೇಕಾಗಿದ್ದರೆ ಅವರು ಹೆಚ್ಚಿನ ತೆರಿಗೆಗಳನ್ನು ವಿಧಿಸಲೇಬೇಕು. ಆದರೆ ಈ ಸಂಬಂಧದಲ್ಲಿ ಸರ್ಕಾರದವರಿಗೆ ನಾನು ಒಂದು ನೇರವಾದ ಪ್ರಶ್ನೆ ಹಾಕುತ್ತೇನೆ. ಈ ದಿವಸ ನಾವು ಒಂದು ನಯಾ ಪೈಸೆಯನ್ನು ಸಂಪಾದನೆ ಮಾಡುವುದೂ ಒಂದೇ, ಒಂದು ನಯಾ ಪೈಸೆಯನ್ನು ಖರ್ಚುಗಳ ಬಾಬಿನಲ್ಲಿ ಮಿತವ್ಯಯ ಮಾಡತಕ್ಕದ್ದೂ ಒಂದೇ. ಈ ಅಭಿಪ್ರಾಯ ಸರಿಯೇ? ನ್ಯಾಯವಲ್ಲವೇ? ಎಂದು ಪ್ರಶ್ನೆ ಕೇಳುತ್ತೇನೆ. ಇತ್ತೀಚೆಗೆ ಸರ್ಕಾರದವರೇನೋ ಒಬ್ಬ ಎಕಾನಮಿ ಆಫೀಸರನ್ನು ನೇಮಕ ಮಾಡಿದ್ದೇವೆಂದು ಹೇಳಿರುತ್ತಾರೆ. ಬಹುಶಃ ಈಗಾಗಲೇ ಅವರು ಒಪ್ಪಿನಬೇಕಾಗಿದ್ದ ವರದಿ ಸರ್ಕಾರದವರ ಕೈ ಸೇರಿರಬಹುದು. ಆದರೆ ಹೀಗೆ ಸರ್ಕಾರ ಆಗಾಗ್ಗೆ ಕಾರ್ಯಾಚರಣೆಗೆ ತರುವ ಎಕಾನಮಿ ಮೆಷರ್ಸುಗಳು ಬಹಳ ವಿಚಿತ್ರ ಕರವಾಗಿರುತ್ತವೆ. ಈ ಹಿಂದೆ ಕೆಲವು ಎಕಾನಮಿ ಮೆಷರ್ಸುಗಳನ್ನು ಜಾರಿಗೆ ತಂದ ಕಾಲದಲ್ಲಿ ದಿನಬೆಳಗಾದರೆ ಈ ಸದನ್ಯರುಗಳ ಮನೆಗಳಿಗೆ ಎಷ್ಟು ಜನ ಅಲೆಯತಕ್ಕವರು? ಹಾಗೆ ಅಲೆಯತಕ್ಕವರಲ್ಲಿ ಬಹುಮಂದಿ ಅವರು ರಿಟ್ರೆಂಚ್ಡ್ ಪೋಲೀಸ್ ದಫೇದಾರರುಗಳೂ, ಚಪ್ಪಾಸಿಗಳೂ, ವ್ಯವಸಾಯದ ಇಲಾಖೆಯ ಫೀಲ್ಡ್‌ಮೆನ್‌ಗಳೂ ಇತ್ಯಾದಿ ಕೇವಲ ತಿಂಗಳಿಗೆ 20-25 ರೂಪಾಯಿಗಳ ಸಂಬಳ ಪಡೆಯುತ್ತಿದ್ದ ಜನರು, ಶಾಸನ ಸಭಾ ಸದನ್ಯರುಗಳ ಮನೆಗಳ ಮುಂದೆ ಬಂದು—ಏನು ಸ್ವಾಮಿ! ನಮ್ಮನ್ನೆಲ್ಲಾ ಸರ್ಕಾರದವರು ರಿಟ್ರೆಂಚ್ ಮಾಡಿದ್ದಾರೆ ಎಂದು ಬಡಿದುಕೊಳ್ಳುತ್ತಿದ್ದಂಥಾ ವಿಷಯ ಅನೇಕರಿಗೆ ಗೊತ್ತಿರಬಹುದು. ಎಕಾನಮಿ ಪಾಲಿಸಿ ಆಫ್ ದಿ ಗೌರ್ನಮೆಂಟ್ ಎಂದರೆ ಹೀಗೆ ಆ 20-25 ರೂಪಾಯಿಗಳ ಕಡಮೆ ದರ್ಜೆ ನೌಕರರನ್ನು ಮನೆಗಳಿಗೆ ಕಳುಹಿಸಿ ಕೊಡತಕ್ಕದ್ದೇ ಸರ್ಕಾರದವರು ಹೇಳುತ್ತಿರುವ ಆ ರಿಟ್ರೆಂಚ್‌ಮೆಂಟ್ ಪಾಲಿಸಿಯೇ ಈ ಒಂದು ಕೇಡಿಗೆ ಸರಿಯಾಗಿ ಅವರ ದುರ್ದೈವಕ್ಕೆ ಅಕ್ಷರಾನುಕ್ರಮಣಿಕೆಯ ಪ್ರಕಾರ ರಿಟ್ರೆಂಚ್ ಮಾಡತಕ್ಕ ಇಲಾಖೆಗಳನ್ನು ಎಣಿಕೆ ಮಾಡುವಾಗ ಈ ಅಗ್ರಿಕಲ್‌ಚರಲ್ ಎಂಬ ಇಲಾಖೆಯೆಂಬುದೇ ಮೊದಲು ಬರಬೇಕೇ? ಅಂದರೆ ಸರ್ಕಾರದವರು ಅನುಸರಿಸುತ್ತಿರುವಂಥ ರಿಟ್ರೆಂಚ್‌ಮೆಂಟ್ ಪದ್ಧತಿಯಲ್ಲಿ ಅಡಕವಾಗಿರತಕ್ಕ ನೀತಿ, ಪಾಲಿಸಿ ಏನೆಂದರೆ ಈ ಇಲಾಖೆಗಳಲ್ಲಿ ಯಾರಿಗೆ ಯಾರೂ ಹೇಳತಕ್ಕವರು-ಕೇಳತಕ್ಕವರು ಇರುವುದಿಲ್ಲವೋ ಅಂಥಾ ಬಡಪಾಯಿ ನೌಕರರುಗಳೆಂದರೆ ಈ ವ್ಯವಸಾಯದ ಇಲಾಖೆಯಲ್ಲಿ ಆ ಫೀಲ್ಡ್‌ಮೆನ್‌ಗಳು. ಈ ವಿಚಾರದಲ್ಲಿ ಸರ್ಕಾರಕ್ಕೆ ಒಂದು ವರದಿಯನ್ನು ಒಪ್ಪಿಸಲು ಸಲಹೆ ಕೊಡತಕ್ಕವರು ಯಾರು? ಇಲಾಖೆಯ ಅಧಿಕಾರಿಗಳು. ಅಧಿಕಾರಿಗಳು ಕೊಡತಕ್ಕ ಸಲಹೆ ಎಂದಿಗೂ ಅಧಿಕಾರಿಗಳಿಗೆ ಅನುಕೂಲ, ಕೆಳದರ್ಜೆ ನೌಕರರಿಗೆ ವಿರೋಧವಾಗಿರಲೇ ಬೇಕು. ಸರ್ಕಾರದಲ್ಲಿ ಆ ಒಂದು ನೀತಿ ಎದ್ದು ಕಾಣುತ್ತದೆ. ಇಲ್ಲಿಯವರೆಗೂ ರಿಟ್ರೆಂಚ್ ಆಗಿರತಕ್ಕ ನೌಕರರನ್ನು ನೋಡಿದರೆ ಅಧಿಕಾರಿಗಳ ಹೆಸರೇ ಅಪರೂಪ. ಕೇವಲ್ ಸೆಕೆಂಡ್ ಡಿವಿಜಿಗುಮಾಸ್ತರು ಇಲ್ಲವೇ ಮಾನಿಯರ್ ದರ್ಜೆ ನೌಕರರೇ ಹೆಚ್ಚಿಗೆ ಮನೆಗೆ ಹೋಗತಕ್ಕವರೆಂಬುದು ಎಲ್ಲರಿಗೂ ವೇದ್ಯವಾಗಿರತಕ್ಕ ಅಂಶ. ಪುಡ್ ಇಲಾಖೆ ಹೋಗಬೇಕೆಂದು ನಾವೆಲ್ಲರೂ ಹೇಳುತ್ತಿದ್ದೆವು. ಅದರಲ್ಲೂ ಕೂಡ ಹೀಗೆ ಮಾಡಿದ್ದಾರೆ. ಸರ್ಕಾರದವರು ಅನುಸರಿಸುತ್ತಿರುವ ಈ ರಿಟ್ರೆಂಚ್‌ಮೆಂಟ್ ಪಾಲಿಸಿಯಲ್ಲಿ ಹೀಗೇ ಇನ್ನೂ ಬಹಳ ತಮಾಷೆಗಳಿರುತ್ತವೆ. ಈ ಹಿಂದೆ ಒಬ್ಬ ಚೀಫ್ ಇಂಜಿನಿಯರ್ ಮಾತ್ರ ನಮ್ಮಲ್ಲಿರುತ್ತಿದ್ದರು. ಈ ದಿವಸ ಆ ಇಲಾಖೆಯಲ್ಲಿ ನಾಲ್ಕು ಜನ ಚೀಫ್ ಇಂಜಿನಿಯರುಗಳನ್ನು ನೇಮಕ ಮಾಡಿದ್ದಾರೆ. ಈ ಎಕಾನಮಿ ಮೆಷರ್ಸುಗಳನ್ನು ಜಾರಿಗೆ ತರತಕ್ಕ ಬಗ್ಗೆ ಸರ್ಕಾರ ಅನುಸರಿಸತಕ್ಕ ರೀತಿ-ನೀತಿಗಳೂ, ವೈಖರಿಗಳೂ ಇವೆಯೇ ಎಂಬುದನ್ನು ಅವರೇ ಹೇಳಲಿ! ಸರ್ಕಾರದವರು ಹಾಕತಕ್ಕ ಪಾಲಿಸಿಗಳು; ಆ ಪಾಲಿಸಿಗಳನ್ನು ಸರ್ಕಾರದವರು ಕಾರ್ಯರೂಪಕ್ಕೆ ತರಲು ಅನುಸರಿಸತಕ್ಕ ರೀತಿ-ನೀತಿ, ಪದ್ಧತಿ, ಕ್ರಮ ಇವನ್ನು ಯಾವ ರೀತಿ ಸಮರ್ಥನೆ ಮಾಡಬೇಕೋ ಅದಂತೂ ನನಗೆ ತಿಳಿಯದಾಗಿದೆ. ಇಂಥ ವಿಚಾರಗಳಲ್ಲಿ ಸರ್ಕಾರ ಅನುಸರಿಸತಕ್ಕ ನೀತಿ ಸರಿಯಾಗಿದೆಯೇ, ಇಲ್ಲವೇ ಎಂಬುದನ್ನು ನಾವು ಒರೆ ಹಚ್ಚಿ ನೋಡುವುದಾದರೆ ಸರ್ಕಾರದ ನೀತಿಯಲ್ಲಿ ನಮಗೇನು ಕಾಣುತ್ತಿದೆಯೆಂದರೆ, ಅವರು ಬಾಯಲ್ಲಿ ಹೇಳತಕ್ಕದ್ದೇ ಒಂದು, ಕೈಯಲ್ಲಿ ಮಾಡತಕ್ಕದ್ದೇ ಒಂದು ಎಂಬುದಾಗಿ ಕಂಡುಬರುತ್ತಿದೆ. ಇದಕ್ಕೆ ಸರ್ಕಾರದವರು ಈ ದಿವಸ ಏನು ಉತ್ತರ ಹೇಳುತ್ತಾರೆ? ಈ ಹಿಂದೆ ನಮ್ಮ ಸಂಸ್ಥಾನದಲ್ಲಿ ಡೈರೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್ ಎಂಬ ಒಂದು ಹುದ್ದೆ ಇರಲಿಲ್ಲ. ಇತ್ತೀಚೆಗೆ ಈ ಒಂದು ದೊಡ್ಡ ಹುದ್ದೆಯನ್ನು ಹೊಸದಾಗಿ ಸ್ಥಾಪಿಸಿ

(ಶ್ರೀ ಜಿ. ದುಗ್ಗಪ್ಪ)

ದ್ದಾರೆ. ಇದೇ ರೀತಿ ಕಮಿಷನರ್ ಫಾರ್ ಅಗ್ರಿಕಲ್ಚರ್ ಎಂಬ ಇನ್ನೊಂದು ದೊಡ್ಡ ಹುದ್ದೆಯನ್ನು ಮಾಡಿದ್ದಾರೆ. ಫುಡ್ ಪ್ರೊಡಕ್ಷನ್‌ಗೆ ಇನ್ನೊಬ್ಬರು. ಹೀಗೆ ಇನ್ನೂ ಒಂದು ಸ್ಥಾನ ಸೇರಿ ಒಟ್ಟಿಗೆ ಈ ಒಂದು ಇರಾಖೆಯಲ್ಲಿ ಮೂರು ದೊಡ್ಡ ಹುದ್ದೆಗಳನ್ನು ಕಲ್ಪಿಸಿದ್ದಾರೆ. ಇಂಥ ಒಂದು ನೀತಿಯನ್ನು ಅನುಸರಿಸತಕ್ಕ ಸರ್ಕಾರದ ಮುಂದೆ ಈ ದಿವಸ ಆ ಎಕಾನಮಿ ಆಫೀಸರು ಒಂದು ವರದಿಯನ್ನಿಟ್ಟರೆ ತಾನೇ ಏನಾಗುತ್ತದೆ? ಹೀಗೆಲ್ಲಾ ಇರುವುದರಿಂದ ಈ ದಿವಸ ಆ ಎಕಾನಮಿ ಆಫೀಸರ ವರದಿಯನ್ನೂ ಮತ್ತು ಆ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕಾರ್ಯಕ್ರಮಗಳನ್ನೂ ಒಂದು ಸಂಪೂರ್ಣ ವರದಿಯ ರೂಪದಲ್ಲಿ ಈ ಮಾನ್ಯ ಸಭೆಯ ಮುಂದಿಡಬೇಕಾದ್ದು ಅತ್ಯಗತ್ಯವೆಂದು ನಾನು ಸರ್ಕಾರದವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಗ್ರಾಮಾಭಿವೃದ್ಧಿಯ ಬಗ್ಗೆ ಸರ್ಕಾರದವರು ಈಗ ಅಲ್ಲಲ್ಲಿ ಕೆಲವು ಕಡೆ ರೇಡಿಯೋ ಸೆಟ್ಟುಗಳನ್ನು ಕೊಟ್ಟಿದ್ದಾರೆ. ಇವುಗಳನ್ನು ಮೊದಲು ಅಲ್ಲಿಂದ ತೆಗೆದುಹಾಕಬೇಕೆಂದು ಸಲಹೆ ಮಾಡುತ್ತೇನೆ. ದಿನ ಬೆಳಗಾದರೆ ತಿಪ್ಪೆಗೆ ಕಸವನ್ನು ಹೊತ್ತುಕೊಂಡು ಹೋಗತಕ್ಕ ಜನಗಳೇನಿದ್ದರೋ ಅವರೆಲ್ಲ ಈ ದಿವಸ ಆ ರೇಡಿಯೋ ಹತ್ತಿರ ಹೋಗಿ ಅದನ್ನು ಕೇಳುತ್ತ ನಿಂತು ಬಿಡುತ್ತಾರೆ. ತಾವು ಅಲ್ಲಿ ಗ್ರಾಮಾಭಿವೃದ್ಧಿ ಮಾಡುವುದು! ಈ ರೀತಿಯಲ್ಲಿ ಇವುಗಳನ್ನೆಲ್ಲ ತೆಗೆದುಹಾಕಿ ಇವುಗಳಿಗಾಗಿ ಖರ್ಚು ಮಾಡತಕ್ಕ ಹಣವನ್ನು ಹಳ್ಳಿಗಳಲ್ಲಿ ಬಾವಿಗಳಿಗೆ, ರಸ್ತೆಗಳಿಗೆ ಖರ್ಚು ಮಾಡಿ, ಇಂಥ ಕಾರ್ಯಗಳನ್ನು ಮಾಡಿಸಿಕೊಡಿ. ಇವು ಬಹಳ ಅತ್ಯಗತ್ಯ. ನ್ಯಾಯವಾಗಿಯೂ ಜನಗಳಿಗೆ ಅನುಕೂಲ ಕಲ್ಪಿಸುವಂಥ ಕಾರ್ಯಗಳು ಇವು. ಈ ಹಿಂದೆ ಈ ಇಲಾಖೆಗೆ ಶ್ರೀ ಕೆ. ತಿಪ್ಪೇರುದ್ರಯ್ಯನವರೆಂಬ ಒಬ್ಬ ಅಧಿಕಾರಿಗಳನ್ನು ನೇಮಕ ಮಾಡಿತ್ತು. ಆ ಒಬ್ಬ ಅಧಿಕಾರಿಗಳ ಕಾಲದಲ್ಲಿ ಮಾತ್ರ ಈ ಗ್ರಾಮಾಭಿವೃದ್ಧಿಗಳ ಕಾರ್ಯ ಅಷ್ಟಿಷ್ಟು ನಡೆಯಿತು. ಅವರು ಈ ಬಾಬಿನ ಅಧಿಕಾರ ವಹಿಸಿಕೊಂಡ ಕೂಡಲೆ ಗ್ರಾಮ ಗ್ರಾಮಗಳಿಗೂ ತಾವೇ ಹೋಗಿ ಜನರನ್ನು ಕರೆದು—ನಿಮಗೆ ಏನು ತೊಂದರೆಗಳಿವೆ, ನಿಮಗೆ ಸರ್ಕಾರದಿಂದ ಏನು ಅನುಕೂಲಗಳಾಗಬೇಕು ಎಂದು ಕೇಳಿ ಯಾರು ಬಾವಿ ಕೇಳಿಕೊಂಡರೋ ಅಗಲೇ ಅಲ್ಲೇ ಅವರಿಗೆ ಬಾವಿಗಳನ್ನು ಸ್ಯಾಂಕ್ಷನ್ ಮಾಡಿಬಿಡುತ್ತಿದ್ದರು. ರಸ್ತೆ ಅನುಕೂಲ ಕೇಳಿದವರಿಗೂ ಹಾಗೇ ನಿಂತಿದ್ದ ಸ್ಥಳದಲ್ಲೇ ಮಂಜೂರು ಮಾಡಿ ಕೆಲಸಕ್ಕೆ ಆರ್ಡರನ್ನು ಕೊಡುತ್ತಿದ್ದರು. ಹಿಂದೆ ಇದೇ ಸರ್ಕಾರದಲ್ಲಿ ಮಂತ್ರಿಗಳಾಗಿದ್ದ ಡಾ॥ ನಾಗನ ಗೌಡರೂ ಮತ್ತು ಅದೇ ಶ್ರೀ ತಿಪ್ಪೇರುದ್ರಯ್ಯನವರೂ ಇಬ್ಬರೂ ಒಂದಾವರ್ತಿ ಒಬ್ಬರಿಪನ್ಯೂ ಇಕ್ಸ್‌ಪೆಕ್ಟರ್ ಸಹ ಹೋಗಲು ಸಾಧ್ಯವಿಲ್ಲದಂಥ ದಾರಿಯೆಲ್ಲ ಒಂದು ಗ್ರಾಮಕ್ಕೆ ಬಂದರು. ಅಲ್ಲಿಯ ಹಳ್ಳಿಯ ಜನರನ್ನು ಕರೆದು ನಿಮಗೇನು ತೊಂದರೆಯಿದೆ ಎಂದು ಕೇಳಿದಾಗ ಆ ಜನರು ನಮಗೊಂದು ಕುಡಿಯುವ ನೀರಿನ ಬಾವಿಯನ್ನು ಮಾಡಿಸಿಕೊಡಬೇಕೆಂದು ಕೇಳಿಕೊಂಡಿದ್ದಕ್ಕೆ ನಿಂತಿದ್ದ ಸ್ಥಳದಲ್ಲೇ ಒಂದು ಬಾವಿಗೆ ಆರ್ಡರನ್ನು ಮಾಡಿದರು. ಗ್ರಾಮಾಭಿವೃದ್ಧಿಗಳನ್ನು ಮಾಡತಕ್ಕ ರೀತಿ-ನೀತಿ ಎಂದರೆ ಅದು. ಈ ಕೆಲಸಗಳೆಲ್ಲ ಬಹಳ ಮುಖ್ಯವಾದುವು ಮತ್ತು ಜನಗಳಿಗೆ ಅತ್ಯಗತ್ಯವಾಗಿ ಆಗಬೇಕಾಗಿರತಕ್ಕಂಥಾ ಕಾರ್ಯಗಳು. ಇವುಗಳನ್ನು ನೆರವೇರಿಸತಕ್ಕ ಮಾರ್ಗ ನಾನಾಗಲೇ ಹೇಳಿದ್ದೇನೆ. ಹೀಗೆ ಈ ಕೆಲಸ ಕಾರ್ಯಗಳ ಬಗ್ಗೆ ಸರ್ಕಾರದವರು ಒಂದು ಸರಿಯಾದ ತತ್ತ್ವ, ನೀತಿ, ಪಾಲಸಿಗಳನ್ನು ತಯಾರಿಸಿ, ಈ ಕಾರ್ಯಗಳನ್ನು ನಡೆಸಲು ಜವಾಬ್ದಾರಿ ಹೊರತಕ್ಕ ಮಂತ್ರಿಗಳಿಗೆ ಇತರ ಅವರ ಸಹೋದ್ಯೋಗಿಗಳೂ ಹೊಂದಾವಣಿಕೆ ಆಗಿ ಕೆಲಸಗಳನ್ನು ನಡೆಸಬೇಕಾದ್ದು ಅತ್ಯಗತ್ಯ. ಆದರೆ ಈ ದಿವಸ ಈ ಎಲ್ಲ ಕಾರ್ಯಗಳನ್ನು ನಡೆಸತಕ್ಕ ಬಗ್ಗೆ ಒಬ್ಬರಿಗೊಬ್ಬರಿಗೆ ಎಷ್ಟರಮಟ್ಟಿಗೆ ಹೊಂದಾವಣಿಕೆ ಇದೆಯೆಂಬ ವಿಚಾರ ದೇವರೊಬ್ಬನಿಗೆ ಮಾತ್ರ ಗೊತ್ತಿರಬೇಕು. ಈಗ ಸಭೆಯಲ್ಲಿ ಶ್ರೀ ಜೆ. ಬಿ. ಮಲ್ಲಾರಾಧ್ಯರಿಲ್ಲ. ಇದ್ದರೆ ಚೆನ್ನಾಗಿತ್ತು. 1921ನೆಯ ಇನವಿಯಲ್ಲಿ ಹರಿಜನರಿಗಾಗಿ ಕೋ-ಆಪರೇಟಿವ್ ಆಗ್ರಿಕಲ್ಚರರ್ ಕಾಲೋನಿ ತೆರೆದರು. ಅಲ್ಲಿ ಅವರಿಗೆ ಕೆಲವು ಸೌಕರ್ಯಗಳನ್ನು ಒದಗಿಸಿಕೊಟ್ಟರು. ಆದರೆ ಆ ಕಾಲೋನಿಯ ಪಕ್ಕದಲ್ಲೇ ಇನ್ನೂ ಸ್ವಲ್ಪ ಜಮೀನಿತ್ತು. ಆ ಜಮೀನು ವ್ಯವಸಾಯಕ್ಕೇನೂ ಉಪಯೋಗವಾಗುವಂತೆ ಇರಲಿಲ್ಲ. ಆಗ ಆ ಜಮೀನನ್ನು ದನಗಳ ಮೇವಿಗಾಗಿ ರಿಜರ್ವ್‌ಮಾಡಬೇಕೆಂದು ಕೇಳಿಕೊಂಡಿದ್ದರು. ಆಗ ten acres have been appropriated for grazing purposes of this Colony ಎಂದು ಆರ್ಡರ್‌ಮಾಡಿದರು. ಆದರೆ ಮೇಲಿನವರು ರೆವಿನ್ಯೂ ಕಮಿಷನರು ಅದನ್ನು ಒಪ್ಪಲಿಲ್ಲ. ಹೀಗಾದರೆ ಯಾರೇನು ಮಾಡುತ್ತಾರೆ? ಆ ಅಧಿಕಾರಿಗಳಾದರೂ ಏನು ಮಾಡುತ್ತಾರೆ? ಗ್ರಾಮಸ್ಥರೇನು ಮಾಡುತ್ತಾರೆ? ಸರ್ಕಾರ ಹರಿಜನರನ್ನು ಉದ್ಧಾರ ಮಾಡುತ್ತೇವೆಂದು ಹೇಳಿ ಈ ಬಗ್ಗೆ ಅವರು ಕೈಗೊಳ್ಳತಕ್ಕ ಕಾರ್ಯಕ್ರಮಗಳ ನೀತಿ ಇದೆಯೇ? ಆ ಜಮೀನನ್ನು ಕೊಟ್ಟಿದ್ದವರು ಶ್ರೀ ಶೇಷಾದ್ರಿಯವರು. ಅವರು ಆಗ ಡೆಪ್ಯುಟಿ ಕಮಿಷನರಾಗಿದ್ದರು. ಅವರೇ ಆ ಜಮೀನನ್ನು ಗೋಮಾಳಕ್ಕಾಗಿ ರಿಜರ್ವ್ ಮಾಡಿದ್ದರು. ಡೆಪ್ಯುಟಿ ಕಮಿಷನರ ದರ್ಜೆಯಲ್ಲಿದ್ದವರು ಮಾಡಿದಂಥ ಆರ್ಡರೇ ಹಾಗಾಯಿತು. ಒಂದು ವಿಚಾರದಲ್ಲಿ ಹಾಗಾದ ಮೇಲೆ ಅವರನ್ನು ಬಾಕಿ ವಿಚಾರ ಕೇಳಿದರೆ He may plead his inability. ಅವರು ಸ್ಯಾಂಕ್ಷನ್ ಮಾಡಿದ್ದನ್ನೇ ಮೇಲಿನವರು ಒಪ್ಪದಿದ್ದರೆ ಅವರಿಗೆ ಮುಂದೆ ಏನು ಮಾಡುವುದಕ್ಕೂ ಸಾಧ್ಯವಿರುವುದಿಲ್ಲ. ಹೀಗೆಲ್ಲ ಆಗುತ್ತಿದ್ದರೆ ಇನ್ನು ಸರ್ಕಾರದವರ ಹೇಳಿಕೆಯಲ್ಲಿ ಜಸ್ಟೀಸ್, ಈಕ್ವಿಟಿ, ಸತ್ಯ-ಧರ್ಮ, ನ್ಯಾಯ ಎಲ್ಲಿದೆ! ಸರ್ಕಾರದವರಿಗೆ ನ್ಯಾಯವಾಗಿರತಕ್ಕ ಕೆಲಸಗಳನ್ನು ಮಾಡಲು ಏಕೆ ಹೆದರಬೇಕು! ಸರ್ಕಾರ ಯಾವುದಾದರೂ ಒಂದು ನೀತಿಯನ್ನು ಹಾಕಿಕೊಂಡಮೇಲೆ ಅದನ್ನು ಅವರು ಜಬರ್‌ದಸ್ತಾಗಿ ಚಲಾಯಿಸಬೇಕು. ಹಾಗೆ ಮಾಡುವುದಕ್ಕೆ ಅವರಿಗೆ ಸಾಧ್ಯವಾಗದೆ ಹೋದರೆ ದಯವಿಟ್ಟು ಅವರು ಆ ಸ್ಥಾನವನ್ನು ಬಿಟ್ಟು ಈಚೆಗೆ ಬರಬೇಕು. ಸರ್ಕಾರದ ಆ ಒಂದು ಅಧಿಕಾರ ಸ್ಥಾನದಲ್ಲಿ ಕುಳಿತು ಅವರೇ ಒಂದು ನೀತಿಯನ್ನು ಹಾಕಿಕೊಂಡು, ಆ ನೀತಿಗನುಸಾರವಾಗಿ ಅವರು ಕೆಲಸ ಮಾಡಲು ಆಗದಿದ್ದರೆ ಅವರು ಆ ಸ್ಥಾನವನ್ನು ಕೂಡಲೆ ಬಿಟ್ಟುಬಿಡಬೇಕು.

ಸ್ವಾಮಿ, ನಾನು ಒಂದು ಮುಖ್ಯವಾದ ವಿಚಾರವನ್ನು ಹೇಳಬೇಕಾಗಿದೆ. ಹಿಂದೆ ನಮ್ಮ ಹಳೆಯ ಮೈಸೂರಿನಲ್ಲಿ ಹರಿಜನರ ಅಭಿವೃದ್ಧಿಯ ಬಗ್ಗೆ ಒಂದು ಪಾಲಸಿ ಸಮಿತಿ ಎಂದು ಮಾಡಿದ್ದರು. ಆ ಸಮಿತಿಯಲ್ಲಿ ಹಿಂದುಳಿದ ಪಂಗಡದವರ ಅಭಿವೃದ್ಧಿಯನ್ನು ಹೇಗೆ ಸಾಧಿಸಬೇಕು. ಆ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು; ಸರ್ಕಾರ ಆ ಬಗ್ಗೆ ಯಾವ ರೀತಿ ನಡೆದುಕೊಳ್ಳಬೇಕು, ಸರ್ಕಾರದವರ ರೀತಿ-ನೀತಿಗಳು ಈ ವಿಚಾರದಲ್ಲಿ ಯಾವ ರೀತಿ ಇರಬೇಕು ಇತ್ಯಾದಿ ವಿಚಾರ

ಗಳನ್ನು ತೀರ್ಮಾನ ಮಾಡಲು ಆ ಒಂದು ಪಾಲಿಸಿ ಸಮಿತಿ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಪ್ರಾರಂಭ ವಾಯಿತು. ಆ ಸಮಿತಿಯಲ್ಲಿ ಈ ಮಾನ್ಯ ಸಭೆಯ ಕೆಲವು ಸದಸ್ಯರೂ ಇದ್ದರು ಮತ್ತು ಸರ್ಕಾರದಮುಖ್ಯ ಮಂತ್ರಿಗಳಾಗಿದ್ದಂಥ ಶ್ರಿ ಕೆ. ಹನುಮಂತಯ್ಯನವರೇ ಆ ಪಾಲಿಸಿ ಸಮಿತಿಯ ಛೇರ್ಮನ್ ಆಗಿದ್ದರು.

At the Governmental level it may be very difficult for the Government to take decision on policy matters. Therefore it is worthwhile to appoint a Committee consisting of the Chief Minister, Ministers, M.L.A.s and the Departmental Heads so that it may be easy for the Government to take decisions and also save time at the higher level. The Chief Minister was the Chairman of the committee and the Vice-Chairman was the L.S.G. Minister. The Secretary of the Committee was the Secretary to Government in the L.S.G. Department. There, we used to discuss very important matters and arrive at conclusions and we used to take important decisions on policy matters. The Policy Committee took decisions to start a free boarding home at district levels, to form a Depressed Class Fund so that the money set apart for the Depressed Class Amelioration Fund mighty not lapse.

ಶ್ರೀ ಕುಂದೂರು ರುದ್ರಪ್ಪ.—ಮಾನ್ಯ ಸದಸ್ಯರು ಒಂದು ಸಾರಿ ಸ್ವಾರಸ್ಯವಾಗಿ ಇಂಗ್ಲಿಷಿನಲ್ಲಿ ಹೇಳುತ್ತಾರೆ ಮತ್ತೊಂದು ಸಾರಿ ಕನ್ನಡದಲ್ಲಿ ಹೇಳುತ್ತಾರೆ. ಇಂಗ್ಲಿಷಿನಲ್ಲಿ ಹೇಳುವುದು ನಮಗೆ ತಿಳಿಯುವುದಿಲ್ಲ. ಕನ್ನಡದಲ್ಲೆಯೇ ಹೇಳಿದರೆ ಉತ್ತಮ.

ಶ್ರೀ ಬಿ. ದುಗ್ಗಪ್ಪ.—ಕನ್ನಡದಲ್ಲಿಯೇ ಹೇಳುತ್ತೇನೆ. ಈ ಪಾಲಿಸಿ ಕಮಿಟಿಯು ಕೆಲಸ ಮಾಡುವಾಗ ಆಗಿದ್ದ ಚೇರ್ಮನ್ನರು (ಎಂದರೆ ಮುಖ್ಯಮಂತ್ರಿಗಳಾಗಿದ್ದ ಶ್ರೀ ಹನುಮಂತಯ್ಯನವರು) 'ಏನು ದುಗ್ಗಪ್ಪನವರೇ, ಈ ಕಮಿಟಿ ಮಾಡಿದ ಷಿಫಾರಸ್ಸುಗಳನ್ನು ಒಪ್ಪಿಕೊಳ್ಳಲು ಏನೂ ಕಷ್ಟವಿಲ್ಲ, ಆದರೆ ಜಾರಿಗೆ ತರುವುದು ಕಷ್ಟವಾಗಿದೆ'' ಎಂದು ಹೇಳುತ್ತಿದ್ದರು. ಆಗ ಎಲ್. ಎಸ್. ಜಿ. ಮಿನಿಸ್ಟರು ಮೈಸ್ ಚೇರ್ಮನ್ ರಾಗಿದ್ದರು; ಎಲ್. ಎಸ್. ಜಿ. ಸೆಕ್ರೆಟರಿಯವರೇ ಸೆಕ್ರೆಟರಿಗಳಾಗಿದ್ದರು. ಸ್ಟೇಟು ಲೆವಲ್ಲಿನಲ್ಲಿರುವ ಅಧಿಕಾರಿಗಳಿದ್ದರು ಮತ್ತು ಎಂ. ಎಲ್. ಎ.ಗಳೂ ಇದ್ದರು. ಇಂತಹವರೆಲ್ಲ ಸೇರಿ ಎಲ್ಲ ವಿಷಯಗಳನ್ನೂ ಯೋಚನೆ ಮಾಡಿ ಎಷ್ಟೋ ತೀರ್ಮಾನಗಳನ್ನು ತೆಗೆದುಕೊಂಡಿದ್ದರು. ಅಂತಹ ವಿಚಾರಗಳಿಗೆ ಇಪ್ಪತ್ತಿನ ದಿವಸ ಪುನಃ ಏನೂ ಮಾಡಿಲ್ಲ ಎಂದು ಹೇಳಬೇಕಾದರೆ Policy Committee affairs become a farce. ಹಿಂದೆ ಇದ್ದ ಪಾಲಿಸಿ ಕಮಿಟಿಗೆ ಈಗ ಚೀಫ್ ಮಿನಿಸ್ಟರು ಚೆರ್ಮನ್ನರಾಗಿಲ್ಲ. ಎಲ್. ಎಸ್. ಜಿ. ಮಿನಿಸ್ಟರವರೇ ಇದಕ್ಕೆ ಚೇರ್ಮನ್ನರಾಗಿದ್ದಾರೆ. ಈಗ ಸೆಕ್ರೆಟರಿಗಳು ಯಾರಾಗಿದ್ದಾರೋ ನನಗೆ ಗೊತ್ತಿಲ್ಲ. ಏಕೆಂದರೆ ಈಗ ಹೊಸದಾಗಿ ಈ ಪಾಲಿಸಿ ಕಮಿಟಿಯನ್ನು ಮಾಡಿದ್ದಾರೆ. ಅಂತೂ ಒಟ್ಟಿನಲ್ಲಿ ಈ ಪಾಲಿಸಿ ಕಮಿಟಿ ಮಾಡುವುದಾದರೂ ಏನು ಎಂದರೆ, ಒಂದೊಂದು ಡಿಸ್ಟ್ರಿಕ್ಟಿನಲ್ಲಿ ಒಂದೊಂದು ಸಾರಿ ಕಮಿಟೀ ಮೀಟಿಂಗನ್ನು ಮಾಡುತ್ತಾರೆ ಅಷ್ಟೇ. ನಮ್ಮ ಸರಕಾರವನ್ನು ಒಂದು ಪ್ರಶ್ನೆ ಕೇಳುತ್ತೇನೆ. ಪ್ರತಿ ಊರಿನಲ್ಲಿಯೂ ಹೋಗಿ ಕಮಿಟಿ ಮೀಟಿಂಗನ್ನು ಮಾಡಿ ಹೊಸದಾಗಿ ಏನಾದರೂ ಪಾಲಿಸಿ ಮಾಡಿದ್ದೀರಾ? ಹೀಗೆ ಏನೂ ಮಾಡಿಲ್ಲ. ಸುಮ್ಮನೆ ಊರುಗಳಿಗೆ ಹೋಗಿ ಒಂದೆರಡು ದಿವಸಗಳಿದ್ದು ಅಲ್ಲಿ ಸೈಟ್ ಸೀಯಿಂಗ್ ಎನ್ನುವಂತೆ ಊರನ್ನು ನೋಡಿಕೊಂಡು ಬರುವುದಾಗಿದೆ. ನಾನು ಹೀಗೆ ಹೇಳುತ್ತಿದ್ದೇನೆ ಎಂದು ತಾವು ತಪ್ಪು ತಿಳಿದುಕೊಳ್ಳಬಾರದು. ನೀವು ಒಂದು ಪಾಲಿಸಿಯನ್ನು ಮಾಡಬೇಕಾದರೆ ಎಲ್ಲ ವಿಚಾರಗಳನ್ನೂ ಬಹಳ ಕೂಲಂಕಷವಾಗಿ ಯೋಚನೆಮಾಡಿ ಒಂದು ತತ್ವವನ್ನು ರೂಪಿಸತಕ್ಕ ಕಮಿಟಿಯನ್ನು ಮಾಡಬೇಕು. ಹಾಗೆ ಮಾಡದೆ ಅಲ್ಲೊಂದು ದಿವಸ ಹೋಗುವುದು, ಇಲ್ಲೊಂದು ದಿವಸ ಹೋಗುವುದು ಹೀಗೆ ಮಾಡುವುದರಿಂದ ಏನು ಪಾಲಿಸಿಯನ್ನು ಮಾಡುವುದಕ್ಕೆ ಸಾಧ್ಯ? ತಾವು ಈಗ ಹೊಸದಾಗಿ ಈ ಕಮಿಟಿ ಆದಮೇಲೆ ಏನಾದರೂ ಹೊಸ ನೀತಿಯನ್ನು ರೂಪಿಸಿದ್ದೀರಾ? ನಾನು ಹೋದ ಸಾರಿಯೂ ಕೂಡ ಈ ವಿಚಾರವಾಗಿ ಹೇಳಿದ್ದೇನೆ.

[MR. DEPUTY SPEAKER in the Chair]

ಇನ್ನೊಂದು ವಿಷಯ. ಈ ದ್ವಿತೀಯ ಪಾಂಚವಾರ್ಷಿಕ ಯೋಜನೆಯಲ್ಲಿ ಈ ಬಜೆಟ್ಟಿನಲ್ಲಿ ಹಿಂದುಳಿದ ಜನಾಂಗದವರಿಗೆ ಎಷ್ಟು ಒದಗಿಸಿದ್ದೀರಿ ಎಂದರೆ, 22 ಲಕ್ಷ ರೂಪಾಯಿಗಳು. ಏತಕ್ಕಾಗಿ ನೀರನ್ನು ಖರ್ಚು ಮಾಡುವ ಹಾಗೆ ಇದನ್ನು ಖರ್ಚು ಮಾಡುತ್ತೀರಿ ಹಿಂದುಳಿದ ಕೋಮಿನ ವರಿಗಾಗಿ ಏನಾದರೂ ಅನುಕೂಲ ಮಾಡಿದ್ದೀರಾ? ಈರೀತಿ 22 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಏನಾದರೂಹಿಂದುಳಿದ ಜನಕ್ಕೆ ಪ್ರತಿಯೊಬ್ಬರಿಗೂ ಒಂದೊಂದು ಮನೆಯನ್ನು ಕಟ್ಟಿಕೊಡುವುದಕ್ಕೆ ಆಯಿತೇ? ಒಂದು ಸಾವಿರ ಸಂಸಾರಗಳಿಗೂ ಉಪಯೋಗವಾಗುವಂತೆ ಮಾಡಲಾಗಲಲ್ಲ. ಪ್ರತಿಯೊಂದು ಸಂಸಾರಕ್ಕೂ ಗ್ಯಾಂಟನ್ನು ಕೊಟ್ಟು ಪ್ರತಿಯೊಬ್ಬರಿಗೂ ಮನೆ ಕಟ್ಟಿ ಕೊಡುವುದಕ್ಕೆ ಸಾಧ್ಯವೇ? This is an impossibility. ಹೀಗೆ 22 ಲಕ್ಷ ರೂಪಾಯಿಗಳನ್ನು ಖರ್ಚುಮಾಡುವುದಕ್ಕೆ ಬದಲಾಗಿ 22 ಸಾವಿರ ವಿದ್ಯಾರ್ಥಿಗಳಿಗಾಗಿ, ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಿದರೆ ಹಿಂದುಳಿದ ಕೋಮು ಮುಂದುವರಿದಂತಾಗುತ್ತದೆ. ಇಲ್ಲಿರತಕ್ಕ ಜನ ವಿದ್ಯಾವಂತರಾಗಿ ಮುಂದುವರಿಯುವಂತೆ ಆಗುತ್ತದೆ. ಹೀಗೆ ಮನೆ ಕಟ್ಟುತ್ತೇವೆಂದು ಹೇಳಿ, ಹೆಂಚುಗಳನ್ನು ಹಾಕಿಗಾಳಿಗೆ ತೂರಿಹೋಗುವಂತೆ ಮಾಡಿದರೆ ಅದರಲ್ಲಿ ಯಾವ ರೀತಿಯ ನೀತಿಯೂ ಕಾಣುವುದಿಲ್ಲ ಮತ್ತು ಜನರಿಗೆ ಇದರಿಂದ ಯಾವ ಉಪಯೋಗವೂ ಆಗುವುದಿಲ್ಲ. ಇದರಲ್ಲೆ ಏಕಾನಮಿಕ್ ಡೆವಲಪ್ಮೆಂಟ್ ಅಥವಾ ಇನ್ನಾವ ಡೆವಲಪ್ಮೆಂಟ್ ಆಗುತ್ತದೆಯೋ ನನಗೇನೋ ಗೊತ್ತಾಗುವುದಿಲ್ಲ. ಇದನ್ನು ಸರಕಾರದವರೇ ಅಲೋಚನೆ ಮಾಡಬೇಕು. ಇದು ತಪ್ಪೇ ಸರಿಯೇ ಎನ್ನುವುದನ್ನು ಯೊಚನೆಮಾಡಬೇಕು. ಇಪ್ಪೊತ್ತಿನ ದಿವಸ ಕೇಂದ್ರ ಸರಕಾರದವರು ಮಾಡಿರುವ ನೀತಿಗಳನ್ನು ಸಮಯ ಬಂದಾಗ ಬದಲಾಯಿಸಬೇಕು ಎಂದು ನಮ್ಮ ಪ್ರೈಮ್ ಮಿನಿಸ್ಟರವರೇ ಹೇಳಬೇಕಾದರೆ ನಮ್ಮವರೇ ಇರುವ ಸರಕಾರದವರು ಅವರ ನೀತಿಯನ್ನು ಏಕೆ ಬದಲಾಯಿಸಬಾರದು?

Sri B. K. PUTTARAMIYA.—I rise to a point of order. ಮಾನ್ಯ ಸದಸ್ಯರು ತಮ್ಮ ಭಾಷಣದಲ್ಲಿ ಈ ಸಭೆಯಲ್ಲಿಲ್ಲದೇ ಇರುವವರ ಎಂದರೆ ಶ್ರೀ ನೆಹರುರವರ ಹೆಸರನ್ನು ಹೇಳುತ್ತಿದ್ದಾರೆ. ಈ ಸಭೆಯಲ್ಲೆ ಅಧ್ಯಕ್ಷರು ಮಾಡಿರುವ ರೂಲಿಂಗಿನ ಪ್ರಕಾರ ಈ ಸಭೆಯಲ್ಲಿಲ್ಲದವರ ವಿಚಾರವನ್ನು ಮಾತನಾಡುವುದು ಸರಿಯಾಗಿಲ್ಲ. ಇದಕ್ಕೆ ಉತ್ತರ ಹೇಳಲು ಈ ಸಭೆಯಲ್ಲಿ ಶ್ರೀ ನೆಹರುರವರೇ ಇಲ್ಲದಿರುವಾಗ ಇದು ಸರಿಯೇ? Today the Chair has allowed him to mention Mr. Nehru's name here.

Mr. DEPUTY SPEAKER.—No point of order is involved.

ಶ್ರೀ ಜಿ. ದುಗ್ಗಪ್ಪ.—ನಾನು ಸರಕಾರವನ್ನು ಕೇಳಿಕೊಳ್ಳುವುದು ಇಷ್ಟೆ. ಇದರಲ್ಲಿ ಹರಿಜನರಿಗೆ ಹೌಸಿಂಗ್ ಗ್ಯಾಂಟಿಗಾಗಿ 22 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದನ್ನು ಬದಲಾಯಿಸಿ. ಇದರಿಂದ ನಿಮ್ಮ ಅಧಿಕಾರಕ್ಕೇನೂ ಧಕ್ಕೆ ಬರುವುದಿಲ್ಲ. ಸರಕಾರಕ್ಕೆ ನಿಜವಾಗಿಯೂ ಒಂದು moral courage ಬರುತ್ತದೆ. ಈ ರೀತಿಯಾಗಿ ತತ್ವಶಃ ಯೋಚನೆಮಾಡಿ ಇದನ್ನು ಬದಲಾಯಿಸಿ ವಿದ್ಯಾಭಿವೃದ್ಧಿಗಾಗಿ ಈ 22 ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ. ಇದರಿಂದ ಒಂದು ವಿಧವಾದ creative forceನ್ನು ತಯಾರು ಮಾಡಿದಹಾಗಾಗುತ್ತದೆ ಇಲ್ಲಿ ನನಗೆ ಆಶ್ಚರ್ಯವಾಗಿ ಕಾಣುತ್ತಿದೆ. ಈಗ ನಮ್ಮ ಮೈಸೂರಿಗೆ ಬಳ್ಳಾರಿ ಸೇರಿ ಎಷ್ಟೋ ವರ್ಷಗಳಾದವು, separate schemes for Bellary District ಎಂದು ಬಳ್ಳಾರಿಗೇ ಬೇರೆ ಒಂದು ಸ್ಕೀಮು, ಹಳೆಯ ಮೈಸೂರಿಗೇ ಒಂದು ಸ್ಕೀಮು, ಮಂಗಳೂರಿಗೇ ಒಂದು ಸ್ಕೀಮು, ಹೈದರಾಬಾದು ಕರ್ನಾಟಕಕ್ಕೇ ಒಂದು ಸ್ಕೀಮು, ಬಾಂಬೆ ಕರ್ನಾಟಕಕ್ಕೇ ಒಂದು ಸ್ಕೀಮು, ಹೀಗೆ ಸರಕಾರ ಮಾಡುತ್ತ ಬಂದಿದೆ. At least with regard to the development of depressed classes, a uniform policy should be adopted. ಆದರೆ ಪ್ರೈಮರಿ ಸ್ಕೂಲಿನಲ್ಲಿ ಮತ್ತು ಕಾಲೇಜಿನಲ್ಲಿ ಓದುವ ಹರಿಜನರಿಗೆ ಬೇರೆ ಬೇರೆ ರೀತಿಯ ಫೀ ಕನ್‌ಸೆಷನ್, ಮತ್ತು ಇತರ ಅನುಕೂಲಗಳು ಇರುತ್ತವೆ. ಇವೆಲ್ಲವನ್ನೂ ಯುನಿಫಾರಂ ಮಾಡುವುದಕ್ಕಾಗುವುದಿಲ್ಲ. ಆದರೂ ಹಿಂದುಳಿದ ಜನಾಂಗವು ಅಭಿವೃದ್ಧಿಯಾಗುವಂತೆ ಮಾಡಲು ಅವಕಾಶವಿದೆ ಎಂದು ಹೇಳಿ ಈ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

*ಶ್ರೀ ಎನ್. ಜಿ. ನರಸಿಂಹೇಗೌಡ (ಶ್ರವಣಬೆಳಗೊಳ).—ಸ್ವಾಮಿ, ಈ ಡಿಮ್ಯಾಂಡಿನ ಮೇಲೆ ಮಾತನಾಡುತ್ತ ಮೊದಲನೆಯದಾಗಿ ರೂರಲ್ ಡೆವಲಪ್‌ಮೆಂಟಿನ ವಿಚಾರವಾಗಿ ಮಾತನಾಡಬೇಕೆಂದಿದ್ದೇನೆ. ಈ ಬಜೆಟ್ಟಿನಲ್ಲಿ ರೂರಲ್ ಡೆವಲಪ್‌ಮೆಂಟಿಗಾಗಿ 1,48,90,000 ರೂಪಾಯಿಗಳನ್ನು ಒದಗಿಸಿದ್ದಾರೆ. ಇದರಲ್ಲಿ ಮುಖ್ಯವಾಗಿ ಹಳ್ಳಿ ಗಾಡಿಗೆ ಎಷ್ಟು ಪ್ರಯೋಜನವಾಗಿದೆ ಎಂದು ನೋಡಿದರೆ, ಈ ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟಿಗೆ 55,000 ರೂಪಾಯಿಗಳನ್ನು ಒದಗಿಸಿದ್ದಾರೆ ಮತ್ತು ಡೈರೆಕ್ಟರೇಟ್ ಆಫ್ ಸೋಷಿಯಲ್ ವೆಲ್‌ಫೇರ್‌ಗೆ 80,35,000 ರೂಪಾಯಿಗಳನ್ನು ಒದಗಿಸಿದ್ದಾರೆ. ನಿಜವಾಗಿಯೂ ಹಳ್ಳಿಗಾಡಿನ ಜನಾಂಗಕ್ಕೆ ಇದರಿಂದ ಉಪಯೋಗವಾಗುವುದು ಬಹಳ ಕಡಮೆ. ಇದರಲ್ಲಿ ಅನೇಕ ಸ್ಕೀಮುಗಳನ್ನು ಜಾರಿಗೆ ತರಬೇಕೆಂದು ಇದ್ದಾರೆ. ಆದರೆ ಹಳ್ಳಿಗಾಡಿನ ಅಭಿವೃದ್ಧಿ ಹೇಗೆಮಾಡಬೇಕು ಎನ್ನುವುದನ್ನು ಯೋಚನೆ ಮಾಡಿದ ಹಾಗೆ ಕಾಣಲಿಲ್ಲ. ನಮ್ಮ ಷೆಡ್ಯೂಲ್ ಕ್ಯಾಸ್ಟ್ ಪಂಗಡದ ವಿಷಯವನ್ನು ತೆಗೆದುಕೊಳ್ಳೋಣ. ಅನೇಕ ಮಂದಿ ಆದಿಕರ್ನಾಟಕರು ಮತ್ತು ಆದಿ ದ್ರಾವಿಡರು ಹಳ್ಳಿಗಳಲ್ಲಿ ಇದ್ದಾರೆ. ಇವರಿಗೆ ಹಳ್ಳಿಗಳಲ್ಲಿ ಕುಡಿಯುವುದಕ್ಕೆ ಬಾವಿ ಇಲ್ಲ. ನಾನು ಹಿಂದೆ ಈ ಸಭೆಯು ಕುಳಿತಿದ್ದಾಗ ಹೇಳಿದ್ದೆ. ಒಂದು ಸರ್ವೆಮಾಡಿ ನಮ್ಮ ದೇಶದಲ್ಲಿರುತಕ್ಕ ಆದಿ ಕರ್ಣಾಟಕರು ಮತ್ತು ಆದಿದ್ರಾವಿಡರು ಎಲ್ಲಿ ಏನಾನವಾಗಿದ್ದಾರೆ, ಎಲ್ಲಿ ಎಷ್ಟು ಬಾವಿಗಳಿವೆ ಎಂದು ನೋಡಿ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅದಷ್ಟು ಬಾವಿಗಳನ್ನು ಸೇರಿಸಿ ದೇಶಾದ್ಯಂತ ಕುಡಿಯುವುದಕ್ಕೆ ನೀರು ಒದಗಿಸಿ ಎಂದು ಹೇಳಿದ್ದೆ. ಅವರಿಗೆ ಇವೊತ್ತಿನ ದಿವಸ ನೋಡುವುದಾದರೆ ಒಂದು ತಾಲ್ಲೂಕಿಗೆ ಒಂದು ಬಾವಿ ಅಥವಾ ಎರಡು ಬಾವಿಗಳು ಸಿಕ್ಕಬಹುದು. ಹೀಗಾದರೆ ನಾವು ಹಿಂದುಳಿದ ಜನಾಂಗದವರಿಗೆ ಏನು ಸಹಾಯ ಮಾಡುತ್ತೇವೆ ಎಂದು ಯೋಚನೆ ಮಾಡಬೇಕಾಗಿದೆ. ನನ್ನ ಸಲಹೆ ಇಷ್ಟೆ: ನೀರಿಗೋಸ್ಕರ ಒಂದು ಕೋಟಿ ರೂಪಾಯಿಗಳಷ್ಟು ಖರ್ಚಾದರೂ ಚಿಂತೆಯಿಲ್ಲ, ಹಿಂದುಳಿದ ಪಂಗಡದವರು ವಾಸವಾಗಿರುವ ಕೇರಿಗೆ ಕಡ್ಡಾಯವಾಗಿ ಪ್ರತಿಹಳ್ಳಿಯಲ್ಲೂ ನೀರು ಒದಗಿಸಿದರೆ ನಿಜವಾಗಿ ನಾವು ಏನಾದರೂ ಸಾರ್ಥಕ ಕೆಲಸವಾಡಿದಂತಾಗುತ್ತದೆ. ಎರಡನೆಯದಾಗಿ ಹೌಸಿಂಗ್ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಹೇಳಿದರು. ಒಂದು ಉದಾಹರಣೆಯನ್ನು ಹೇಳುವುದಾದರೆ, ಅನೇಕರಿಗೆ ಹೆಂಚು ಮತ್ತು ಕಿಟಕಿ ಬಾಗಿಲನ್ನು ನಷ್ಟೈಮಾಡುವಾಗ ಅರ್ಧ ಬೇಯದೆ ಇರುವ ಹೆಂಚನ್ನು ನಷ್ಟೈಮಾಡಿದ್ದಾರೆ. ನಮ್ಮ ಯಲಹಂಕ ಫಸ್ಟ್‌ಗ್ರೇಡ್ ಹೆಂಚಿಗೆ 135 ರೂಪಾಯಿ ಕೊಟ್ಟರೆ, 200 ರೂಪಾಯಿ ಚಿಲ್ಲರೆ ಹೆಂಚಿಗೆ ಟೆಂಡರ್‌ರೇಟ್ ಕೊಟ್ಟು ಅರ್ಧಬೇಯದ ಹೆಂಚು ಕೊಡುತ್ತಿದ್ದಾರೆ. ನೀವು ಹಾಗೆ ಮಾಡಬಾರದು. ಯಲಹಂಕ ಹೆಂಚನ್ನು ತರಿಸಿಕೊಡಬೇಕು. ಈ ಹೌಸಿಂಗ್ ಸ್ಕೀಮು ಪದ್ಧತಿಯನ್ನು ತಪ್ಪಿಸಿ ಬಿಟ್ಟು ಯಾರಾದರೂ ಆದಿ ಕರ್ಣಾಟಕರು, ಆದಿ ದ್ರಾವಿಡರು ಮನೆ ಕಟ್ಟುತ್ತೇವೆಂದು ಮುಂದೆ ಬಂದರೆ ಅವರಿಗೆ 500 ರೂಪಾಯಿ 1,000 ರೂಪಾಯಿ ಇಂಟರೆಸ್ಟ್ ಇಲ್ಲದೆ ಸಾಲ ಕೊಡಬೇಕು. 20 ಲಕ್ಷ ರೂಪಾಯಿಗಳನ್ನು ಮನೆಗೋಸ್ಕರ ಪ್ರೊವೈಡ್ ಮಾಡಿರುವುದನ್ನು ತಪ್ಪಿಸಿ ಅದನ್ನು ಕಂಪಲ್‌ಸರಿ ಎಜುಕೇಷನ್ ಕಡ್ಡಾಯವಾಗಿ ತರುವುದಕ್ಕೆ ಉಪಯೋಗಿಸಬೇಕು. ಕಂಪಲ್‌ಸರಿ ಎಜುಕೇಷನ್ ತರದಿದ್ದ ಇದ್ದರೆ ಎಷ್ಟು ಕೋಟಿ ಖರ್ಚು ಮಾಡಿದರೂ ಪ್ರಯೋಜನವಿಲ್ಲ. ಆದ್ದರಿಂದ ನನ್ನ ಅಭಿಪ್ರಾಯ ಮನೆಕಟ್ಟಿ ಕೊಡುವ ಬದಲು ಸ್ಕಾಲರ್‌ಷಿಪ್ ಕೊಟ್ಟು ಸ್ಕೂಲು ಪುಸ್ತಕಗಳನ್ನು ಕೊಟ್ಟು ಹೆಣ್ಣುಮಕ್ಕಳಿಗೂ, ಗಂಡು ಮಕ್ಕಳಿಗೂ ವಿದ್ಯಾಭ್ಯಾಸ ಮಾಡಿಸಿದರೆ ಒಳ್ಳೆಯದಾಗುತ್ತದೆ. ಹಳ್ಳಿಗಳಲ್ಲಿ ಹಿಂದುಳಿದ ಜನಾಂಗ ಸಹ ಮುಂದೆ ಬರುತ್ತಾರೆ. ಬಹಳ ದಿವಸಗಳ ಹಿಂದೆ ನಮ್ಮ ದೇಶದ ಆದಾಯ ನುಮಾರು 5 ಕೋಟಿ ರೂಪಾಯಿಗಳು ಇದ್ದಾಗ್ಲೂ ಕೂಡ ನೇರವಾಗಿ ಹಳ್ಳಿಗಳ ಪುರೋಭಿವೃದ್ಧಿಯಾಗುತ್ತಿತ್ತು. ಆದರೆ ಇವೊತ್ತಿನ ದಿವಸ ಯೋಚನೆಮಾಡುವುದಾದರೆ ಷೆಡ್ಯೂಲ್ ಕ್ಯಾಸ್ಟ್ ಪುರೋಭಿವೃದ್ಧಿ ಬಿಟ್ಟು ಬಿಟ್ಟು ಹಳ್ಳಿಗಾಡಿನ ಕಡೆ ಗಮನ ಬಹಳ ಕಡಮೆಯಾಗುತ್ತಿದೆ. ಈ ವರ್ಷ ನಮ್ಮ ಡಿಸ್ಟ್ರಿಕ್ಟಿನ ಸ್ಥಿತಿ ಹೇಳುವುದಾದರೆ ಇದುವರೆಗೂ ರೂರಲ್ ಡೆವಲಪ್‌ಮೆಂಟ್ ಗ್ಯಾಂಟುಗಳು ಬಂದಿಲ್ಲ. ಬರತಕ್ಕ ವಾಟರ್ ನಷ್ಟೈ ಗ್ಯಾಂಟನ್ನು ವರ್ಷದ ಕೊನೆಯಲ್ಲಿ ಕೊಡುತ್ತಾರೆ. ಏನು ಬಜೆಟ್ಟಿನಲ್ಲಿ ಪ್ರೊವೈಡ್ ಮಾಡುತ್ತಾರೋ ಅದನ್ನು

ತಕ್ಷಣ ಸ್ಯಾಂಕ್ಷನ್ ಮಾಡಬೇಕು. ಬಡ್ಜೆಟ್ಟಿನಲ್ಲಿ ಪ್ರೊವೈಡ್ ಮಾಡಿದ್ದೂ ಕೂಡ, ಫೈನಾನ್ಸಿಯಲ್ ಸೆಕ್ರೆಟೇರಿಯಟ್‌ನಲ್ಲಿ ನಿಧಾನವಾಗುತ್ತದೆ. ಆದ್ದರಿಂದ ಗ್ರಾಂಟಿನ ಉಪಯೋಗ ದೇಶಕ್ಕೆ ಆಗುತ್ತಾ ಇಲ್ಲ. ಕೊನೆಯಕಾಲದಲ್ಲಿ ಗ್ರಾಂಟನ್ನು ಕೊಡುವುದರಿಂದ ಹಿಂದಿನ ಪೆಂಡಿಗ್ ವರ್ಕ್ಸ್ ಏನು ಇವೆ, ಯಾವುದು ಪೇಮೆಂಟ್ ಆಗಬೇಕೋ ಅದಕ್ಕೆ ಉಪಯೋಗಿಸಿಕೊಳ್ಳುತ್ತಿದ್ದಾರೆ. ಡೆಪ್ಯುಟಿ ಕಮೀಷನರ ಹತ್ತಿರ ಹೋಗಿ ರೂರಲ್ ಡೆವಲಪ್‌ಮೆಂಟ್ ಗ್ರಾಂಟನ್ನು ಫ್ರೆಷ್ ವರ್ಕ್ಸ್‌ಗೆ ಕೊಡಿ ಎಂದು ಕೇಳಿದರೆ, ಯಾವುದು ಪೆಂಡಿಂಗ್ ವರ್ಕ್ಸ್ ಇದೆಯೋ ಅಡೀಷನಲ್ ಗ್ರಾಂಟು ಕೊಟ್ಟು ಆಮೇಲೆ ಕೇಳಿ ಎಂದು ಹೇಳಿದರು. ಆಗ ವರ್ಷದ ಕೊನೆ ಬರುತ್ತದೆ. ಪೇಮೆಂಟ್ಸ್ ಕೊಡುವುದಕ್ಕೆ ಬೇಕಾಗುತ್ತದೆ. ಹಾಗೆ ಮಾಡಬೇಡಿ. ಮೊದಲು ಹಳ್ಳಿಯಿಂದ ಪಳಿಗೆ ಹೋಗುವ ರಸ್ತೆಯನ್ನು ಮಾರ್ಪಾಡು ಮಾಡಬೇಕು. ಎರಡನೆಯದು ಕುಡಿಯುವ ನೀರು ಇಲ್ಲದಿದ್ದರೆ ನೀರಿನಬಾವಿಯ ವ್ಯವಸ್ಥೆಯನ್ನು ಹಳ್ಳಿಗಳಲ್ಲಿ ಮಾಡಬೇಕು. ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ 400 ಹಳ್ಳಿಗಳಿವೆ. ಆದರೆ 150 ಬಾವಿಗಳು ಮಾತ್ರ ಇವೆ. ಅನೇಕ ಸಾರಿ ರಿಪೋರ್ಟು ಕೊಟ್ಟಿದ್ದಾರೆ. ಆದರೂ ಕೂಡ ಏನೂ ಆಗಲಿಲ್ಲ. ಆದ್ದರಿಂದ ಎಷ್ಟು ಬಾವಿಗಳನ್ನು ಮಾಡಬೇಕು ಎನ್ನುವ ಬಗ್ಗೆ ಒಂದು ರೆಗ್ಯುಲರ್ ಸ್ಕೀಮನ್ನು ಹಾಕಿಕೊಂಡು ಹಳ್ಳಿಯ ಜನರಿಗೆ ಉತ್ತಮವಾದ ನೀರನ್ನು ಒದಗಿಸಿ ಕೊಟ್ಟರೆ ಅವರ ಆರೋಗ್ಯ ಪರಿಸ್ಥಿತಿ ಉತ್ತಮಗೊಳ್ಳುತ್ತದೆ.

ಇನ್ನು ರೂರಲ್ ಡೆವಲಪ್‌ಮೆಂಟ್ ರೋಡನ್ನು ಯಾರು ಮೈನ್‌ಟೈನ್ ಮಾಡಬೇಕು ಎನ್ನುವದು ನಿರ್ದಿಷ್ಟವಾಗಿಲ್ಲ. ಹಳ್ಳಿಗಳ ಕಡೆ ರೂರಲ್ ಡೆವಲಪ್‌ಮೆಂಟ್ ಇಲಾಖೆಯವರು ರೋಡ್‌ಗಳನ್ನು ಮಾಡುತ್ತಾರೆ. ಅಷ್ಟಕ್ಕೇ ನಿಂತು ಹೋಗುತ್ತದೆ. 4—5 ಇಂಚು ದೊಡ್ಡ ಮಳೆ ಬಂದರೆ ಖರ್ಚು ಮಾಡಿದ ದುಡ್ಡು ವೇಸ್ಟ್ ಆಗುತ್ತದೆ. ತಿರುಗಾಡುವುದಕ್ಕೆ ದಾರಿ ಇರುವುದಿಲ್ಲ. ಪಾಲಸಿಯನ್ನು ಸರ್ಕಾರದವರು ಹಾಕುವಾಗ ರೂರಲ್ ಡೆವಲಪ್‌ಮೆಂಟ್ ಇಲಾಖೆಯವರು ಮಾಡುವ ರಸ್ತೆಯನ್ನು ಕಡ್ಡಾಯವಾಗಿ P.W.D.ಗೆ ಸೇರಿಸಬೇಕು ಎಂದು ಮಾಡಿದರೆ ಮುಂದಕ್ಕೆ ಮೈನ್‌ಟೈನ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅಲ್ಲಿಯವರೆಗೂ ಕೂಡ ರೂರಲ್ ಡೆವಲಪ್‌ಮೆಂಟ್ N.E.S. ಸ್ಕೀಮುಗಳಿಂದ ಆಗಿರುವ ರೋಡುಗಳು ಹಾಗೆಯೇ ನಿಂತುಹೋಗಿವೆ. ಯಾರು ಮೈನ್‌ಟೈನ್ ಮಾಡಬೇಕು ಎನ್ನುವ ಬಗ್ಗೆ ಇನ್ನೂ ತಿರ್ಮಾನವಾಗಿಲ್ಲ. ಆದ್ದರಿಂದ ಇನ್ನುಮುಂದೆ ಮಾಡತಕ್ಕ ಹಳ್ಳಿಗಾಡಿನ ರೋಡುಗಳನ್ನು ಕಡ್ಡಾಯವಾಗಿ P.W.D.ಗೆ ಸೇರಿಕೊಳ್ಳುವಂತೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಮೂರನೆಯದಾಗಿ ಎಕ್ಸೈಜ್ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಿಜವಾಗಿ ಪ್ರಜಾಪ್ರಭುತ್ವದಲ್ಲಿ ಕಾಂಗ್ರೆಸ್ಸಿನಲ್ಲಿ ಎಷ್ಟರ ಮಟ್ಟಗೆ ನೀತಿಯ ಮಟ್ಟ ಇಳಿಯುತ್ತಿದೆ ಎನ್ನುವುದನ್ನು ಹೇಳುವುದಾದರೆ.

ಶ್ರೀ ಟಿ. ಹನುಮಯ್ಯ (ಚಳ್ಳಕೆರೆ).—ಸ್ವಾಮಿ, ಒಂದು ಪಾಯಿಂಟ್ ಆಫ್ ಆರ್ಡರ್. ಯಾವುದಾದರೂ ಒಂದು ಸಂಸ್ಥೆಯಮೇಲೆ ಮಾತನಾಡಬಾರದು ಎಂದಿದೆ. ಆದರೂ ಅವರು ಕಾಂಗ್ರೆಸ್‌ಸಂಸ್ಥೆಯ ಮೇಲೆ ಹೇಳುತ್ತಿದ್ದಾರೆ.....

ಉಪಾಧ್ಯಕ್ಷರು.—ಅದಕ್ಕೆ ಸಂಬಂಧಿಸಿಲ್ಲ.

ಶ್ರೀ ಎಂ. ಜಿ. ನರಸಿಂಹೇಗೌಡ.—ಎಕ್ಸೈಜ್ ಪಾಲಿಸಿಯ ವಿಷಯದಲ್ಲಿ ಇದುವರೆಗೂ ನುಪಾರು 10 ವರ್ಷ ಆದರೂ ಕೂಡ ನಿರ್ದಿಷ್ಟವಾದ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಶಕ್ತಿಯಿಲ್ಲ. ಮೊನ್ನೆ ಮುಖ್ಯಮಂತ್ರಿಗಳು ಮಾತನಾಡುತ್ತಾ ಇರುವಾಗ ಮುಂದಿನ ವರ್ಷದ ಅಂತ್ಯದೊಳಗೆ ಒಂದು ಖಚಿತ ತೀರ್ಮಾನಕ್ಕೆ ಬರುತ್ತೇವೆಂದು ಹೇಳಿದ್ದಾರೆ. ಖಚಿತ ತಿರ್ಮಾನ ಆದರೆ ಸರಿ. ಇವೊತ್ತಿನ ದಿವಸ ಕೆಲವು ಡಿಸ್ಟ್ರಿಕ್ಟ್‌ಗಳಲ್ಲ ಪ್ರೊಹಿಬಿಷನ್ ತಂದಿರತಕ್ಕದ್ದು, ಕೆಲವು ಡಿಸ್ಟ್ರಿಕ್ಟ್‌ಗಳಲ್ಲಿ ಎಕ್ಸೈಜ್ ಪದ್ಧತಿ ಇರುವುದನ್ನು ನೋಡಿದರೆ, ನಿಜವಾಗಿ ಹೇಳಬೇಕಾದರೆ, ಕೆಲವು ಜನ ಬಂಡವಾಳಶಾಹಿಗಳ ಅನುಕೂಲಕ್ಕೋಸ್ಕರ ಇಂತಹ ಎಕ್ಸೈಜ್ ಪಾಲಿಸಿಯನ್ನು ಇಟ್ಟುಕೊಂಡಿದ್ದಾರೆಯೇ ವಿನಾ ಬೇರೆ ದೃಷ್ಟಿಯಿಂದ ಅಲ್ಲ ಎಂದು ಹೇಳಬೇಕು. ಇಂದಿನ ದಿವಸ ಹಳ್ಳಿಗಾಡಿನಲ್ಲಿ ಪ್ರೊಹಿಬಿಷನ್ ಏರಿಯಾ ಎಲ್ಲಿ ಇದೆಯೋ ಆ ಭಾಗಕ್ಕೆ ಸೇಂದಿ ಶರಾಬು ಮಾಡುವ ಪ್ರದೇಶವನ್ನು ಸೇರಿಸಿರುವುದರಿಂದ ನಮಗೆ ಬರತಕ್ಕ ಇಕಂ ಹೋಗಿ ಪ್ರತಿಯೊಂದು ಮನೆಯೂ ಒಂದು ಕಾಟೇಜ್ ಇಂಡಸ್ಟ್ರಿಗೆ ಆತರವಾಗಿದೆ. ನಿಜವಾಗಿ ಅದನ್ನು ಕಂಡುಹಿಡಿಯುವ ಎಕ್ಸೈಜ್ ಡಿಪಾರ್ಟ್‌ಮೆಂಟ್ ಇದ್ದಾರೆಯೇ ಎಂದು ಅನುಮಾನವಾಗುತ್ತದೆ. ಎಕ್ಸೈಜ್ ಡಿಪಾರ್ಟ್‌ಮೆಂಟಿನವರಿಗೆ ಮಾಮೂಲು ಕೊಟ್ಟರೆ ಅವರೇ ಹೇಳುತ್ತಾರೆ ಇವೊತ್ತಿನ ದಿವಸ ಪೋಲೀಸಿನವರು ಬರುತ್ತಾರೆ, ಹುಷಾರಾಗಿರಿ ಎಂದು. ಆರೋಗ್ಯ, ದೃಷ್ಟಿಯಿಂದ ನಮ್ಮ ಹಳ್ಳಿಗಾಡಿನ ಜನರ ಮಟ್ಟ ಹೇಗಿದೆ ಎಂದರೆ ಬೆಳಿಗ್ಗೆ ಹೋದರೆ ಕಳ್ಳಬಟ್ಟಿ ಸಾರಾಯಿ ಮಾರುವುದು. ಮೊದಲು ಒಬ್ಬನು ಕುಡಿಯುತ್ತಿದ್ದರೆ ಈಗ ಮನೆಯ ಮಕ್ಕಳೆಲ್ಲಾ ಕುಡಿಯುವ ಪದ್ಧತಿಯಾಗಿದೆ. ಈ ಮಧ್ಯೇ ನಮಗೆ ಬರುವ ಇಕಂಧ ಹೋಯಿತು. ಕೋರ್ಟಿಗೆ ಹೋಗಿ ಕೇಸಿಗೆ ಸಿಕ್ಕಿಕೊಂಡು ಅಸ್ತಿಪಾಸ್ತಿ ಇದ್ದರೂ ಹಾಳಾಗಿಹೋಗುವ ಪರಿಸ್ಥಿತಿ ಬಂದಿದೆ. ಈ ವಿಷಯದಲ್ಲಿ ಒಂದು ತೀರ್ಮಾನಕ್ಕೆ ಬರಬೇಕು. ಈ ವರ್ಷದ ಅಂತ್ಯದೊಳಗೆ ಎಕ್ಸೈಜ್ ಪೂರ್ತಿತೆಗೆದುಹಾಕುತ್ತೇವೆಂದು ಹೇಳಿ, ಇಲ್ಲದಿದ್ದರೆ ಎಲ್ಲಾ ಕಡೆಯೂ ಇಂಟ್ರೊರ್‌ಡ್ಯೂಸ್ ಮಾಡುತ್ತೇವೆಂದು ಹೇಳಿ ಈ ರೀತಿ ಒಂದು ತೀರ್ಮಾನಕ್ಕೆ ಬಾರದಿದ್ದರೆ ಹಳ್ಳಿಗಾಡಿನಲ್ಲಿ ಇರತಕ್ಕ ಜನಗಳನ್ನು ಹಾಳುಮಾಡುವುದಕ್ಕೆ ಕಾಂಗ್ರೆಸ್ ಸರಕಾರ ಇದೆ ಎಂದು ಹೇಳುತ್ತೇನೆ. ಶ್ರೀ ಜವಾಹರ್‌ಲಾಲ್ ನೆಹರುರವರೂ ಸಹ ಪಾಲಿಸಿಯ ವಿಷಯದಲ್ಲಿ ಡೆಫಿನಿಟ್ಟಾಗಿ ಹೇಳಿದ್ದಾರೆ. ಇದು ಸಕ್ಸೀಡ್ ಆಗುವುದಿಲ್ಲ. ಇದರಲ್ಲಿ ಅನೇಕ ನ್ಯೂನತೆಗಳಿವೆ, ಮಾರ್ಪಾಡುಮಾಡಬೇಕು ಎಂದು ಒಂದು ಕಮಿಟಿಯನ್ನು ಅಪಾಯಿಂಟ್ ಮಾಡಿದರು. ಆ ಕಮಿಟಿಯವರು ಎಕ್ಸೈಜ್ ಪಾಲಿಸಿಯ ವಿಷಯದಲ್ಲಿ ಡೆಫಿನಿಟ್ಟಾಗಿ ಹೇಳಿದ್ದಾರೆ.

4 P.M.

ನಮ್ಮ ಸಂಸ್ಥಾನ ಸರ್ಕಾರ ಏಕೆ ಹಿಂದುಳಿದಿದೆ ಎಂದು ಹೇಳಲು ಶಕ್ತಿ ಇಲ್ಲದ ಹಾಗಾಗಿದೆ. ಹಾಸನ ಜಿಲ್ಲೆಯಲ್ಲಿ ಈಗ ಎಕ್ಸೈಜ್ ಹರಾಜು ಆಗುತ್ತಿರುವಾಗ ಯಾವ ನೀತಿಯನ್ನಿಟ್ಟುಕೊಂಡಿದ್ದಾರೆಂದು ಗೊತ್ತಾಗುವುದಿಲ್ಲ. ಸೇಂದಿ ಮತ್ತು ಸಾರಾಯಿ ಅಂಗಡಿಗಳನ್ನು ಪ್ರತ್ಯೇಕವಾಗಿ ಹರಾಜು ಮಾಡತಕ್ಕ ಪದ್ಧತಿ ಇತ್ತು. ಈಗ ಎಲ್ಲ ಅಂಗಡಿಗಳನ್ನೂ ಒಟ್ಟಿಗೆ ಹರಾಜು ಮಾಡತಕ್ಕ ಪದ್ಧತಿ ಬಂದಿದೆ. ಅಂಗಡಿಗಳನ್ನು ಪ್ರತ್ಯೇಕವಾಗಿ ಹರಾಜು ಹಾಕುವುದರಿಂದ ಸರ್ಕಾರಕ್ಕೆ ಆದಾಯವೂ ಜಾಸ್ತಿಯಾಗುತ್ತದೆ, ಮತ್ತು ನಿಣ್ಣ

(ಶ್ರೀ ಎನ್. ಜಿ. ನರಸಿಂಹೇಗೌಡ)

ಪುಟ್ಟ ಕಂಟ್ರಾಕ್ಟರುಗಳು, ಮಾಮೂಲಾಗಿ ಇರುವವರಿಗೆ ಅನುಕೂಲವಾಗುತ್ತದೆ. ಈ ವರ್ಷ ಹಾನನ ಜಿಲ್ಲೆಯಲ್ಲಿರುವ ಎಲ್ಲ ಅಂಗಡಿಗಳನ್ನೂ ಒಟ್ಟಿಗೆ ಹರಾಜು ಹಾಕಲು ಏರ್ಪಾಡು ಮಾಡಿರುವುದಾಗಿ ನನ್ನ ಗಮನಕ್ಕೆ ಬಂದಿದೆ. ಇದನ್ನು ತಪ್ಪಿಸಿ ಹಿಂದಿನಿಂದಲೂ ಮಾಡುತ್ತಿದ್ದಂತೆ ಅಂಗಡಿಗಳನ್ನು ಪ್ರತ್ಯೇಕವಾಗಿ ಹರಾಜು ಮಾಡಬೇಕೆಂದು ಸೂಚಿಸುತ್ತೇನೆ.

ನಗರ ಪ್ರದೇಶಗಳಲ್ಲಿ ಲಕ್ಷಾಂತರ ರೂಪಾಯಿ ಉತ್ಪತ್ತಿ ಬರತಕ್ಕ ಕಳ್ಳಭಟ್ಟಿ ತಯಾರಿಕೆ ಜಾಸ್ತಿಯಾಗಿದೆ. ಕಳ್ಳಭಟ್ಟಿ ಪರಾಬು ಬೆಲೆ ಬಹಳ ಕಡಮೆ ಇದೆ. ಅಂಗಡಿಗಳಲ್ಲಿ ತೆಗೆದುಕೊಳ್ಳುವ ಪರಾಬಿನ ಬೆಲೆ ಮೂರು ರೂಪಾಯಿಗಳಾದರೆ ಇದರ ಬೆಲೆ ಒಂದು ರೂಪಾಯಿ ಮಾತ್ರವಾಗುತ್ತದೆ. ಕಳ್ಳಭಟ್ಟಿ ಪರಾಬು ಮಾಡುವುದನ್ನು ನಿಲ್ಲಿಸಬೇಕು ಎಂದು ಬಹಳ ದಿನಗಳಿಂದಲೂ ಅನೇಕ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಕಳ್ಳಭಟ್ಟಿ ತಯಾರಿಕೆಯನ್ನು ನಿಲ್ಲಿಸುವ ವಿಷಯದಲ್ಲಿ ಎಕ್ಸೈಜ್ ಇಲಾಖೆಯವರೂ ನಿಗಾ ಕೊಟ್ಟಿಲ್ಲ ; ಪೋಲೀಸ್ ಇಲಾಖೆಯವರೂ ನಿಗಾ ಕೊಟ್ಟಿಲ್ಲ. ಇದರಿಂದ ಎಕ್ಸೈಜ್ ಮತ್ತು ಪೋಲೀಸ್ ಇಲಾಖೆಯವರಿಗೆ ಮಾಮೂಲು ಹೆಚ್ಚಿಗೆ ಬರುತ್ತಿದೆ. ಈ ಎರಡು ಇಲಾಖೆಗಳಿಗೂ ಮಾಮೂಲು ನೂರು ರೂಪಾಯಿಗಳಿಂದ ಸಾವಿರ ರೂಪಾಯಿಗಳವರೆಗೆ ಹೋಗುತ್ತಿದೆ. ಆದುದರಿಂದ ಪಾನನಿರೋಧವನ್ನು ಪೂರ್ತಿ ಜಾರಿಗೆ ತರುವುದಾಗಲೀ ಅಥವಾ ಅದನ್ನು ಪೂರ್ತಿತೆಗೆದು ಹಾಕುವುದಾಗಲೀ ಯಾವುದಾದರೂ ಒಂದು ಖಚಿತವಾದ ತೀರ್ಮಾನಕ್ಕೆ ಸರ್ಕಾರದವರು ಬರಬೇಕು.

ಇನ್ನೊಂದು ವಿಚಾರ, ಆರೋಗ್ಯ ದೃಷ್ಟಿಯಿಂದ ನೀರಾ ಉಪಯೋಗಿಸುವುದು ಒಳ್ಳೆಯದು. ಇದನ್ನು ಎಲ್ಲ ಜನಾಂಗದವರೂ ಉಪಯೋಗಿಸುತ್ತಾರೆ. ಅದರಿಂದ ನಮಗೆ ಆದಾಯ ಸಹ ಬರುತ್ತದೆ. ಆದುದರಿಂದ ನೀರಾ ಪದ್ಧತಿಯನ್ನು ನಮ್ಮ ದೇಶದಲ್ಲಿ ಜಾರಿಗೆ ತರುವುದು ಬಹಳ ಒಳ್ಳೆಯದೆಂದು ಹೇಳುತ್ತೇನೆ.

ಕಳ್ಳಭಟ್ಟಿ ಇರತಕ್ಕ ಕಡೆ ಜನರ ಆರ್ಥಿಕಸ್ಥಿತಿ ಹೇಗಿದೆ ಎಂಬುದನ್ನು ತಿಳಿದುಕೊಳ್ಳಲು ಎಕ್ಸೈಜ್ ಮಂತ್ರಿಗಳೂ ಮುಖ್ಯಮಂತ್ರಿಗಳೂ ಬೇರೆ ಡ್ರೆಸ್ಸಿನಲ್ಲಿ ಹೋಗಿ ವಿಷಯಗಳನ್ನು ತಿಳಿಯಬೇಕು. ಪ್ರವಾಸ ಹೋದಾಗ ದೊಡ್ಡ ಮನುಷ್ಯರೊಡನೆ ಮಾತನಾಡಿದರೆ ಏನೂ ಗೊತ್ತಾಗುವುದಿಲ್ಲ. ಮಂತ್ರಿಗಳು ತಮ್ಮಲ್ಲಿ ಬಂದ ಕೆಲವು ಕಾಗದಗಳಿಗೆ ಸೈನ್ ಹಾಕುವುದಿಲ್ಲ. ಹೀಗೆ ಮಾಡಿದರೆ ಸರ್ಕಾರ ಬಹಳ ದಿವಸ ಉಳಿಯುವುದಿಲ್ಲ. ಈ ಸಭೆಯಲ್ಲಿ ಅಧಿಕಾರದಲ್ಲಿರುವ ಪಕ್ಷದವರು 150 ಜನರಿದ್ದಾರೆ. ಇತರರು 58 ಜನರಿದ್ದಾರೆ, ತಾವು ಏನು ಮಾಡಿದರೂ ನಡೆಯುತ್ತದೆಂದು ಬಿಲ್ಲುಗಳನ್ನು ತಂದು ಪಾಸುಮಾಡಿಸಬಹುದು. ಆದರೆ ದೇಶಕ್ಕೆ ಒಳ್ಳೆಯದಾಗಬೇಕಾಗಿದ್ದರೆ ಪ್ರಾಕ್ಟಿಕಲ್ ಆಗಿ ನೋಡಬೇಕು. Interior ಪ್ರದೇಶಗಳಿಗೆ ಮಂತ್ರಿಗಳು ಹೋಗಿ ಅಲ್ಲಿ ಏನು ನಡೆಯುತ್ತಿದೆ, ಯಾವ ರೀತಿ ಮಾಡಿ ಎಲ್ಲವನ್ನೂ ಸರಿಪಡಿಸಬೇಕು ಎಂದು ಯೋಚನೆಮಾಡಬೇಕು. ಹಳ್ಳಿಗಾಡಿನ ಜನಗಳಿಗೆ ಅನುಕೂಲವಾಗುವಂಥದ್ದನ್ನು ಮಾಡಬೇಕಾದರೆ ಒಂದು ನೀತಿಯನ್ನಿಟ್ಟುಕೊಂಡು ಕೆಲಸ ಮಾಡಬೇಕು. ಯಾರಿಗೋ ಸಹಾಯ ಮಾಡುವ ದೃಷ್ಟಿಯಿಂದ ಕೆಲಸ ಮಾಡುವುದಾದರೆ ದೇಶ ಖಂಡಿತ ಮುಂದಕ್ಕೆ ಬರುವುದಿಲ್ಲ.

Other taxes ವಿಷಯಗಳಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ರೈತರ ಆರ್ಥಿಕ ಮಟ್ಟದ ದೃಷ್ಟಿಯಿಂದ ನೋಡುವುದಾದರೆ, Agricultural income-taxನಿಂದ ರೈತರಿಗೆ ಬಹಳ ನೋವಾಗುತ್ತಿದೆ. ಇದಕ್ಕೆ ಸಂಬಂಧಪಟ್ಟ ಮಸೂದೆ ನಮ್ಮ ಮುಂದೆ ಬಂದಾಗ ನಾವೆಲ್ಲ ಅನೇಕ ವಿಷಯಗಳಲ್ಲಿ ಪ್ರತಿಭಟಿಸಿದೆವು. ಆದರೂ ಸಹ ಅದು ಪಾಸಾಯಿತು. ಈ ಮಸೂದೆಯ ಪ್ರಕಾರ ತೆರಿಗೆ ವಸೂಲು ಮಾಡುವ ಕೆಲಸವನ್ನು ರೆವೆನ್ಯೂ ಇಲಾಖೆಗೆ ವಹಿಸಿದ್ದಾರೆ. ಆದರೆ ಇಲ್ಲಿ ಏನಾಗುತ್ತದೆ ಎಂದರೆ ಹಳ್ಳಿಗಾಡಿನಲ್ಲಿ ತಿಳಿವಳಿಕೆ ಇಲ್ಲದೆ ಇರತಕ್ಕ, ಇದರ ಅರಿವೇ ಇಲ್ಲದೆ ಇರತಕ್ಕ ವ್ಯವಸಾಯಗಾರನ ಮೇಲೆ ಬೀಳುತ್ತದೆ. ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಯಾವ ರೀತಿ ಹಾಕಬೇಕು, ಯಾವ ರೀತಿ ಡಿಮ್ಯಾಂಡ್ ಏರಿಸಬೇಕು, ಎಂಬುದನ್ನು ಅಧಿಕಾರಿಗಳು ಇದುವರೆಗೂ ತಿಳಿದುಕೊಂಡಿಲ್ಲವೆಂದು ನಾನು ಈ ಸಭೆಯಲ್ಲಿ ಹೇಳುತ್ತೇನೆ. ಬಿಲ್ ಪಾಸ್‌ಆಗಿ ಕಾನೂನು ಆಗಿದೆ. ಸರ್ಕ್ಯುಲರ್ ಎಲ್ಲರಿಗೂ ಹೋಗಿದೆ. ಅದನ್ನು ಅರ್ಥಮಾಡಿಕೊಂಡು, ರೈತನ ವರಮಾನವೆಷ್ಟಿದೆ ಎಂಬುದನ್ನು ನೋಡಿಕೊಂಡು ತೆರಿಗೆಯನ್ನು ಹಾಕತಕ್ಕ ವಿಷಯದಲ್ಲಿ ನಮ್ಮ ಪಕ್ಷವಾಗಿ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಈ ಕಾನೂನಾದಮೇಲೆ ಅದರ ಮೇಲೆ ರೂಲ್ಸ್‌ಮಾಡಿ ಯಾವ ರೀತಿ operate ಮಾಡಬೇಕೆಂದು ಅಧಿಕಾರಿಗಳಿಗೆ ತಿಳಿವಳಿಕೆಯನ್ನು ಕೊಡುತ್ತಿಲ್ಲ. ಇಲಾಖಾ ಮುಖ್ಯಸ್ಥರನ್ನು ಕರೆಸಿ ಎಲ್ಲ ವಿಷಯಗಳನ್ನೂ ಅವರಿಗೆ ವಿವರಿಸಬೇಕು. ಈ ಸಭೆಯಲ್ಲಿ ಸದಸ್ಯರಾದ ನಾವುಗಳೇ ಬಿಲ್ ಪಾಸ್‌ಮಾಡಿ ನಾವೇ ಅದನ್ನು break ಮಾಡತಕ್ಕ ಸಂದರ್ಭಗಳಿವೆ. ರೈತನಿಗೆ ಅನುಕೂಲವಾಗುವಂತೆ, ಅವರು ಕೊಡತಕ್ಕ income-tax ಯಾವ ರೀತಿ ಕೊಡಬೇಕು ಎನ್ನುವುದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು. ಇನ್ನು ಈ ತೆರಿಗೆಯ ವಿಷಯದಲ್ಲಿ ಹೇಳುವುದಾದರೆ ನಮಗೆ ಬರತಕ್ಕ ಆದಾಯದಲ್ಲಿ ಬಹಳ leakage ಇದೆ. ಮಾಮೂಲುಗಳನ್ನು ತೆಗೆದುಕೊಂಡು ಬರಬೇಕಾದ ತೆರಿಗೆಯಲ್ಲಿ ಡಿಮಾಂಡನ್ನು ಏರಿಸುತ್ತಿಲ್ಲ. ಇದರಿಂದ ಲಕ್ಷಾಂತರ ರೂಪಾಯಿ ಲುಕ್ಸಾನಾಗುತ್ತಿದೆ. ಆದುದರಿಂದ ಅಧಿಕಾರಿಗಳಿಗೆ ಸರಿಯಾದ instructions ಕೊಟ್ಟು ಸರಿಯಾದ C.I.D. ಗಳನ್ನು ಇಟ್ಟು ಎಲ್ಲ ಲೀಕೇಜ್ ಇದೆ ಎಂಬುದನ್ನು ಕಂಡುಹಿಡಿದು ಸೇರ್ಸ್‌ಟ್ಯಾಕ್ಸ್ ಮತ್ತು ಇಕಂಟ್ಯಾಕ್ಸ್ ಇಲಾಖೆಗಳನ್ನು reorganise ಮಾಡಿ ಹೊಸ ಪದ್ಧತಿಯನ್ನು ಜಾರಿಗೆ ತರುತ್ತಾರೆಂದು ನಂಬಿದ್ದೇನೆ. ಅಧ್ಯಕ್ಷರು ಇಷ್ಟುಕಾಲ ಕೊಟ್ಟಿದ್ದಕ್ಕೆ ಅವರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Dr. R. NAGAN GOWDA (Hospet).— Sir, I will not take very much of the time of the House to talk on general aspects of subjects that are before us today. But there are some important points on which I wish to call the attention of the Government.

Under Registration, Government gets a huge amount of revenue. There are many places where it is profitable. But there are a few places where to have a Registrar's office is not

profitable because there is not enough work and there is loss. It has been proposed to remove some of the offices. I have got particularly in mind the question of Sandur. Sandur, as we all know, was once a State and they had even the Supreme Court there, not the Supreme Court as in Delhi but the Ruler there had the powers to give a final decision and sentences. There was a Registration Department in Sandur. Because there has been a small loss it is now proposed to remove that office. I hope the Government will not take any such step. Sandur is a very rich place from which we are getting a huge income from manganese and iron ores. In some departments there will be a profit and in some no profit. Hence I suggest that the registration office need not be removed from Sandur.

Talking about Registration Department I wish to make a suggestion. In Madras they used to have District Registrars. Here such an institution is not in vogue. A few years ago, *i.e.*, about four years ago, posts of District Registrars were created in Mysore and I am sure that it proved a very healthy institution. I suggest that we should have a District Registrar for each one of the districts. Not that I am anxious to create more posts for officers and increase the expenditure but there are obvious benefits from an institution like that. I hope the Government will pay more attention to it.

I must congratulate the Government on the bold step they have taken in stopping the sale of ganja. It involves a loss of Rs. 10 or 12 lakhs but it is worthwhile losing that amount because it was creating a lot of hardship for the people who were using ganja. The previous speaker was talking about the sale of toddy and arrack shops. The experiment that was tried this year has resulted in considerable loss to the Government to the extent of Rs. 10 or 14 lakhs. I hope they will not repeat it and that they will adopt a method that will give them the largest amount of return on the sale of these shops.

Under Demand No. 13—Other Taxes and Duties—there is a mention of Sugarcane Cess Fund, and it is stated in the note that it refers specifically to Mandya area. I wish to ask the Government why they do not mention anything about Hospet where we have got a Sugar Factory. Almost Rs. 6 to 7 lakhs is collected annually as Sugarcane Cess Fund. Also we have got another factory working at Shimoga. There also the same cess is going to be collected and in other factories that are now going to work. This amount of Sugarcane Cess that is collected from all these different factories should be put into a regular Sugar-Cane Cess Fund to be used for developmental work in those particular areas. I believe the Government has got a Bill ready for creating such Sugarcane Cess Funds for different areas and I hope they will bring it into effect as quickly as possible.

With regard to rural development, there is an item which occurs very frequently and that is economic aid to agriculturists. Under that item I want to make one suggestion. An Hon'ble Member speaking a little while ago, was making a suggestion regarding giving of bullocks to cultivators and especially to Scheduled Castes and Scheduled Tribes people of the State. It is a very good thing. But a long with that I would like to suggest that we should give to these Scheduled Castes and Scheduled Tribes Hallikar heifers because they cost much less than full grown bullocks or bulls. Calves of 8 or 9 months cost barely Rs. 50 or Rs. 60. If we adopt that policy of giving heifers as we give bullocks to Harijan families, even old widows will be able to take care of them and in course of time they will give them a nice young bull or bullock. I suggest that it may be taken up.

There is an item for economic aid to the development of cottage industries. We are giving help to continue the same industries, which our ancients especially these Harijan families, have been carrying on for a very long time. May I suggest that our Department of Cottage Industries spend time and do research work and send some men to other countries even if necessary to countries like Japan, where they are having cottage industries on a very

(DR. R. NAGAN GOWDA)

large scale and where they even go to the families and introduce new cottage industries to them? These Harijan families are very clever people. They have been spending all their time in doing their work with their hands and bodies and such being the case they are capable of doing very intricate and nice things with their hands if they are given an opportunity. If they are shown new cottage industries they will be able to carry out very successfully and supply some of the needs of the country that we are now importing From foreign countries.

I have got one or two items more to speak on. For rural water supply we are spending only Rs. 43 lakhs—There are scheme like rural water supply scheme, national water supply scheme and another scheme especially for Scheduled Castes and Backward Classes for which we have allotted Rs. 3.58 lakhs for wells. It is time that such wells are not necessary for Scheduled Caste families alone because it shows that we are not willing to join and use common wells. I do not know how it could be overcome. I have seen boards near the wells saying that nobody should be obstructed from taking water from these wells. But no Scheduled Caste families take water from these wells but from separate wells dug for Scheduled Castes and Tribes. We must have some propaganda work done and also we should see that the revenue officers specially the village patwaries take special interest so that these notices are adhered to and that the Scheduled Castes are allowed to take water from these wells.

SRI R. CHENNIGARAMAIAH.—Does the Hon'ble Member honestly believe that for want of propaganda they are not allowed to take water there?

DR. R. NAGAN GOWDA.—It is not mere propaganda. They should take some real interest in the matter and see that it is enforced. It is not being enforced; that is the trouble. I think it is a little unpleasant work. But it has to be done. When they are Government servants and eating the salt of Government they should carry out the policies of the Government. It is a difficult problem, I agree. But still great many things have been achieved now and I think we will be able to achieve that also in course of time.

One more item—Rs. 11 lakhs has been provided for rural communications. It is a very small amount. I wish Government had provided a little more amount for this item, because rural communications are very bad. People living in Bangalore are enamoured of beautiful roads that we have here. But just leave Bangalore for half a mile and go into the surrounding areas; you will see tent awful condition of the roads. I once went to Munireddipalya. I went about two furlongs beyond and I found that the jeep could go but not the Government car. Our rural communications are very bad and so Government should provide more money.

*ಶ್ರೀ ಎಂ. ದಾನಪ್ಪ (ಹರಪನಹಳ್ಳಿ).—ಮಾನ್ಯ ಅಧ್ಯಕ್ಷರೇ, ಈ ದಿನ ರೂರಲ್ ಡೆವಲಪ್‌ಮೆಂಟ್ ಡಿಮಾಂಡಿನ ಮೇಲೆ ಮಾತನಾಡುತ್ತಾ, ನಾನು ಕೆಲವು ಮುಖ್ಯವಾದಂಥ ಅಂಶಗಳನ್ನು ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಏಕೆಂದರೆ ಇದು ಬಹಳ ಮಟ್ಟಿಗೆ ಡಿಪ್ರೆಸ್ಡ್ ಕ್ಲಾಸಿಗೆ ಸಂಬಂಧಪಟ್ಟ ಡಿಮಾಂಡ್. ಇದರ ಜೊತೆಗೆ ಈ ದಿನ ಅನೇಕ ಡಿಮಾಂಡುಗಳನ್ನು ಇಟ್ಟಿದ್ದಾರೆ. ಅದೂ ಅಲ್ಲದೆ ನಮಗೆ ಟೈಮ್ ಕೊಟ್ಟಿರುವುದು ಹತ್ತು ನಿಮಿಷ. ಹತ್ತು ನಿಮಿಷಗಳೊಳಗೆ ಏನು ವಿಷಯ ಮಾತನಾಡ ಬಹುದು? ಏನು ಸಜೆಷನ್ಸ್ ಕೊಡಬೇಕೋ, ಗವರ್ನ್‌ಮೆಂಟ್ ಪಾಲಿಸಿ ಅರ್ಥಮಾಡಿಕೊಳ್ಳಬೇಕೋ ನನಗೆ ಗೊತ್ತಾಗುವುದಿಲ್ಲ. ಡಿಪ್ರೆಸ್ಡ್ ಕ್ಲಾಸ್ ಮೆಂಬರ್ಸ್‌ಗಳಿಗಾಗಲಿ, ಇತರ ಮೆಂಬರುಗಳಿಗಾಗಲಿ ಷೆಡ್ಯೂಲ್ ಕ್ಯಾಸ್ಟ್‌ಗೆ ಸಂಬಂಧಪಟ್ಟ ವಿಚಾರಗಳನ್ನು ಮಾತನಾಡಲಿಕ್ಕೆ ಅವಕಾಶ ಕೊಡಬಾರದೆಂಬ ಉದ್ದೇಶದಿಂದ ಈ ಡಿಮಾಂಡನ್ನೂ ಇತರ ಡಿಮ್ಯಾಂಡುಗಳ ಜೊತೆ ಇನ್‌ಕ್ಲೂಡ್ ಮಾಡಿದ್ದಾರೊ ಏಥವಾ ಬೇರೆ ಏನು ಉದ್ದೇಶ ಇಟ್ಟುಕೊಂಡಿದ್ದಾರೆಂದು ನನಗೆ ಗೊತ್ತಾಗುವುದಿಲ್ಲ. ಆದರೂ ಕೂಡ ಮಾತನಾಡಬೇಕು ಎಂದು ಇದ್ದೇನೆ. ಎರಡೇ ಮಾತಿನಲ್ಲಿ ಮುಗಿಸುತ್ತೇನೆ.

ಸ್ವಾಮಿ, ಈ ಡಿಮ್ಯಾಂಡನ್ನು ಐಟಮ್ ಬೈ ಐಟಮ್ ತೆಗೆದುಕೊಳ್ಳುತ್ತೇನೆ. "Aid to Voluntary Agencies–Aid to District and Taluk and other organisations for removal of untouchability" ಎಂಬುದರಲ್ಲಿ ನಮ್ಮ ಸರ್ಕಾರದವರು 23,000 ರೂಪಾಯಿ ಅಲಾಟ್ ಮಾಡಿದ್ದಾರೆ. Agency ಎಂದರೆ ಕಾಂಗ್ರೆಸ್ ಸರ್ಕಾರಕ್ಕೆ ಏಜಂಟು ಗಳಾಗಿ ಕೆಲಸ ಮಾಡುತ್ತಾರೋ? ಅಥವಾ ಆ ಏಜಂಟರುಗಳು ಕಾಂಗ್ರೆಸ್‌ಪಾರ್ಟಿ ಏಜಂಟರುಗಳಾಗಿ ಕೆಲಸ ಮಾಡುತ್ತಾರೋ? ಈ ಏಜಂಟರುಗಳು ಎಲ್ಲಿ ಕೆಲಸ ಮಾಡುತ್ತಾರೆ, ಏನು ಕೆಲಸ ಮಾಡುತ್ತಾರೆ, ಏತಕ್ಕೋಸ್ಕರ ಕೆಲಸ ಮಾಡುತ್ತಾರೆ? ಇವರಿರುವ

ಉದ್ದೇಶವೇನು ಎಂಬುದು ನಮಗೆ ಸ್ವಲ್ಪವೂ ಅರ್ಥವಾಗಿಲ್ಲ. ಈ ಐಟಮ್ಮಿಗೆ 23,000 ರೂಪಾಯಿ ಅಲಾಟ್ ಮಾಡಿರುವುದು ವೇಸ್ಟ್. ಇದನ್ನು ಇಮ್ಮೀಡಿಯಟ್ ಆಗಿ ಸ್ಟಾಪ್ ಮಾಡಬೇಕು.

ಎರಡನೆಯದಾಗಿ, ಪಬ್ಲಿಸಿಟಿ ಮತ್ತು ಪ್ರಾಪಗ್ಯಾಂಡ ಐಟಮ್ ಕೆಳಗೆ 20,000 ರೂಪಾಯಿ ಸ್ಯಾಂಕ್ಷನ್ ಮಾಡಿದ್ದಾರೆ. ಯಾರಿಗೋಸ್ಕರ ಪ್ರಾಪಗ್ಯಾಂಡ ಮಾಡುತ್ತಾರೆ? ಯಾವ ಉದ್ದೇಶದಿಂದ ಪ್ರಾಪಗ್ಯಾಂಡ ಮಾಡುತ್ತಾರೆ? ಅನಲು ಕಾಂಗ್ರೆಸ್ ಸರ್ಕಾರ ಬರಬೇಕೆಂಬ ಉದ್ದೇಶದಿಂದ ಓಟಿಗಾಗಿ ಪ್ರಸಾರ ಮಾಡುತ್ತಾರೆ. ಹೀಗೆ ಹರಿಜನರ ಹೆಸರಿನಲ್ಲಿ ಎಷ್ಟು ದುಡ್ಡು ಖರ್ಚುಮಾಡುತ್ತಾರೆಂದು ಸರ್ಕಾರದವರು ಸ್ಪಷ್ಟವಾಗಿ ಹೇಳಬೇಕಾಗಿದೆ. ಪಬ್ಲಿಸಿಟಿ, ಪ್ರಾಪಗ್ಯಾಂಡ ಎಲ್ಲಿದೆಯೋ, ಅವರ ಚಾರ್ಜಿನಲ್ಲಿರುವವರು ಏನು ಮಾಡುತ್ತಾರೋ, ಯಾರಿಗೆ ದುಡ್ಡು ಕೊಡುತ್ತಾರೋ, ಒಂದೂ ಅರ್ಥವಾಗುವುದಿಲ್ಲ. ಇವುಗಳನ್ನೆಲ್ಲಾ ಸರ್ಕಾರದವರು ಸ್ಪಷ್ಟವಾಗಿ ತಿಳಿಸಬೇಕೆಂದು ನಾನು ಅವರನ್ನು ಬೇಡುತ್ತೇನೆ.

ಮೂರನೆಯದಾಗಿ, ಮೊಬೈಲ್ ಹೆಲ್ತ್ ಯೂನಿಟ್ಸ್ ವಿಚಾರ. ಇವುಗಳನ್ನು ಎಲ್ಲಿ ಇರಿಸಿದ್ದಾರೆ? ನಿಜವಾಗಿ ಯಾವ ಹರಿಜನರ ಕೇರಿಗಾದರೂ ಈ ಯೂನಿಟ್ಸುಗಳು ಹೋಗಿ ಕೆಲಸ ಮಾಡುತ್ತಿವೆಯೇ; ಇಲ್ಲ, ಹಳ್ಳಿಗಳಿಗೆ ಹೋಗುತ್ತಾರೆಯೇ? ಇವು ಇವೆ ಎಂಬುದೇ ಗೊತ್ತಾಗುವುದಿಲ್ಲ. ಹೋಗಲಿ ಇವು ಇರತಕ್ಕಂಥಾದ್ದು ಆಫೀಸರುಗಳಿಗಾದರೂ ಗೊತ್ತಿದೆಯೇ? ಅದೂ ಸಂದೇಹ. ಇದಕ್ಕಾಗಿ 50,000 ರೂಪಾಯಿ ಅಲಾಟ್ ಮಾಡಿದ್ದೀರಿ. ಷೆಡ್ಯೂಲ್ ಕ್ಯಾಸ್ಟ್‌ಗಳ ಹೆಸರು ಹೇಳುತ್ತಾ ದುಡ್ಡು ತಿನ್ನುವ ಒಬ್ಬರೋ, ಇಬ್ಬರೋ! ಹರಿಜನರ ಹೆಸರಿನಮೇಲೆ ಆಫೀಸರ್ಸ್‌ನೂ ಏಜೆಂಟ್‌ಗಳನ್ನೂ ಪ್ರಾಪಗ್ಯಾಂಡಿಸ್ಟ್‌ಗಳಾಗಿಟ್ಟುಕೊಂಡು, ದುಡ್ಡು ತಿನ್ನುವುದಕ್ಕೆ ಐಟಮ್ ಆಫ್ಟರ್ ಐಟಮ್ ಕ್ರಿಯೇಟ್ ಮಾಡಿದ್ದಾರೆ. ಇದರಿಂದ ಏನು ಉಪಯೋಗವಾಗುತ್ತದೆ! ಈ ಯೂನಿಟ್ಸ್‌ಗಳು ಎಲ್ಲಿ ಕೆಲಸ ಮಾಡುತ್ತಿವೆ? ಹರಿಜನರ ಹೆಣ್ಣುಮಕ್ಕಳು ಎಷ್ಟು ಕಷ್ಟಪಡುತ್ತಾರೆ? ಇವರ ವಿಚಾರ ದೇವರೇ ನೋಡಿಕೊಳ್ಳಬೇಕು. ಏತಕ್ಕೋಸ್ಕರ 50,000 ರೂಪಾಯಿ ಖರ್ಚು ಮಾಡುತ್ತೀರಿ? ದಯಮಾಡಿ ಈ ವಿಮೆನ್ಸ್ ವೆಲ್‌ಫೇರ್ ಸ್ಕೀಮನ್ನು ತೆಗೆದುಹಾಕಬೇಕು. ಈ ಸ್ಕೀಮು ಎಲ್ಲಿ ಕೆಲಸ ಮಾಡುತ್ತಿದೆ ಎನ್ನುವುದು ನಮ್ಮ ಸರ್ಕಾರ ಕ್ಕಾದರೂ ಗೊತ್ತಿದೆಯೇ? ಆಫೀಸರುಗಳಿಗಾದರೂ ಗೊತ್ತೆ? ಎಷ್ಟು ರಹಸ್ಯವಾ ಕೆಲಸ ಮಾಡುತ್ತಿವೆ? ಅದೂ ಸರ್ಕಾರ ಉದ್ದೇಶವೋ?

ಹೌಸಿಂಗ್ ಸ್ಕೀಮ್ ವಿಷಯ. ಹರಿಜನರಿಗೆ ಮನೆ ಕಟ್ಟಿಕೊಡಬೇಕೆಂಬುದು ಚಲೋ ಉದ್ದೇಶ. ಈ ಸ್ಕೀಮಿಗೆ ಕೇಂದ್ರ ಸರ್ಕಾರದವರೂ ಸಹಾಯ ಕೊಡುತ್ತಾರೆ. ಮೈಸೂರು ಸರ್ಕಾರದವರೂ ಸಹ ಮನೆ ಕಟ್ಟುವುದಕ್ಕೆ ಹಣ ಸಹಾಯ ಕೊಡಬೇಕೆನ್ನುವ ಉದ್ದೇಶ ಒಳ್ಳೆಯದು. ಈ ಹೌಸಿಂಗ್ ಸ್ಕೀಮ್ ಕೆಳಗೆ ಮನೆಕಟ್ಟುವುದಕ್ಕೆ ಹಣ ಕೊಡುತ್ತಿದ್ದರೆ, ಆ ದುಡ್ಡಿರ್ಲಾ ಹರಿಜನರನ್ನು ಮುಟ್ಟುತ್ತಿದೆಯೇ ಎಂಬುದೆನ್ನು ಸರ್ಕಾರದವರು ಆಲೋಚನೆ ಮಾಡಬೇಕು. ಇಲ್ಲವೇ, ಸರ್ಕಾರದವರು ಕೊಡತಕ್ಕಂಥ ಹಣ ಅವರ ಆಫೀಸರುಗಳನ್ನು ಮುಟ್ಟುತ್ತಾ ಇದೆಯೋ?

ಹರಿಜನರ ಒಂದು ಮನೆಗೆ ಮುನ್ನೂರು ರೂಪಾಯಿ ರೊಕ್ಕ ಕೊಡುತ್ತೀರ. ಮುನ್ನೂರು ರೂಪಾಯಿಗಳನ್ನೂ ಒಂದೇ ಸಲ ಕೊಡುತ್ತೀರಾ? ಅದನ್ನು ಮೂರು ಕಂತುಗಳಲ್ಲಿ ಕೊಡುತ್ತೀರಿ. ಮೊದಲನೆಯ ಇನ್‌ಸ್ಟಾಲ್‌ಮೆಂಟಿನಲ್ಲಿ 100 ರೂಪಾಯಿ, ಎರಡನೆಯ instalment ನಲ್ಲಿ ನೂರು, ಮೂರನೆಯ instalment ನಲ್ಲಿ ನೂರು ರೂಪಾಯಿ ಕೊಡುತ್ತೀರಿ. ಹೀಗೆ ಮೂರು ನೂರು ರೂಪಾಯಿಗತನ್ನು ಮೂರುಸಾರಿ ಕೊಡುತ್ತೀರಿ. ನೂರು ರೂಪಾಯಿಗಳನ್ನು ತೆಗೆದುಕೊಳ್ಳುವುದಕ್ಕೆ ಸುಮಾರು 25-30 ಮೈಲಿದೂರದಿಂದ ಹರಿಜನರು ಬಂದು ತಾಲ್ಲೂಕು ಆಫೀಸಿನಲ್ಲಿ ಕುಳಿತಿರಬೇಕು. ಭಿಕ್ಷುಕರ ಹಾಗೆ ಕಾಯುಕೊಂಡು ಬೇಗನೇ ದುಡ್ಡು ಅವರಿಗೆ ಬರುವಹಾಗೆ ಮಾಡಿಕೊಟ್ಟಿದ್ದೀರ? ಅದರಲ್ಲಿ ಮಾಮೂಲು ಎಷ್ಟು? ವಿಲೇಜ್ ಮುನ್ಸೀಫ್, 15 ರೂಪಾಯಿ, ಶಾನುಭೋಗನಿಗೆ 20 ರೂಪಾಯಿಗೆ ತಹಸೀಲ್ದಾರನಿಗೆ 25 ರಿಂದ 50 ರೂಪಾಯಿಗಳವರೆಗೆ ಅಜ್ಜಿರು ಹರಿಜನರಿಗೆ 50 ರೂಪಾಯಿ ಕೂಡ ಮುಟ್ಟುವುದಿಲ್ಲ. ಮನೆ ಕಟ್ಟಿಕೊಳ್ಳಲಿ ಎಂಬ ಆಶೆಯಿಂದ ಸರ್ಕಾರದವರು ದುಡ್ಡು ಕೊಡುತ್ತೀರಿ.

ಶ್ರೀ ಆರ್. ಜೆನ್ನಿಗರಾಮಯ್ಯ.—ತಹಸೀಲ್ದಾರರಿಗೂ ಹಣ ಹಂಚಿಕೆಯಾಗುತ್ತದೆಯೇ?

ಶ್ರೀ ಎಂ. ದಾನಪ್ಪ.—ಆಶ್ಚರ್ಯವಿಲ್ಲ. ಬೇಕಾದರೆ ಫೋನ್ ಮಾಡುತ್ತೇನೆ. ಸಿದ್ದನ ಹೆಸರಿನಲ್ಲಿ ಒಂದು ಅಪ್ಲಿಕೇಶನ್ ಸಿದ್ಧವಾಡುವುದು. ಮೂರುನೂರು ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡುವುದು. ಅದಕ್ಕೊಂದು ಹೆಬ್ಬೆಟ್ಟಿನ ಗುರುತುಹಾಕಿಸುವುದು. ಯಾರು ನೋಡಬೇಕು? ನೀವು ನೋಡುತ್ತೀರಾ? ನಿಮ್ಮ ಆಫೀಸರುಗಳು ನೋಡುತ್ತಾರೆಯೇ? ಪ್ರತಿಯೊಂದಕ್ಕೂ ಹೆಬ್ಬೆಟ್ಟಿನ ಗುರ್ತು. ಹರಪನಹಳ್ಳಿ, ಕೂಡ್ಲಿಗಿ ತಾಲ್ಲೂಕುಗಳಲ್ಲಿ ಓಪನ್‌ಆಗಿ ಹೇಳುತ್ತಾರೆ. ವಿಚಾರಮಾಡಿ. ಕೂಡ್ಲಿಗಿ ತಹಸೀಲ್ದಾರರು ಈ ರೀತಿ ಮಾಡಿರುವ ಸುಮಾರು 50 ಅಪ್ಲಿಕೇಶನ್‌ಗಳನ್ನು ನಿಮ್ಮ ಮುಂದೆ ಇಡುತ್ತೇನೆ. ಹೀಗಾದರೆ ಕೊಡತಕ್ಕ ದುಡ್ಡು ಸರ್ಕಾರ ಕೊಟ್ಟಿದೆಯೇ? ಹರಿಜನರ ಉದ್ಧಾರೆ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಉದ್ಧಾರ ಮಾಡುತ್ತಿರುವುದು ಗವರ್ನಮೆಂಟ್ ಆಫೀಸರುಗಳನ್ನು. ಅವರನ್ನು ಉದ್ಧಾರ ಮಾಡಬೇಕೆಂದು ಈ ಸ್ಕೀಮನ್ನು ಇಟ್ಟಿದ್ದೀರಾ? ಇದನ್ನು ನೋಡಿದರೆ ದುಃಖವಾಗುತ್ತದೆ. ನಿಮ್ಮ ಸ್ಕೀಮ್ ಹರಿಜನರಿಗೋಸ್ಕರ ಅಲ್ಲ. ಹರಿಜನರ ಹೆಸರಿನಲ್ಲಿ ತಿನ್ನುವುದಕ್ಕೋಸ್ಕರ ಆಫೀಸರುಗಳನ್ನು ಇಟ್ಟಿದ್ದೀರಿ.

4-30 P.M.

ಇನ್ನೊಂದು ವಿಷಯವನ್ನು ಹೇಳುತ್ತೇನೆ, ಅದು Housing Colonisation ವಿಚಾರ. ಕೊರಚರು, ಕೊರಮರು, ಇಂಥವರಿಗೆ ಮನೆಗಳನ್ನು ಮಾಡಿಕೊಡುವುದೂ, ರಸ್ತೆ ಬಾವಿಗಳನ್ನು ಏರ್ಪಾಡು ಮಾಡಿಕೊಡುವುದೂ ಚಲೋ ಉದ್ದೇಶ. ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡಿ ಈ ಯೋಜನೆಯನ್ನು ಮಾಡುತ್ತಿದ್ದಾರೆ. ಆದರೆ ಈ ಹಣ ಆ ಜನರಿಗೆ ಮುಟ್ಟುವುದಿಲ್ಲ. ಕೊರಚರು ಈ ಧನಸಹಾಯಕ್ಕಾಗಿ ಅಧಿಕಾರಿಗಳ ಹತ್ತಿರ ಬಂದರೆ ಆ ಅಧಿಕಾರಿಗಳಿಗೆ ದೊಡ್ಡ ನುಗ್ಗಿ. ಒಬ್ಬೊಬ್ಬ ಅಧಿಕಾರಿಯೂ ಸಾವಿರಾರು ರೂಪಾಯಿ ಸಂಪಾದನೆ ಮಾಡಿದ್ದಾನೆ. ತಿನ್ನುವುದಕ್ಕಿಲ್ಲದೇಯಿದ್ದ ತಹಸೀಲ್‌ದಾರ ಸಾವಿರಾರು ರೂಪಾಯಿಗಳ ಆಸ್ತಿಯನ್ನು ಮಾಡಿಕೊಂಡಿದ್ದಾನೆ. ಈ ಜನರಿಗೆ ಮನೆಗಳನ್ನು ಕಟ್ಟಿಸುವುದಕ್ಕೆ, ರಸ್ತೆ ಮಾಡಿಸುವುದಕ್ಕೆ ಎಂದು ಹೇಳಿ ಲೆಕ್ಕತೋರಿಸಿ false vouchers, false bills ತಯಾರು ಮಾಡಿ ಅಧಿಕಾರಿಗಳು ತಾವು ಹಣಸಂಪಾದನೆ ಮಾಡುತ್ತಾರೆ. ಸರ್ಕಾರದವರು

(ಶ್ರೀ ಎಂ. ದಾನಪ್ಪ)

ಈರೀತಿ ಹಣಕೊಡುತ್ತೇವೆಂದು ಹೇಳದೇ ಇದ್ದಿದ್ದರೆ ಆ ಜನರು ಮನೆಕಟ್ಟಿ ಕೊಳ್ಳಲು ಹಣಕೊಡಿ ಎಂದು ಇವರನ್ನು ಕೇಳುವುದಕ್ಕೆ ಬರುತ್ತಿರಲಿಲ್ಲ. ಆದರೆ ಕೊಡುತ್ತೇವೆ ಎಂದು ಹೇಳುತ್ತಾ ಹೀಗೆ ಮೋಸಮಾಡ ಬಾರದು; ಕಣ್ಣಿಗೆ ಮಣ್ಣು ಹಾಕಬಾರದು. ನಿಜವಾಗಿಯೂ ಹರಿಜನರನ್ನು ಉದ್ಧಾರ ಮಾಡ ಬೇಕೆಂಬ ಮನಸ್ಸಿದ್ದರೆ ನರಿಯಾಗಿ ಮಾಡಲಿ, ಇಲ್ಲದಿದ್ದರೆ ಬಿಡಲಿ. ಹಿಂದೆ ನರಕಾರದಿಂದಲೇ ಹಣವನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿಲ್ಲ, ರಸ್ತೆಗಳನ್ನು ಮಾಡಿಲ್ಲ. ಯಾವುದೋ ರೀತಿ ಕಷ್ಟಪಟ್ಟುಕೊಂಡು ಮಾಡಿಕೊಳ್ಳುತ್ತಿದ್ದರು. ಈಗೇಕೆ ಇಷ್ಟು ಮೋಸ, ಇಷ್ಟು ಅನ್ಯಾಯ! ನಹಾಯ ಮಾಡುತ್ತೇವೆಂದು ಹೇಳುವುದು, ಮಾಡುವುದಿಲ್ಲ; ಯಾರಿಗೋ ಉಪಕಾರ ಇವರ ಹೆಸರಿನಲ್ಲಿ ಆಗುತ್ತಿದೆ. ತಾವು ಗಾಂಧಿ ಶಿಷ್ಯರು, ಧರ್ಮಿಷ್ಠರು ಎಂದು ಹೇಳುತ್ತಾರೆ. ನತ್ಯ, ಧರ್ಮ, ಎಂದು ಹೇಳುತ್ತಾರೆ. ಇದೇನೂ ಇಲ್ಲ. ಷೆಡ್ಯೂಲ್ಡ್ ಪಂಗಡದವರು ಕೋಟ್ಯಂತರ ಜನರಿದ್ದಾರೆ. ಅವರಿಗೆ ಹೀಗೆ ಮಾಡುತ್ತೇವೆ, ಹಾಗೆ ಮಾಡುತ್ತೇವೆ ಎಂದು ಹೇಳಿ, ದುರುದ್ದೇಶದಿಂದ ಪ್ರಚಾರ ಮಾಡುತ್ತಾರೆಯೇ ಹೊರತು ಈ ಯೋಜನೆಗಳಿಂದ ನಿಜವಾಗಿಯೂ ಈ ಜನರನ್ನು ಉದ್ಧಾರ ಮಾಡುವ ಮನಸ್ಸು ಇವರಿಗಿಲ್ಲ. ಈ ಹರಿಜನರಿಗೆ ವಿದ್ಯೆಕಲಿಸುವ ಹಾಗಿಲ್ಲ, ಅವರನ್ನು ಕಂಡರೆ ಇವರಿಗೇ ಅಸಹ್ಯ. ಅವರು ವಿದ್ಯಾವಂತರಾಗಿ ಬಂದರೆ, ಇವನು ಮಾದಿಗ, ಇವನು ಹೊಲೆಯ, ಬಂದು ಕುರ್ಚಿಯ ಮೇಲೆ ಕುಳಿತು ಕೊಳ್ಳುತ್ತಾನೆ ಎಂದು ನರ್ಕಾರದ ಅಧಿಕಾರಿಗಳು, ನವರ್ಣ ಹಿಂದುಗಳು ಎಲ್ಲರೂ ಅನ್ನುತ್ತಾರೆ. ಬಾಯಿಯಲ್ಲಿ ಮಾತ್ರ ಹರಿಜನರಿಗೆ ಅನ್ಯಾಯ ಮಾಡಿ ಪಾಪ ಮಾಡಿದ್ದೇವೆ, ಅವರನ್ನು ಹಿಂಸಿಸಿದ್ದೇವೆ. ಅವರನ್ನು ಮುಂದೆ ತರಬೇಕು ಎಂದು ಹೇಳುತ್ತಾರೆ. ಈ ಬಾಯಿ ಮಾತುಗಳನ್ನು ಅವರು ಒಂದು ನಾರಿ ನಂಬುತ್ತಾರೆ, ಎರಡು ನಾರಿ ನಂಬುತ್ತಾರೆ, ಮೂರನೆಯ ನಾರಿ ನಂಬುವುದಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಕಾಂಗ್ರೆಸ್ ನರ್ಕಾರ ಏನು ಕೆಲಸ ಮಾಡುತ್ತಿದೆ, ಎಷ್ಟು ಕೆಲಸ ಮಾಡಿದೆ ಎಂಬುದು ಅವರಿಗೆ ಈಗ ಅರ್ಥವಾಗಿದೆ. ಇನ್ನು ಮೇಲೆ ಇದು ವರೆಗೆ ಬಂದಂತೆ ಕಾಂಗ್ರೆಸ್‌ನವರು ಅಧಿಕಾರಕ್ಕೆ ಬರುವುದಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್‌ನವರ ಬೆಂಬಲದಿಂದ ಅಧಿಕಾರಕ್ಕೆ ಬಂದಿದ್ದಾರೆ, ಆದಕಾರಣ ಅವರಿಗೆ ಮೋಸ ಮಾಡಬಾರದು.

ಇನ್ನು ಹಾಸ್ಟೆಲುಗಳ ವಿಚಾರ ಹೇಳಿದರು. ಶ್ರೀ ದುಗ್ಗಪ್ಪನವರೂ ಇನ್ನು ಕೆಲವರೂ ಹೇಳಿದುದನ್ನು ನಾನು ಒಪ್ಪುತ್ತೇನೆ. ಇದನ್ನೆಲ್ಲಾ ಬಿಟ್ಟುಬಿಡಲ್ಲ ಹರಿಜನರಿಗೆ ವಿದ್ಯೆಕೊಡಲಿ. ಮನೆಗಳನ್ನು ಕಟ್ಟಲು ನಹಾಯ ಕೊಡುವುದು, ಎತ್ತುಗಳನ್ನು ಕೊಳ್ಳಲು ನಹಾಯ ಕೊಡುವುದು, ಇವೆಲ್ಲವೂ bogus, false. ಅವರು ವಿದ್ಯೆಕಲಿಯಲು ನಹಾಯಮಾಡಲ, ಹಾಗಾದರೆ ಇಷ್ಟರ ಹೆಸರು ಹೇಳಿಕೊಂಡು ಬದುಕುತ್ತಾರೆ. ಇವರಿಗೆ ವಿದ್ಯೆಗಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡಲಿ. ಆದರೆ ಇವರೆಲ್ಲ ವಿದ್ಯೆಯಲ್ಲಿ ಮುಂದುವರಿದರೆ ನಾವು ಅಧಿಕಾರದಲ್ಲಿರುವುದಕ್ಕೆ ನಾಧ್ಯವಿಲ್ಲ ವೆಂದು ಇವರಿಗೆ ವಿದ್ಯೆಗೆ ಮೊದಲೇ ಮಟ್ಟಹಾಕುತ್ತಾರೆ. ಹಾಸ್ಟೆಲುಗಳಿದ್ದರೆ ಅವರ ಮೇಲೆ ಯಾವ ರೀತಿ ತಪ್ಪು ಹೊರಿಸಿ ಧ್ವಂನಮಾಡಬೇಕೆಂದು ಹುಡುಕುತ್ತಾರೆ. ಚಾಡಿ, ಕ್ಷುದ್ರ ಹೇಳಿ ಕಿರುಕುಳ ಕೊಡುತ್ತಾರೆ. ಈ ವಿಷಯವನ್ನು ಮಂತ್ರಿಗಳಿಗೂ ಡೈರೆಕ್ಟರು ಹೇಳಿದ್ದಾರೆ. ಮದರಾನು ನರ್ಕಾರದವರು ಹಾಸ್ಟೆಲುಗಳಿಗೆ ನರಿಯಾಗಿ ಹಣ ಕೊಡುತ್ತಿದ್ದಾರೆ. ಈಗ ಹಾಗೆ ಕೊಡದೇಇದ್ದುದರಿಂದ ಕೆಟ್ಟ ಪರಿಣಾಮವಾಗಿದೆ. ಬಳ್ಳಾರಿಯಲ್ಲಿ ಐದು ಹರಿಜನರ ಹಾಸ್ಟೆಲುಗಳಿವೆ. ನಾನು ಸೆಕ್ರೆಟರಿಯಾಗಿ ಐದುವರ್ಷ ಕೆಲನ ಮಾಡಿದ್ದೇನೆ. ಆ ಹಾಸ್ಟೆಲಿನಲ್ಲಿ 130 ಮಂದಿ ಹರಿಜನ ವಿದ್ಯಾರ್ಥಿಗಳಿದ್ದರು. ಇವೊತ್ತು ಅದು ಕ್ರಿಶ್ಚಿಯರ್ ಬೋರ್ಡಿಂಗ್ ಹೋಮ್ ಆಗಿದೆ. ಇನ್ನೊಂದು ಹರಿಜನ ಬಾಲಕಿಯರ ಹಾಸ್ಟೆಲಿದ್ದುದು ಈ ಹೊತ್ತು ಅಲ್ಲಿಯ ಬಾಲಕಿಯರೆಲ್ಲ ಕ್ರಿಶ್ಚಿಯನರಾಗಿದ್ದಾರೆ, ಕ್ರಿಶ್ಚಿಯರ್ ಹಾಸ್ಟೆಲ್ ಆಗಿದೆ.....

ಶ್ರೀ ಆರ್. ಬೈ್ಲಿಗರಾಮಯ್ಯ.—ಹರಿಜನರ ಹಾಸ್ಟೆಲನಲ್ಲಿ ಕ್ರಿಶ್ಚಿಯೆನ್ನರಿದ್ದಾರೆಯ?

ಶ್ರೀ ಎಂ. ದಾನಪ್ಪ.—ಮೊದಲು ಹರಿಜನರಾಗಿದ್ದವರು ಈಗ ಕ್ರಿಶ್ಚಿಯನ್ನರಾಗಿದ್ದಾರೆ.

ಶ್ರೀ ಮಂಜಪ್ಪಉಳ್ಳಾಳ್ (ಕಾರ್ಕಳ).—ಡೈರೆಕ್ಟರು ಅಲ್ಲಿಹೋಗಿ ವಿಚಾರಣೆ ಮಾಡಿದ್ದಾರೆಂದು ಹೇಳಿದರು; ಅವರು ಆರೀತಿ ವರದಿ ಮಾಡಿದ್ದಾರೆಯೆ?

ಶ್ರೀ ಎಂ. ದಾನಪ್ಪ.—ಮಾಡಿದ್ದಾರೆ. ಅದುದರಿಂದ ದಯೆಯಿಟ್ಟು ಇಂಥಾದ್ದಕ್ಕೆ ಅವಕಾಶವಾಗದ ರೀತಿಯಲ್ಲಿ ವ್ಯವಸ್ಥೆಮಾಡಬೇಕು. ಮ್ಯಾನೇಜ್‌ಮೆಂಟ್ ಬದಲಾಯಿನಬೇಕು. ನರಿಯಾದ ನಾಕರ್ಯಕೊಟ್ಟು ನಹಾಯ ಮಾಡಬೇಕು.—

ಇನ್ನು ಬಾವಿಗಳ ವಿಷಯ ಹೇಳುವುದಾದರೆ, ಪ್ರತಿಯೊಂದು ಊರಿನಲ್ಲಿಯೂ ಬಾವಿಗಳಿದ್ದರೂ ಕೂಡ ಹರಿಜನರು ಆ ಬಾವಿಗಳಿಗೆ ಬಂದು, ಹೊತ್ತು ಹುಟ್ಟುವ ಹೊತ್ತಿನಿಂದ ಹೊತ್ತು ಮುಳುಗುವ ವರೆಗೂ ಬಾವಿಗಳ ನುತ್ತಲೂ ಕುಳಿತುಕೊಂಡು ಗೌಡರೆ ನೀರು ಹಾಕಿ, ಗೌಡರೇ ನೀರು ಎಂದು ಕೇಳಿ ಕೊಳ್ಳುತ್ತಿರುತ್ತಾರೆ. ಯಾರೂ ಅವರಿಗೆ ನೀರು ಹಾಕುವುದಿಲ್ಲ. ಹರಿಜನರಿಗೇ ಬೇರೆ ಬಾವಿ ಮಾಡಿ ಎಂದರೆ ಮಾಡುವುದಿಲ್ಲ. ಇಂಥಾ ಹಳ್ಳಿಗಳು ಎಷ್ಟೋ ಇವೆ.

Sri J. P. SARWESH (Serum-S.C.).—This is worse than South Africa!

ಶ್ರೀ ಎಂ. ದಾನಪ್ಪ.---ಕಾಂಗ್ರೆಸ್ ನರ್ಕಾರವಿರುವಾಗ ಹೀಗೆ ಹರಿಜನರು ನೀರಿಗಾಗಿ ಹಗಲೂ ರಾತ್ರಿ ಗೌಡ ನೀರು ಹಾಕು ಎಂದು ಕೇಳಿಕೊಳ್ಳುವುದೆಂದರೆ, ನಿಜವಾಗಿ ನಮ್ಮ ನರ್ಕಾರ ಪ್ರಜಾನರ್ಕಾರವೆಂದು ಹೇಳಿಕೊಳ್ಳುವುದಕ್ಕೆ ಅವರಿಗೆ ನಾಚಿಕೆ ಬರುವುದಿಲ್ಲವೆ! ನಮ್ಮ ನ್ವತಂತ್ರ ದೇಶದಲ್ಲಿ ಹುಟ್ಟಿದ ಮಕ್ಕಳಗತಿ ಹೀಗಾಗಿದೆ, ಆದರೂ ಪ್ರಜಾಪ್ರಭುತ್ವ ನರ್ಕಾರ ಎಂದು ಹೇಳುತ್ತಿದ್ದಾರೆ. ನಿಜವಾಗಿ ಎಷ್ಟು ಮಾತ್ರ ನ್ಯಾಯ, ಧರ್ಮವಿದೆ ಇಲ್ಲ? ನಮಗೆ ಇದನ್ನು ನಹಿನುವುದು ಹೇಗೆ ನಾಧ್ಯ! ಇದನ್ನು ಅವರು ಆಲೋಚನೆ ಮಾಡುವುದಿಲ್ಲ. ನಾಚಿಕೆಯಿಲ್ಲ, ಬಯ್ಯುವುದಕ್ಕೆ ಬಾಯಿ ಬಾರದು. ಐದುವರ್ಷ ಅಧಿಕಾರದಲ್ಲಿ ಕುಳಿತು ಕೊಳ್ಳೋಣ, ರೊಕ್ಕ ತೆಗೆದು ಕೊಳ್ಳೋಣ, ಮನೆಮಾರು ಕಟ್ಟಿಕೊಳ್ಳೋಣ, ಇರವವರು ಇರಲಿ, ಹೋಗುವವರು ಹೋಗಲಿ ಎಂಬುದು ಅವರ ಮನೋಧರ್ಮ. ಪ್ರಜೆಗಳಿಗೆ ಏನು ಅನುಕೂಲ ಮಾಡಬೇಕೆಂಬುದನ್ನು ಯೋಚನೆ ಮಾಡಬೇಕು.

ಕೊನೆಯದಾಗಿ, untouchability ವಿಚಾರ. ಅಸ್ಪೃಶ್ಯತೆ ತೆಗೆಯಬೇಕೆಂಬ ಉದ್ದೇಶದಿಂದ ನರ್ಕಾರ

ಕೋಟ್ಯಾಂತರ ರೂಪಾಯಿ ಖರ್ಚುಮಾಡುತ್ತಿದೆ. ಆದರೆ ಅಂಟು ಮುಟ್ಟುವುದು ಎಲ್ಲಿ ಹೋಗಿದೆ, ಎಲ್ಲಿಲ್ಲ !

ಈ ಅಂಟು ಮುಟ್ಟುವ ವಿಚಾರಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೀರಿ. ಇದನ್ನು ಹೋಗಲಾಡಿಸುವುದಕ್ಕೆ ಸಾಧ್ಯವಿಲ್ಲ. ಎಲ್ಲೋ ದೂರದಲ್ಲಿರುವ ಜನರ ಹಕ್ಕು ಬಾಧ್ಯತೆಗಳಿಗಾಗಿ ಹೊಡೆದಾಡುತ್ತಿದ್ದೀರಿ. ಮೊದಲು ನೀವು ತೊಳೆದುಕೊಂಡು ಆಮೇಲೆ ಬೇರೆಯವರಿಗೆ ತೊಳೆಯಬೇಕು. ನಿಮ್ಮವರಿರುವ ಊರುಗಳಲ್ಲೇನು ಮೊದ ಬೇಕೆಂಬುದನ್ನು ಮೊದಲು ಆಲೋಚಿಸಿ ; ಅನಂತರ ಸಾವಿರಾರು ಮೈಲಿ ದೂರದಲ್ಲಿರುವರುವವರಿಗಾಗಿ ಹೊಡೆದಾಡಿ. ಅಂಟು ಮುಟ್ಟುವುದು ಹೋಗ ಬೇಕಾದರೆ ಸರ್ಕಾರದವರು ಒಂದು ನಿರ್ದಿಷ್ಟವಾದ ಕಾರ್ಯಕ್ರಮ ಹಾಕಿ ಉಗ್ರವಾದ ಕ್ರಮ ತೆಗೆದು ಕೊಳ್ಳಬೇಕು. ಸ್ಕ್ರೀಂ ಪ್ರಕಾರ ಖಚಿತವಾಗಿ ಕಾರ್ಯ ರೂಪಕ್ಕೆ ತರಬೇಕು ಅಮೇರಿಕಾದಲ್ಲಿ ನಿಗ್ರೋಜನರ ಮಕ್ಕಳು ಶಾಲೆಗೆ ಹೋಗುವಾಗ ಗಲಾಟೆಯಾಗದಂತೆ ಹೇಗೆ ನೋಡಿಕೊಂಡು ಉಗ್ರ ಕ್ರಮ ಕೈಕೊಂಡರೋ ಹಾಗೆ ಅನ್ಯಾಶ್ಯತಾನಿವಾರಣೆಗೆ ಇಲ್ಲೂಕೂಡ ಉಗ್ರಕ್ರಮ ಕೈಕೊಂಡರೆ ಮಾತ್ರ ಅದು ನಿವಾರಣೆ ಆಗುವುದಕ್ಕೆ ಸಾಧ್ಯ, ಇಲ್ಲದಿದ್ದರೆ ಸಾಧ್ಯವಿಲ್ಲ.

*ಶ್ರೀ ಎಸ್ ಮುನಿರಾಜು (ಚಿಕ್ಕಬಳ್ಳಾಪುರ).— ಮಾನ್ಯ ಸಭಾಪತಿಗಳೇ ಈ ದಿನ ಸಭೆಯ ಮುಂದಿಟ್ಟಿರತಕ್ಕಂಥ ಡಿಮ್ಯಾಂಡುಗಳನ್ನು ಸಮರ್ಥಿಸುತ್ತಾ ಕೆಲವಾರು ಸೂಚನೆಗಳನ್ನು ಹೇಳಬಯಸುತ್ತೇನೆ. ನುಮಾರು ಮೂರು ಡಿಮ್ಯಾಂಡುಗಳಿರುವುದರಿಂದ ಎಲ್ಲ ವಿಷಯಗಳನ್ನೂ ಸವಿಸ್ತಾರವಾಗಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಮುಖ್ಯವಾಗಿ ಡಿಮ್ಯಾಂಡ್ ನಂಬರ್ ಎಂಟರಲ್ಲಿ 13 ಸ್ಟೇಟ್ ಟಾಕ್ಸ್ ಅಂಡ್ ಡ್ಯೂಟೀಸ್ ಎಂಬುದರಲ್ಲಿ ಈ ವರ್ಷ ವಿದ್ಯುಚ್ಛಕ್ತಿ ಬಾಬಿನಿಂದ ನುಮಾರು 43.45 ಲಕ್ಷರೂಪಾಯಿಗಳು ಸರ್ಕಾರಕ್ಕೆ ಬರಬಹುದೆಂದು ನಿರೀಕ್ಷೆ ಮಾಡಿದ್ದಾರೆ. ವಿದ್ಯುಚ್ಛಕ್ತಿಯನ್ನು ಡೊಮೆಸ್ಟಿಕ್ ಪರ್ಪಸಸ್‌ಗೆ ಉಪಯೋಗಿಸುವುದಕ್ಕೆ ಹಿಂದೆ ತೆರಿಗೆ ಹಾಕದೆ ಈಗ ಹಾಕಿದ್ದಾರೆ. ಬಡ್ಜೆಟ್ ಮೆಮೊರಾಂಡಂನಲ್ಲಿ ಆ ವಿಚಾರ ಹೇಳಿದ್ದಾರೆ. ಮಾನ್ಯಮಂತ್ರಿಗಳಾಗಿದ್ದ ಶ್ರೀ ಭಾಷ್ಯಂರವರು 1950 ನೆಯ ಇನವಿಯಲ್ಲಿ ಈ ತೆರಿಗೆಯ ವಿಚಾರದಲ್ಲಿ ಹೀಗೆ ಹೇಳಿದ್ದಾರೆ.—

> "I wish to bring to the notice of the Hon'ble Members of this House that in so taxing we have got a provision authorising the government to give exemption. Under that provision, we have issued an order that domestic consumption of electricity will be exempted from the operation of this tax."

ಹೀಗೆ ಸವಿಸ್ತಾರವಾಗಿ ಹೇಳಿ ಅವರು ಆಗಿದ್ದಂಥ ಮಾನ್ಯ ಸಭೆಗೆ ಭರವಸೆ ನೀಡಿದ್ದರು. ಹಾಗೆ ಭರವಸೆ ನೀಡಿದ್ದರೂ ಈಗ ಸರ್ಕಾರದವರು ಸುಂಕ ವಿಧಿಸಿದ್ದಾರೆ.

ಶ್ರೀ ಟಿ. ಮರಿಯಪ್ಪ (ಹಣಕಾಸು ಖಾತೆಯ ಸಚಿವರು).—ಆಗಿನ ಕಾಲದಲ್ಲಿ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ನ್ಫಲ್ಪ ನರ್ಪ್ಲಸ್ ಉಳಿಯುತ್ತಿತ್ತು. ಆದ್ದರಿಂದ ಡೊಮೆಸ್ಟಿಕ್ ಕನ್ಸಮ್ಷನ್‌ಗೆ ಹೆಚ್ಚು ಛಾರ್ಜ್ ಮಾಡ ಬೇಕಾಗಿರಲಿಲ್ಲ. ಈಚೆಗೆ ಕಡಿಮೆಯಾಗುತ್ತಾ ಬಂದಿದೆ.

ಶ್ರೀ ಎಸ್. ಮುನಿರಾಜು.—ಮಾನ್ಯ ಮಂತ್ರಿಗಳು ಹೇಳುವ ಫೈನಾರ್ಷಿಯಲ್ ಆಸ್ಪೆಕ್ಟನ್ನು ಒಪ್ಪುತ್ತೇನೆ. ಆದರೆ ಸರ್ಕಾರದವರು ಭರವಸೆ ಕೊಟ್ಟರು. ಈಗ ಯಾವರೀತಿ ಕಡಿಮೆ ಮಾಡುವುದಕ್ಕಾಗುತ್ತದೆಂದು ಹೇಳುವಾಗ, ಉಪಯೋಗ ಮಾಡುವವರಿಗೆ ಯಾವ ರೀತಿ ಉತ್ಪನ್ನ ಜಾಸ್ತಿಯಾಗಿಯೆಂಬುದನ್ನು ಆಲೋಚನೆ ಮಾಡಬೇಕು. ಹೀಟಿಂಗ್ ಸಕ್ಯೂಟ್‌ಗೆ ಹೆಚ್ಚು ದರ ವಿಧಿಸುತ್ತೇವೆ. ಅದರಿಂದ ಲಾಭ ಬರುತ್ತದೆ ಎಂದು ಭರವಸೆ ಕೊಟ್ಟು ಸಾವಿರಾರು ರೂಪಾಯಿಗಳ ಬಂಡವಾಳ ಹಾಕಿದಮೇಲೆ ಈಗ ಅದರಿಂದ ನಷ್ಟವಾಗುತ್ತದೆ, ಆದ್ದರಿಂದ ಹೆಚ್ಚು ಮಾಡಿದ್ದೇವೆ ಎಂದು ಹೇಳುವುದನ್ನು ಒಪ್ಪುವುದಕ್ಕಾಗುವುದಿಲ್ಲ. ಈ ಮಾನ್ಯ ಸಭೆಗೆ ಕೊಟ್ಟಿರುವ ಭರವಸೆಯಂತೆ ನಡೆಯಲು ಅವಕಾಶ ತಪ್ಪಿದಾಗ ಈ ಸಭೆಯ ಅಭಿಪ್ರಾಯ ಕೇಳಿ ವ್ಯವಸ್ಥೆ ಮಾಡಬೇಕಾಗಿತ್ತು. ಕೊಟ್ಟ ಭರವಸೆಗೆ ವ್ಯತಿರಿಕ್ತವಾಗಿ ಹೋಗುವುದು ಖಂಡಿತ ಸರಿಯಲ್ಲ, ಇದನ್ನು ಪುನರಾಲೋಚನೆ ಮಾಡಬೇಕು ಎಂದು ಈ ಡಿಮ್ಯಾಂಡ್ ವಿಷಯದಲ್ಲಿ ಹೇಳುತ್ತೇನೆ.

ಆಮೇಲೆ ಸ್ಟೇಟ್ ಎಕ್ಸೈಜ್ ಡ್ಯೂಟೀಸ್ ವಿಚಾರ ಕೂಡ ಹೆಚ್ಚಾಗಿ ಹೇಳುವ ಪ್ರಮೇಯವಿಲ್ಲವೆಂದು ಕಾಣುತ್ತದೆ. ನಮ್ಮ ಅದೃಷ್ಟವೆಂದು ಕಾಣುತ್ತದೆ, ಶ್ರೀ ನಿಜಲಿಂಗಪ್ಪನವರು ಈ ವಿಷಯದಲ್ಲಿ ನಾನು ಏನು ಮಾತನಾಡಬೇಕಾಗಿತ್ತೋ ಅದಕ್ಕೆ ಅವಕಾಶ ಕೊಡದೆ ನುಮಾರು ಒಂದು ವರ್ಷದಲ್ಲಿ ಖಚಿತವಾದ ಅಭಿಪ್ರಾಯವನ್ನು ಪಾನ ನಿರೋಧದ ನೀತಿ ವಿಚಾರವಾಗಿ ಹೇಳುತ್ತೇನೆಂದು ಸೂಚಿಸಿರುವುದರಿಂದ ಅವರಿಗೆ ವಂದಿನುತ್ತೇನೆ. ಶ್ರೀ ಮರಿಯಪ್ಪನವರು ಈಗ ಪರಿಸ್ಥಿತಿ ಬದಲಾವಣೆಯಾಗಿದೆ, ಆದ್ದರಿಂದ ಈ ತೆರಿಗೆ ಹಾಕಿದೆ ಎಂದು ಹೇಳಿದರು ಅಂತೆಯೇ ಒಂದು ವರ್ಷವಾದ ಮೇಲೆ ಪರಿಸ್ಥಿತಿ ಬದಲಾವಣೆಯಾಗಿದೆ, ಖಚಿತ ಅಭಿಪ್ರಾಯ ತಿಳಿಸುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುವುದಕ್ಕೆ ಸರ್ಕಾರದವರು ಅವಕಾಶ ಕೊಡದೆ, ಪಾನನಿರೋಧವನ್ನು ಪೂರ್ಣವಾಗಿ ತೆಗೆಯುವುದು ಅಥವಾ ಜಾರಿಗೆ ತರುವುದು ಈ ಎರಡರಲ್ಲಿ ಒಂದು ಅಭಿಪ್ರಾಯವನ್ನು ಖಚಿತವಾಗಿ ಸೂಚಿಸಬೇಕೆಂದು ಬಿನ್ನವಿಸುತ್ತೇನೆ.

ರೂರಲ್ ಡೆವಲಪ್‌ಮೆಂಟ್ ವಿಷಯದಲ್ಲಿ ಮಾನ್ಯ ಮಿತ್ರರನೇಕರು ಹೇಳಿದ್ದಾರೆ, ಈ ವಿಚಾರದಲ್ಲಿ ನಮ್ಮ ನ್ಥಳೀಯ ಸಂಸ್ಥೆಗಳ ಸಚಿವರು ತಾಲ್ಲೂಕು ಲೆವಲ್‌ನಲ್ಲಿ ಸಮಿತಿ ಏರ್ಪಾಡು ಮಾಡುತ್ತೇವೆಂದು ಆಗಲೇ ಹೇಳಿದರು. ಈ ದಿವಸ ಹಳ್ಳಿ ಉದ್ಧಾರವಾಗ ಬೇಕೆಂದು ಹೇಳುತ್ತಿದ್ದಾರೆ, ಆದರೆ ಅದಕ್ಕೆ ಸರಿಯಾದ ವ್ಯವಸ್ಥಿತರೀತಿಯಲ್ಲಿ ನಡೆಯಲು ಏರ್ಪಾಡು ಮಾಡಿಲ್ಲ ಎಂದು ಮುಖ್ಯವಾಗಿ ಹೇಳುವುದು ಕಂಡು ಬರುತ್ತದೆ, ಅದಕ್ಕೆ ರೂರಲ್ ಡೆವಲಪ್‌ಮೆಂಟ್ ಕಮಿಟಿ ಮಾಡಬೇಕೆಂದು ಹೇಳುತ್ತಿದ್ದೀರಿ.

ಶ್ರೀ ಆರ್. ಚೆನ್ನಿಗರಾಮಯ್ಯ.—ತಾವು ತಪ್ಪಾಗಿ ತಿಳಿದುಕೊಂಡಂತೆ ಕಾಣುತ್ತದೆ. ಪೆಡ್ಡೂರ್ ಕ್ಯಾಸ್ಟ್ ನವರು ಮನೆಕಟ್ಟಿಕೊಳ್ಳಲು ಸೌಕರ್ಯ ಒದಗಿಸುವ ವಿಚಾರದಲ್ಲಿ ತಾಲ್ಲೂಕು ಲೆವೆಲ್‌ನಲ್ಲಿ ಸಮಿತಿ ಮಾಡುವ ವಿಚಾರ ನಾನು ಹೇಳಿದೆನೇ ಹೊರತು ರೂರಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ಹೇಳಲಿಲ್ಲ.

ಶ್ರೀ ಎಸ್. ಮುನಿರಾಜು.—ತಾಲ್ಲೂಕು ಮಟ್ಟದಲ್ಲಿ ಒಂದು ನಮಿತಿಯಿಲ್ಲದಿದ್ದರೆ ಖಂಡಿತವಾಗಿಯೂ ಈ ದಿವನ ಲಕ್ಷಾಂತರ ರೂಪಾಯಿ ಖರ್ಚು ಮಾಡಬೇಕಾಗಿರುವುದನ್ನು ಖರ್ಚುಮಾಡಲು ಖಂಡಿತ ಸಾಧ್ಯವಾಗುವುದಿಲ್ಲ, ಖರ್ಚುಮಾಡುವ ಹಣ ವ್ಯವಸ್ಥಿತ ರೀತಿಯಲ್ಲಿ ಖರ್ಚಾಗಿ ಸರ್ಕಾರ ನಿರೀಕ್ಷಿಸುವಷ್ಟು ಫಲ ಬೊರೆಯುವುದಿಲ್ಲ. ಸರ್ಕಾರದ ಉದ್ದೇಶ ಸಫಲವಾಗುವುದಿಲ್ಲ. ಆದ್ದರಿಂದ ಆಷ್ಟು ಜಾಗ್ರತೆ ಯಾವುದಾದರೂ ಒಂದು ರೂಪದಲ್ಲಿ ಡೆವಲಪ್‌ಮೆಂಟ್ ಬೋರ್ಡ್ ಅಥವಾ ತಾಲ್ಲೂಕು ಬೋರ್ಡ್ ಅಥವಾ ನಮಿತಿ ಮಾಡಿ ಅವರ ನಲಹೆಯ ಮೇಲೆ ನೇರವಾಗಿ ಕೆಲನ ನಡೆನುವ ಏರ್ಪಾಡು ಮಾಡಿದ ಹೊರತು ಖಂಡಿತ ಗ್ರಾಮಾಭಿವೃದ್ಧಿ ಮಾಡಲು ಸಾಧ್ಯವಾಗುವುದಿಲ್ಲವೆಂದು ಹೇಳುತ್ತೇನೆ. ಬಿಡ್ಜೆಟ್ ಮೆಮೊರಾಂಡಂನ ಅರನೆಯ ಪುಟದಲ್ಲಿರುವಂತೆ ನುಮಾರು ಹತ್ತು ಲಕ್ಷ ರೂಪಾಯಿ ಹೋದವರ್ಷ ಉಳಿತಾಯವಾಗಿದೆ, ನರೆಂಡರ್ ಆಗಿದೆ. ಹೀಗಾದರೆ ಇನ್ನೇನು ಡೆವಲಪ್‌ಮೆಂಟ್ ಆಗುತ್ತದೆಯೋ ನನಗೆ ಅರ್ಥವಾಗುವಲ್ಲ. ಇಂಟರ್ ವಿಲೇಜ್ ಕಮ್ಯೂನಿಕೇಷನ್‌ಗೆ 11 ಲಕ್ಷ ರೂಪಾಯಿ ಇದೆಯೆಂದು ಹೇಳುತ್ತೀರಿ. ಅದರಲ್ಲಿ 11 ರೂಪಾಯಿ ಕೂಡ ಖರ್ಚಾಗುವುದಿಲ್ಲ, 1957–58ರಲ್ಲಿ ರೂರಲ್ ಡೆವಲಪ್‌ಮೆಂಟ್‌ಗೆ ಇಂಟರ್ ವಿಲೇಜ್ ಕಮ್ಯೂನಿಕೇಷನ್ ಬಾಬಿನಲ್ಲಿ ಎಷ್ಟು ಖರ್ಚುಮಾಡಿದ್ದೀರಿ, ಎಷ್ಟು ಒದಗಿಸಿತ್ತು ಎಂಬುದನ್ನು ಹೇಳಬೇಕೆಂದು ಪ್ರಾರ್ಥಿನುತ್ತೇನೆ. ನನ್ನ ಕ್ಷೇತ್ರದಲ್ಲಿ ಮೂರು ತಾಲ್ಲೂಕುಗಳಿವೆ, ಅಮಲ್ದಾರರು 31–3–1958ರ ವರೆಗೆ ಒಂದು ರೂಪಾಯಿ ಕೂಡ ಇಂಟರ್‌ವಿಲೇಜ್ ಕಮ್ಯೂನಿಕೇಷನ್‌ಗೆ ಒದಗಿಸಿಲ್ಲ.

Rural health, sanitationಗಾಗಿ ಹಣ ಒದಗಿನಲಾಗಿದೆ. ಆದರೆ ರಸ್ತೆ ನಂಚಾರ ಮಾರ್ಗಗಳಿಗಾಗಿ ಖಂಡಿತವಾಗಿ ಹಣ ಒದಗಿಸಿಲ್ಲ. ನಂಚಾರ ನೌಲಭ್ಯ, ನೀರಿನ ನೌಕರ್ಯ ಇವುಗಳನ್ನು ಒದಗಿಸಿಕೊಡುವುದು ನರ್ಕಾರಕ್ಕೆ ಆಗದೇಇದ್ದರೆ, ಪ್ರಗತಿದಾಯಕವೆಂದು ಹೆನರಾದ ನಮ್ಮ ರಾಜ್ಯಕ್ಕೆ ಕೀರ್ತಿತರತಕ್ಕಂಥ ಮಾತಲ್ಲ. ನಂಚಾರ ನೌಲಭ್ಯಕ್ಕಾಗಿ ಇಷ್ಟು ಹಣವನ್ನಾದರೂ ಖರ್ಚುಮಾಡಬೇಕು ಎಂದು ತಾಲ್ಲೂಕುಗಳಿಗೆ ತಿಳಿನಬೇಕು ಎಂದು ಬಿನ್ನವಿನಿಕೊಳ್ಳುತ್ತೇನೆ.

Rural water supply scheme ವಿಚಾರವನ್ನು ಬರೀ ಮಾತಿನಲ್ಲಿ ಅಷ್ಟೇ ಹೇಳುತ್ತಾ ಇದ್ದೀರಿ. Protected water supply schemeಗಾಗಿ ಕೇಂದ್ರ ನರ್ಕಾರ ದುಡ್ಡು ಕೊಡುತ್ತಾರೆ. ಈ ನ್ಕೀಮನ್ನು ಎಲ್ಲೆಲ್ಲಿ ಕೈಕೊಂಡು ಕಾರ್ಯ ನೆರವೇರಿನಿದ್ದೀರಿ, ನೀರು ಕೊಟ್ಟಿದ್ದೀರಿ ಎಂದು ಕೇಳುತ್ತೇನೆ. ಕೋಲಾರ ಜಿಲ್ಲೆಯಲ್ಲಿ ಭಾವಿಗಳನ್ನು ಹೊಡೆಯುತ್ತಲೇಇದ್ದೀರಿ ಎಂದು ಹೇಳುತ್ತೀರಿ. ಮಾತಿನಲ್ಲಿಯೇ ಹೆಚ್ಚಾಗಿ ಭಾವಿಗಳು ಆಗಿದೆಯೇ ಹೊರತು ಏನೂ ಕೆಲನ ಆಗುತ್ತಿಲ್ಲ. 30 ಅಥವಾ 40 ನಾವಿರ ರೂಪಾಯಿ ಖರ್ಚು ಮಾಡಲು ನಾಧ್ಯವಿಲ್ಲ, ಶಕ್ಯವಿಲ್ಲ ಎಂದು ಹೇಳುತ್ತೇನೆ. 1957-58ರಲ್ಲಿ ಜಾಗ್ರತೆ ಹಣ ತೆಗೆದುಕೊಳ್ಳಲಿಲ್ಲ ಎಂದು ನಾನು ಕೇಳಿದ್ದೇನೆ. 1957-58ರಲ್ಲಿ Protected water supply scheme ಜಾರಿ ಮಾಡಲಿಲ್ಲ. ಗುಡಿಬಂಡೆ ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ನಾಮಾನ್ಯ ಭಾವಿಗಳನ್ನು ನಹ ಒದಗಿಸಿಲ್ಲ. ಇಂದಿಗೆ ಏಪ್ರಿಲ್ 17ನೆಯ ತಾರೀಖು ಆಗಿಹೋಯಿತು. ಇನ್ನೂ ಮಂಜೂರು ಆಗಿಲ್ಲ. ವರ್ಷದ ಕೊನೆಯವರೆಗೆ ಮಾಡದೇಇದ್ದರೆ ಏನು ಪ್ರಯೋಜನ?

ಇನ್ನು ಡಿಪ್ರೆನ್ಡ್ ಕ್ಲಾನ್ ಬಗ್ಗೆ ಶ್ರೀ ದುಗ್ಗಪ್ಪ ನವರು ವಿನ್ತಾರವಾಗಿ ಹೇಳಿದ್ದಾರೆ. ಅದನ್ನೇ ಪುನಃ ಹೇಳಲು ನಾನು ಬಯನುವುದಿಲ್ಲ. ಪ್ರಾಥಮಿಕ ಶಾಲೆಗಳಲ್ಲಿ ಒಂದು ನೂರು ನ್ಕಾಲರ್‌ಷಿಪ್ ಕೊಡಬೇಕು. 10-15 ರೂಪಾಯಿ ಕಂದಾಯ ರಿಯಾಯಿತಿ ಕೊಡಿ. ಭಾವಿಯು ನಲುವಾಗಿ 150 ರೂಪಾಯಿಂದ 500 ರೂಪಾಯಿವರೆಗೆ ಧನನಹಾಯ ಮಾಡಬೇಕು. ಹಿಂದುಳಿದ ವರ್ಗದವರ ಆರ್ಥಿಕ ಸ್ಥಿತಿ ನುಧಾರಿನಬೇಕಾದರೆ ಅವರ ಉತ್ಪತ್ತಿ ಹೆಚ್ಚಾಗಬೇಕಾದರೆ ಪೊದಲು ವಿದ್ಯಾಭ್ಯಾನ ನುವ್ಯವಸ್ಥಿತವಾಗಿ ನಡೆನಿಕೊಂಡು ಬಂದರೆ ಅವರು ಉದ್ಧಾರವಾಗುತ್ತದೆ. 300 ರೂಪಾಯಿ ಮನೆಗಳನ್ನು ಕಟ್ಟುವುದಕ್ಕೆ ಕೊಟ್ಟರೆ ನಾಲುವದಿಲ್ಲ. ಅಷ್ಟು ಕಡಿಮೆ ಖರ್ಚಿನಲ್ಲಿ ಕಟ್ಟಿದ ಮನೆ ನಾಲ್ಕು ವರ್ಷದಲ್ಲಿ ಬಿದ್ದುಹೋಗುತ್ತದೆ. ಇಂಥ ಕಾರ್ಯಕ್ರಮದಿಂದ ನಿಮ್ಮ ವರ್ಗದವರು ಉದ್ಧಾರವಾಗುವುದಿಲ್ಲ. ಪ್ರಥಮದಲ್ಲಿ ಹಿಂದುಳಿದ ವರ್ಗದವರ ಆರ್ಥಿಕ ಸ್ಥಿತಿ ಉತ್ತಮಗೊಳ್ಳಲು ಏನೇನು ಬೇಕೋ ಅದನ್ನೆಲ್ಲವನ್ನೂ ಮಾಡಬೇಕು ಎಂದು ಹೇಳುತ್ತೇನೆ. ಇಷ್ಟು ಹೇಳಿ ನನ್ನ ಭಾಷಣ ಮುಗಿನುತ್ತೇನೆ.

5 P.M.

ಶ್ರೀ ಬಿ. ಆರ್. ಕರ್ಕೆರ (ನುರಾತ್‌ಕಲ್).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವನ ನಮ್ಮ ನರ್ಕಾರದವರು ಈ ನಭೆಯ ಮುಂದೆ ಇಟ್ಟಿರುವ ಡಿಮ್ಯಾಂಡ್ ನಂಬರ್ (3) 8 ಸ್ಟೇಟ್ ಎಕ್ಸೈಜು ಬಾಬಿಗೆ ಒದಗಿನಿರುವ 28 ಲಕ್ಷದ 61 ನಾವಿರ ರೂಪಾಯಿಗಳನ್ನು ನಾನು ನಂಪೂರ್ಣವಾಗಿ ನ್ವಾಗತಿನುತ್ತಾ ಎರಡೆರಡು ಮಾತುಗಳನ್ನು ಹೇಳಲಚ್ಚಿನುತ್ತೇನೆ.

ಈಗ 1947ನೆಯ ಇನವಿ ಅಕ್ಟೋಬರ್‌ನಲ್ಲಿ ನಮ್ಮ ನೌತ್ ಕೆನರಾ ಡಿನ್ಟ್ರಿಕ್ಟ್‌ನಲ್ಲಿ ಪ್ರೊಹಿಬಿಷನ್ ಜಾರಿಗೆ ಬಂತು. ಈ ವಿಷಯದ ಮೇಲೆ ವಿರೋಧ ಪಕ್ಷದವರೂ ಮತ್ತು ಆಡಳಿತ ಪಕ್ಷದವರೂ, ಇತರ ನದನ್ಯರೂ ವಿಶೇಷವಾದ ಟೀಕೆಗಳನ್ನು ಮಾಡಿದ್ದಾರೆ. ಆದರೆ ಪ್ರೊಹಿಬಿಷನ್ ಮಾತ್ರ ನಕ್ನೆನ್‌ಫುಲ್ ಆಗಿದೆಯೆಂದು ಯಾರೂ ಹೇಳುವುದಕ್ಕಾಗುವುದಿಲ್ಲ. ಆ ರೀತಿ ಯಾರೂ ಹೇಳಲಿಲ್ಲ. ನಾರಾಯಿ ಕುಡಿಯುವುದರಿಂದ ಕೂಲಿ ಕೆಲನ ಮಾಡುವವರ ಮತ್ತು ಬಡವರ ಹೆಂಡತಿ ಮಕ್ಕಳನ್ನು ಗರೀಬರನ್ನಾಗಿ ಮಾಡುವುದಲ್ಲದೆ ಅವರ ಮನನ್ಥಿನ ಸ್ಥಿತಿಯೂ ಬದಲಾವಣೆಯಾಗುತ್ತದೆ. ಪಾನನಿರೋಧವಿರುವ ನ್ಥಳಗಳಲ್ಲಿರುವ ಕೂಲಿಯಾಳುಗಳು ಎಷ್ಟೋ ಜನ ಈಗ ನಮ್ಮ ಹೆಂಡತಿಮಕ್ಕಳು ನಂತೋಷವಾಗಿದ್ದಾರೆ. ನಮ್ಮ ನಂನಾರ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳುತ್ತಾರೆ. ಅದಕ್ಕೆ ನಾನು ನಂತೋಷಪಡುತ್ತೇನೆ. ಪಾನನಿರೋಧ ಜಾರಿ ಇಲ್ಲದಿರುವಾಗ ಎಲ್ಲ ಪ್ರದೇಶಗಳಲ್ಲಿ ಇಲ್ಲಿನಿಟ್ ಆಗುತ್ತಿತ್ತು ಎಂದು ನಾನು ಹೇಳುತ್ತೇನೆ. ಇಲ್ಲಿನಿಟ್ ಎಂಬುದು ಪ್ರೊಹಿಬಿಷನ್ ಬರುವುದಕ್ಕೆ ಮುಂಚೆಯೇ ಇತ್ತು. ಆಗ ಬಾಟಲ್ ಒಂದಕ್ಕೆ ಮೂರು-ನಾಲ್ಕು ರೂಪಾಯಿಗಳಿತ್ತು. ಟಾಡಿಲಿಕ್ಕರ್ ಮತ್ತು ಪಾಮ್ ಟಾಡಿಲಿಕ್ಕರ್ ಆರು-ಏಳು ರೂಪಾಯಿಗಳಿಗೆ ಹೋಗಿತ್ತು. ಈಗ ಪುನಃ ಅದು ಒಂದೂವರೆ ರೂಪಾಯಿ ಎರಡು ರೂಪಾಯಿಗಳಾಯಿತು. ಇದರಿಂದ ಪ್ರೊಹಿಬಿಷನ್ ನಕ್ನೆನ್‌ಫುಲ್ ಆಗಿದೆಯೇ ಇಲ್ಲವೇ ಎಂಬುದನ್ನು ಚೆನ್ನಾಗಿ ತಿಳಿಯಬಹುದು. ಈಗ ಎಷ್ಟೋ ಜನ ಬಡವರು, ಅದರಲ್ಲೂ ಮಧ್ಯಮವರ್ಗ

ದವರು ಶೇಕಡ 75 ಭಾಗ ಕುಡಿಯುವುದೇ ಇಲ್ಲ. ಇದೇ ರೀತಿಯಾಗಿ ಬಡವರ ಕಷ್ಟಗಳನ್ನು ದೂರಪಡಿಸಬೇಕು. ಇದಲ್ಲದೆ ನಮ್ಮ ಪ್ರೊಹಿಬಿಷ್ಷ್ ವಿಷಯದಲ್ಲಿ ನಾನು ಇನ್ನೊಂದು ಸಂಗತಿಯನ್ನು ಹೇಳುತ್ತೇನೆ. ಮದ್ರಾಸ್ ಸರ್ಕಾರದವರು 1947ನೆಯ ಇಸವಿ ಅಕ್ಟೋಬರ್ ತಿಂಗಳಲ್ಲಿ ಪ್ರೊಹಿಬಿಷ್ಷ್ ಅಕ್ಟನ್ನು ಜಾರಿಗೆ ತಂದರು. ಆ ಕಾಲದಲ್ಲಿ ಒಂದು ದೊಡ್ಡ ಚಳುವಳಿ ನಡೆಯಿತು. ಬೆಲ್ಲ ತಯಾರಿಕೆಗೋಸ್ಕರ ಲೈಸನ್ಸ್‌ನ್ನು ಫ್ರೀಯಾಗಿ ಕೊಟ್ಟರು. 1952ನೆಯ ಇಸವಿಯಲ್ಲಿ ಎರಡು ತಾಲ್ಲೂಕುಗಳಲ್ಲಿ ನೀರಾ ಅಂಗಡಿಗಳನ್ನು ತೆರೆಯಲು ಲೈಸನ್ಸನ್ನು ಕೊಟ್ಟರು. ನೀರಾವನ್ನು ಮಾರುವುದರಿಂದ ಕಳ್ಳಭಟ್ಟಿ ಕುಡಿಯುವುದು ಕಡಮೆಯಾಗುವುದು. ಆದರೆ ಎರಡು ತಾಲ್ಲೂಕಿನವರಿಗೆ ಆ ರೀತಿ ಲೈಸೆನ್ಸ್ ಕೊಟ್ಟು ಬಾಕಿಯವರಿಗೆ ಲೈಸನ್ಸ್ ಕೊಡದೇ ಇರುವುದರಿಂದ ಅಲ್ಲಿ ಒಂದು ತರಹ ತೊಂದರೆಯಾಗಿದೆ. ಪ್ರತಿಯೊಂದು ಕೊ-ಆಪರೇಟಿವ್ ಸೊಸೈಟಿಯವರು ನೀರಾ ಅಂಗಡಿ ಒಂದಕ್ಕೆ 50 ರೂಪಾಯಿಗಳ ಲೈಸೆನ್ಸ್ ಫೀ ಕಟ್ಟಬೇಕು ಮತ್ತು ನಿಗದಿಯಾದ ದರದಲ್ಲಿ ಮಾರಬೇಕು. ಕಾಫಿ, ಟೀ ಪಾನೀಯಗಳಿರುವ ಅಂಗಡಿಗಳಿಗೆ ಲೈಸೆನ್ಸ್ ಇಟ್ಟಿರುವ ಹಾಗೆ ಈ ನೀರಾ ಪಾನೀಯ ಅಂಗಡಿಗೂ ಲೈಸನ್ಸ್ ಇಡಬೇಕು. ನೀರಾವನ್ನು ಒಂದು ಜ್ಯೊಂ ಲಿಮಿಟ್ಟಿನೊಳಗೆ ಕೊಡಬೇಕು. ನೀರಾವನ್ನು 12 ಘಂಟೆಗಳತನಕ ಇಡಬಹುದು. ನೀರಾ ಪಾರ್ಲರ್‌ಗೆ ಲೈಸೆನ್ಸ್ ಕೊಟ್ಟರೆ ಅದು ಸರ್ಕಾರಕ್ಕೆ ಲಾಭವೇ ಹೊರತು ಲುಕ್ಸಾನು ಇಲ್ಲ. ಬೆಳಿಗ್ಗೆ 9 ಘಂಟೆಯಿಂದ 10 ಘಂಟೆಯವರೆಗೂ ಮತ್ತು ಸಾಯಂಕಾಲ 4 ಘಂಟೆಯಿಂದ 7 ಘಂಟೆಯವರಿಗೂ ನೀರಾ ಮಾರಾಟಮಾಡುವ ಹಾಗೆ ಲೈಸೆನ್ಸ್ ಕೊಡಬೇಕು. ಆ ರೀತಿ ಕೊಟ್ಟಪಕ್ಷಕ್ಕೆ ನಮ್ಮಲ್ಲಿ ಆಗುತ್ತಿರುವ ಇಲ್ಲಿಸಿಟ್ ಕಡಿಮೆಯಾಗುತ್ತದೆ. ನೀರಾವನ್ನು ಕುಡಿಯುವುದರಿಂದ ಯಾವ ದೋಷವೂ ಇರುವುದಿಲ್ಲವೆಂದು ಪಾಮ್‌ಗ್ರೂವ್ ಎಕ್ಸ್‌ಪರ್ಟ್ಸ್ ಹೇಳಿದ್ದಾರೆ. ಕೇಂದ್ರ ಸರ್ಕಾರದ ಶ್ರೀ ಗಜಾನನ ನಾಯಕ್‌ಅವರು ಈ ವಿಚಾರದ ಬಗ್ಗೆ ಒಂದು ಪುಸ್ತಕವನ್ನೇ ಬರೆದು ಪ್ರಚುರಪಡಿಸಿದ್ದಾರೆ. ನಾವು ನೀರಾವನ್ನು 12 ಘಂಟೆ ಕೂಡಿಡಬಹುದು, ಅದರಿಂದ ಏನೂ ದೋಷ ಬರುವುದಿಲ್ಲ, ಅದು ಜೀವಕ್ಕೆ ಒಳ್ಳೆಯದು ಎಂದು ತಿಳಿಸಿದ್ದಾರೆ. ಇಲ್ಲಿಸಿಟ್ ಮಾಡುವುದಾದರೆ ಅಂತಹ ನೀರಾವನ್ನು ಅಂಗಡಿಗಳಲ್ಲಿ ಇಡಬಾರದು ಎಂದು ನಾನು ಹೇಳುತ್ತೇನೆ. ನಾವು ಹೇಳಿದ ಜ್ಯೊಂ ತಪ್ಪಿದ ನಂತರ ನೀರಾ ಏನಾದರೂ ಹುಳಿ ಆಗುವುದಾದರೆ ಅಂತಹ ಹುಳಿಗೆ ಸಕ್ಕರೆಯನ್ನು ಕೂಡಿಸಿ ಅಂಗಡಿಯಲ್ಲಿ ಮಾರಾಟಮಾಡುತ್ತಾರೆ. ಅಂತಹ ನೀರಾವನ್ನು ಕುಡಿಯುವುದರಿಂದ ಏನೂ ಉಪಯೋಗವಿಲ್ಲ. ಆರೋಗ್ಯ ಕೆಡುತ್ತದೆ. ಅಂತಹ ಪದಾರ್ಥ ಅಂಗಡಿಯಲ್ಲಿ ವ್ಯಾಪಾರ ಮಾಡಕೂಡದು. ಈ ಸಂಗತಿಯನ್ನು ನಮ್ಮ ಸರ್ಕಾರದವರು ಆಲೋಚನೆಮಾಡಬೇಕು. ಲೈಸನ್ಸ್ ಕೊಟ್ಟಪಕ್ಷಕ್ಕೆ ನಮ್ಮ ಸರ್ಕಾರಕ್ಕೆ ಉತ್ಪತ್ತಿಯೇನೋ ಉಂಟು. ಸಾಮಾನ್ಯವಾಗಿ ನೀರಾ ಪಾರ್ಲರ್ ಇಟ್ಟಿರುವವರು ತೆಂಗಿನ ಮರಗಳನ್ನು ಅಥವಾ ತಾಳೆ ಮರಗಳನ್ನು ಕಟ್ಟುವ ಸಂದರ್ಭದಲ್ಲಿ ಒಂದು ಮರಕ್ಕೆ ಒಂದು ವರ್ಷಕ್ಕೆ ಒಂದು ರೂಪಾಯಿಯಂತೆ ಸರ್ಕಾರಕ್ಕೆ ಕೊಟ್ಟರೆ, 100 ತೆಂಗಿನಮರಗಳೋ ಅಥವಾ 100 ತಾಳೆಮರಗಳೋ ಹೊಂದಿರುವ ಪ್ರತಿಯೊಂದು ಸೊಸೈಟಿಯಿಂದ ಸುಮಾರು 100 ರೂಪಾಯಿಗಳ ಉತ್ಪತ್ತಿ ಬರುತ್ತದೆ. ಆ ಮರಗಳಿಗೆ ನಂಬರ್ ಹಾಕುವಾಗ ಎರಡು ನಮೂನೆಯ ನಂಬರ್ ಮಾಡಬೇಕು. ನೀರಾ ಟ್ಯಾಪಿಂಗ್ ಮಾಡುವ ತೆಂಗಿನಮರಗಳಿಗಾಗಲಿ ಅಥವಾ ತಾಳೆ ಮರಗಳಿಗಾಗಲಿ ಕೆಂಪು ನಂಬರ್ ಹಾಕಬೇಕು ಮತ್ತು ಇತರ ಮರಗಳಿಗೆ ಕಪ್ಪು ನಂಬರ್ ಹಾಕಬೇಕು. ಕೆಂಪು ನಂಬರ್ ಹಾಕಿದ ಮರಕ್ಕೊಂದರಂತೆ ಒಂದು ರೂಪಾಯಿಯನ್ನು ನೀರಾ ತಯಾರುಮಾಡುವುದಕ್ಕಾಗಿ ವಸೂಲುಮಾಡಬೇಕು. ಎಲ್ಲಾ ಪಾಲ್ಮ್ಯರಾ ಜಾಗರಿ ಕೋ-ಆಪರೇಟಿವ್ ಸೊಸೈಟಿಗಳೂ ಸುಮಾರು 50 ರೂಪಾಯಿಗಳ ಲೈಸನ್ಸ್ ಫೀಯನ್ನು ಕೊಡುವಂತೆ ವ್ಯವಸ್ಥೆಮಾಡಬೇಕು. ಬೆಲ್ಲದ ಮರಕ್ಕೆ ಲೈಸೆನ್ಸ್ ಫೀ ಇಲ್ಲ. ನೀರಾ ಪಾರ್ಲರ್‌ನ್ನು ಎಲ್ಲಾ ಕೋ-ಆಪರೇಟಿವ್ ಸೊಸೈಟಿಗಳೂ ಪ್ರಾರಂಭಿಸುವ ಹಾಗೆ ಏರ್ಪಾಡುಮಾಡಬೇಕು. ಅದರಿಂದ ಇಲ್ಲಿಸಿಟ್ ಕಡಮೆಯಾಗುತ್ತದೆ.

ಇನ್ನೊಂದು ಸಂಗತಿ. ಬೆಲ್ಲದಿಂದ ಸಾರಾಯಿ ಮಾಡುತ್ತಾರೆಂದು ಹೇಳುತ್ತಾರೆ. ನನಗೆ ಗೊತ್ತಿದೆ. 1947ನೆಯ ಇಸವಿಯಲ್ಲಿ ಈ ಪ್ರೊಹಿಬಿಷ್ಷ್ ಪ್ರಾರಂಭವಾದಾಗ್ಗೆ ಸುಮಾರು ಎರಡು ತಿಂಗಳುಗಳಲ್ಲಿ 80 ಸೊಸೈಟಿಗಳನ್ನು ಆರಂಭಮಾಡಿದ್ದೇವೆ. 80 ಸೊಸೈಟಿಗಳಿಗೂ ಬೆಲ್ಲ ಮೂರು ನರ್ಷಗಳವರೆಗೆ ಬರುತ್ತಿತ್ತು. ಅದನ್ನು ಆರ್ಡರ್ ಮಾಡುವವರು ಸೊಸೈಟಿಯ ಪ್ರೆಸಿಡೆಂಟರು. ಇದರ ಮೇಲ್ವಿಚಾರಣೆ ಕೊ-ಆಪರೇಟಿವ್ ಸೊಸೈಟಿಯ ಇನ್‌ಸ್ಪೆಕ್ಟರ್‌ಅವರ ಕೈಯ್ಯಲ್ಲಿತ್ತು. ಇವರು ನಿಜವಾಗಿ ಬೆಲ್ಲವನ್ನು ಸೊಸೈಟಿಗೆ ಬರುವುದಕ್ಕೆ ಬಿಡದೆ ಅವರೇ ಒಂದು ಆಣೆ ಪ್ರಕಾರ ತೆಗೆದು ಕೊಳ್ಳುತ್ತಿದ್ದರು. ಆ ರೀತಿ ಒಂದು ಆಣೆಯಂತೆ ತೆಗೆದುಕೊಳ್ಳುವುದರಿಂದ ನಿಜವಾಗಿ ನಮಗೆ ಬೆಲ್ಲ ಸೊಸೈಟಿಗೆ ಬರುವುದೇ ಕಡಿಮೆಯಾಗುತ್ತಿತ್ತು. ಬಜಾರಿನಲ್ಲೆ ಮಾತ್ರ ಕಡಿಮೆಯಾಗಲಲ್ಲ.

ಸೌತ್ ಕೆನರಾ ಮಾರ್ಕೆಟ್‌ನಲ್ಲಿ ಈ ಬೆಲ್ಲವನ್ನು ಮಾರಾಟಮಾಡುವರು; ಎಲ್ಲಾ ಕೋಮಿನವರೂ ಉಪಯೋಗಿಸುತ್ತಾರೆ. ಅದನ್ನು ನಾಶಮಾಡುವುದು ಅಷ್ಟು ಸರಿಯಲ್ಲ. ಪ್ರೊಹಿಬಿಷ್ಷ್ ಜಾರಿಗೆ ಬರಬೇಕು. ಕಾಂಗ್ರೆಸ್ ನೀತಿ ಪ್ರಕಾರ ಅದನ್ನು ಕೆಲವು ಕಡೆ ಈಗಾಗಲೇ ಜಾರಿಗೆ ತಂದದ್ದಾಗಿದೆ. ಮತ್ತು ಅದು ಸರಿಯಾಗಿ ಫಲಪ್ರದವಾಗಿ ಆಗಿದೆಎಂದು ಹೇಳಲಕ್ಕೆ ನಾನು ಸಿದ್ಧನಿದ್ದೇನೆ. ಹಣಕಾಸಿರುವವರು ಬೇಕಾದರೆ ಪರ್ಮಿಟ್ ಪ್ರಕಾರ ಅವರಿಗೆ ಬೇಕಾದಂಥ ಇಂಗ್ಲೀಷ್ ಶರಾಬು ತೆಗೆದುಕೊಳ್ಳಲಿ. ಇನ್ನೊಂದು ನಲಹೆ ಏನೆಂದರೆ ಹೊರ ಪ್ರಾಂತ್ಯದಿಂದ ನಮ್ಮ ದೇಶಕ್ಕೆ ಬಹಳ ಬೆರೆ ಬಾಳತಕ್ಕ ಬ್ರಾಂದಿ, ವಿಸ್ಕಿ ಮುಂತಾದುವು ಸ್ಮಗ್ಲಿಂಗ್ (smuggling) ಆಗಿ ಬರುತ್ತಿದೆ. ಇನ್ನು ಮುಂದಾದರೂ ಅದು ಆಗದಂತೆ ಹೆಚ್ಚು ಬಲಪಡಿಸಬೇಕು. ಗೋವಾದಿಂದ ಬಂದು ಹೋಗುವಂಥಾ ಸಾಮಾನುಗಳನ್ನು ನಿಲ್ಲಿಸುವುದು ಉತ್ತಮ. ಅಲ್ಲಿಂದ ಲಾರಿಗಳಲ್ಲಿ ಬರತಕ್ಕ ಸಾಮಾನುಗಳ ನಡುವೆ ಶರಾಬುಗಳು ಈ ಸಾಮಾನಿನಮಟ್ಟಿಗೆ ಬರುತ್ತದೆ. ಅದನ್ನು ನಿಲ್ಲಿಸಲು ನಮ್ಮ ಸರ್ಕಾರ ಕಾರ್ಯಕ್ರಮ ಕೈಕೊಳ್ಳಬೇಕು. ಏಕೆಂದರೆ ಬಡವರಿಂದ ಅದನ್ನು ತೆಗೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ. ಪೋಲೀಸ್‌ನವರೂ ಕೂಡ ಇದಕ್ಕೆ ಸಹಾಯಮಾಡುವುದು ಉಂಟು. ಒಂದು ಕೇಸು ಹಿಡಿದ ಪಕ್ಷದಲ್ಲಿ ಅದಕ್ಕೆ ಬೇಕಾದ ಸಾಕ್ಷಿ ಸಿಗುವುದಿಲ್ಲ. ಕೇಸು ಹಾಕಿದಾಗ ಸಂಬಂಧಪಟ್ಟ ಪಾರ್ಟಿ ಕಡೆ ವಕೀಲರು ಏನುಮಾಡುತ್ತಾರೆ! ಈ ಕೇಸ್‌ನಲ್ಲಿ ನಾನು ವಕೀಲನಾಗಿದ್ದೇನೆ. ಈ

(ಶ್ರೀ ಬಿ. ಆರ್. ಕರ್ಕೆರ)

ವಿಷಯದಲ್ಲಿ ಹೆಚ್ಚು ತಕರಾರುಮಾಡುವುದು ಬೇಡ ಅಂತ ಹೇಳಿ ಅವರಿಗೆ ಏನಾದರೂ ಒಂದಷ್ಟು ಹಣ ಕೊಟ್ಟು ಐದು-ಹತ್ತು ರೂಪಾಯಿ ಮ್ಯಾಜಿಸ್ಟ್ರೇಟರಿಂದ ಫೈನ್ ಹಾಕಿಸುತ್ತಾರೆ. ಈ ರೀತಿ ಪೋಲೀಸ್ ಕೇಸ್ ಆದರೆ, ಇನ್ನು ಡಾಕ್ಟರ್ ಹತ್ತಿರ ಕುಡಿದವ ನನ್ನು ಕರೆದುಕೊಂಡುಹೋದ ಪಕ್ಷದಲ್ಲಿ ಅವನು ಔಷಧಿ ಕುಡಿದಿದ್ದಾನೆ ಎಂದು ಹೇಳುತ್ತಾರೆ. ಆಗ ಪೋಲೀಸ್‌ನವರು ಏನೂ ಮಾಡುವುದಕ್ಕೂ ಆಗುವುದಿಲ್ಲ. ಆದ್ದರಿಂದ ನನ್ನ ಒಂದು ಸಲಹೆ ಏನೆಂದರೆ ಒಂದು ಪ್ರತ್ಯೇಕ ಇಲಾಖೆ ಮಾಡುವುದು ಅಗತ್ಯ. ಆ ರೀತಿ ಮಾಡಬೇಕೆಂದು ಹೇಳಿ ಮುಗಿಸುತ್ತೇನೆ.

(Many members rose. Sri Subbiah Naik was called upon to speak. Some members persisted in requesting the Chair to give them a chance.)

ಅಧ್ಯಕ್ಷರು.—ನಾನು ನಿಮಗೆ ಈ ಮನೆಯ ಗೌರವವನ್ನು ಕಾಯಬೇಕೆಂದು ಅತ್ಯಂತ ವಿನಯದಿಂದ ಬೇಡಿಕೊಳ್ಳುತ್ತೇನೆ. ತಾವೇ ಸ್ವಲ್ಪ ವಿಚಾರಮಾಡಿ, ಈ ರೀತಿ ಮಾಡಿದರೆ ಗೌರವ ಉಳಿಯುತ್ತದೆಯೇ ಇಲ್ಲವೇ ಎಂದು. ಎಲ್ಲರಿಗೂ ಅವಕಾಶ ಸಿಕ್ಕುವುದು ಶಕ್ಯವಿಲ್ಲ. ಶಕ್ಯವಿದ್ದರೆ ಅವಕಾಶ ಕೊಡುತ್ತೇನೆ. ಕೊಡಬಾರದು ಎಂದು ಇಲ್ಲ. ಪ್ರತಿಯೊಬ್ಬ ನದಸ್ಯರೂ ಈ ಡಿಮ್ಯಾಂಡಿನ ಮೇಲೆ ಮಾತನಾಡಬೇಕೆಂದರೆ ಇವೊತ್ತು ಕಾಲಾವಕಾಶವಿಲ್ಲ. ಈಗ ನುಬ್ಬಯ್ಯ ನಾಯಕ್ ಅವರ, ವೆಂಕಟೇಗೌಡರು ಮತ್ತು ಟಿ. ಹನುಮಯ್ಯನವರನ್ನು ಕರೆಯುತ್ತೇನೆ. ಅವರು ಐದು ನಿಮಿಷದಲ್ಲಿ ಮಾತನಾಡಿ ಮುಗಿಸಬೇಕು.

I would like to know from the Government how much time they require to reply. How many Honourable Ministers are going to take part?

Sri R. CHENNIGARAMAIAH.—I will require about half an hour.

ಶ್ರೀ ಟಿ. ಮರಿಯಪ್ಪ.—ನನಗೆ ಸಂಬಂಧಪಟ್ಟಂತೆ ಯಾರೂ ಮಾತನಾಡಿಲ್ಲದೇ ಇರುವುದರಿಂದ ನಾನು ಮಾತನಾಡಬೇಕಾದ ಅವಶ್ಯಕತೆಇಲ್ಲ.

Sri MOHAMED ALI (Minister for Excise and Rural Industries).—I require about 15 minutes.

Mr. SPEAKER.—That comes to 45 minutes.

Sri A. MUNIAPPA (Chickballapur).—On a point of order, ಸ್ವಾಮಿ, ತಾವು ಬಹಳ ನಮ್ರತೆಯಿಂದ ಈ ಸಭೆಯ ಘನತೆ ಗೌರವ ಕಾಪಾಡಬೇಕೆಂದು ಹೇಳುತ್ತೀರಿ. ನಮ್ಮ ಕಷ್ಟವನ್ನು ಯಾರಿಗೆ ಹೇಳಬೇಕು ಸ್ವಾಮಿ? ತಮಗೆ ಹೇಳಬೇಕು. ಈ ಹೆನರುಗಳನ್ನು ಡಿಕ್ಲೇರ್ ಮಾಡಿದರಲ್ಲಾ ಅದನ್ನು ಯಾವ ಆಧಾರದಮೇಲೆ ಮಾಡಿದಿರಿ ಸ್ವಾಮಿ?

ಅಧ್ಯಕ್ಷರು.—ಅದು point of order ಆಗುವುದಿಲ್ಲ. ನಮ್ಮನ್ನೆ point of order ಎಂದು ಏಕೆ ಹೇಳುತ್ತೀರಿ? ಇವತ್ತಿನ ದಿವಸ ಷೆಡ್ಯೂಲ್ಡ್ ಕ್ಯಾಸ್ಟ್‌ಗಳಾದ ಮೆಂಬರ್ಸ್ ಎಷ್ಟು ಜನ ಭಾಗವಹಿಸಿದ್ದಾರೆ ಎಂದರೆ ಶ್ರೀಗಳಾದ (1) ಮುನಿಸ್ವಾಮಿ, (2) ಆರ್ಮುಗಂ, (3) ದುಗ್ಗಪ್ಪ (4) ದಾನಪ್ಪ, (5) ಮುನಿರಾಜು, (6) ಕರ್‌ಕೆರಾ, ಅವರು ಬ್ಯಾಕ್‌ವರ್ಡ್ ಕ್ಲಾಸ್‌ನವರು. ಒಟ್ಟು 12 ಜನ ಮಾತನಾಡಿರುವುದರಲ್ಲಿ ನಿಮ್ಮವರೇ ಎಷ್ಟು ಜನ ಮಾತನಾಡಿದ್ದಾರೆ ನೋಡಿ.

ಶ್ರೀ ಎಂ. ಹನುಮಂತಯ್ಯ (ನೆಲಮಂಗಲ).—ಮುನಿರಾಜುಅವರು ಷೆಡ್ಯೂಲ್ಡ್ ಕ್ಯಾಸ್ಟ್‌ನವರೇ?

ಅಧ್ಯಕ್ಷರು.—ಈಗ ಷೆಡ್ಯೂಲ್ಡ್ ಕ್ಯಾಸ್ಟ್‌ನವರು, ಬ್ಯಾಕ್‌ವರ್ಡ್ ಕ್ಲಾಸ್‌ನವರು ಎಂದು ವ್ಯತ್ಯಾಸ ಮಾಡುವುದು ಬೇಡ.

ಶ್ರೀ ಎ. ಮುನಿಯಪ್ಪ.—ಅವರೆಲ್ಲರೂ ಬೇರೆ ಡಿಮ್ಯಾಂಡ್ ಮೇಲೆ ಮಾತನಾಡಿದ್ದಾರೆ?

ಅಧ್ಯಕ್ಷರು.—ಮಾತನಾಡಿರಬಹುದು. ಈಗ ನನಗೆ ಗೊತ್ತಿಲ್ಲ.

Sri J. P. SARWESH.—You were pleased to say that so many Congress Scheduled Caste members have spoken and so many Opposition Scheduled Caste members have spoken. That is very bad.

Mr. SPEAKER.—You must state that you withdraw those words 'very bad'. This is not the way of talking in the House. This is the way how you detract from the dignity and decorum of the House. I request the Hon'ble Members to be rather restrained in their talk. Merely because a certain member does not get a chance, if he were to remark like that, it will be a bable of sounds and not an Assembly and not a dignified House.

Sri J. P. SARWESH.—I wanted to submit that last year also I noticed this.

Mr. SPEAKER.—That I understand. One is called the Congress Scheduled Caste and the other called the Opposition Scheduled Caste. But I know many more things which are taking place behind the scene. So far as this Demand is concerned, so far as the interests of Scheduled Castes are concerned, this party or that party does not count at all. I am happy to find that so far as the demand of the Scheduled Castes is concerned, all sections oft heHouse are one. That is really a good thing. To make a distinction between this caste and that caste is not fair. So far as the interests of the Scheduled Castes are concerned, I always find that members of the Scheduled Castes are all united and happily united in improving the welfare and improving the conditions of the Scheduled Castes. Why unnecessarily make a distinction between

Opposition Scheduled Caste and Congress Scheduled Caste ?

Sri J. P. SARWESH.—My submission is that you have given chance to so many Congress Scheduled Caste members but you include the Opposition and Congress Scheduled Caste Members and say that you have given so many chances.

Mr. SPEAKER.—I said so many Scheduled Caste members had taken part ; I am willing to give everybody a chance. But how is it possible ?

Sri KUNDUR RUDRAPPA.—On a point of order.

ಅಧ್ಯಕ್ಷರು.—ಏನು ನಿಮ್ಮ ಆ ಪಾಯಿಂಟ್ ಆಫ್ ಆರ್ಡರ್ ?

ಶ್ರೀ ಕುಂದೂರು ರುದ್ರಪ್ಪ.—ಸ್ವಾಮಿ, ತಾವು ಈ ದಿವಸ, ನಿನ್ನೆಮೊನ್ನೆ ಹೀಗೆ ಮೂರು ದಿವಸಗಳಿಂದಲೂ ಏಕಾಏಕಿ ಸಭೆಯಲ್ಲಿ ಇಷ್ಟೇ ಜನರು ಮಾತನಾಡತಕ್ಕ ವರು ಎಂದು announce ಮಾಡಿಬಿಡುತ್ತೀರಿ. ಹೀಗಾಗಿ ನಮಗೆ ನಮ್ಮ ಕಷ್ಟಸುಖಗಳನ್ನು ಹೇಳಿ ಕೊಳ್ಳಲು ಅವಕಾಶವೇ ಸಿಕ್ಕುತ್ತಿಲ್ಲ. ತಾವು ಈರೀತಿ ನಡೆಸಲು ರೂಲ್ಸಿನಲ್ಲಿ ಎಲ್ಲಿ ಹೇಳಿದೆ ?

ಅಧ್ಯಕ್ಷರು.—ಈಗ ತಾವು ಹೇಳಿದ್ದರಲ್ಲಿ ಪಾಯಿಂಟ್ ಆಫ್ ಆರ್ಡರ್ ವಿಚಾರ ಎಲ್ಲರುತ್ತದೆ ? ಈ ದಿವಸದ ಚರ್ಚೆಯಲ್ಲಿ ಸಾಧ್ಯವಾದಮಟ್ಟಿಗೂ ಹರಿಜನರ ಪರ ವಾಗಿ ಮಾತನಾಡತಕ್ಕ ಸದಸ್ಯರುಗಳಿಗೆ ಒಂದು ಹೆಚ್ಚಿನ ಅವಕಾಶಕೊಡೋಣವೆಂಬ ಸದುದ್ದೇಶದಿಂದ ಶ್ರೀಮಾರ್ಡುಗ್ಗಪ್ಪ, ಶ್ರೀ ವೆಂಕಟೇಗೌಡ, ಶ್ರೀ ಟಿ. ಹನುಮಯ್ಯ, ಶ್ರೀ ಸುಬ್ಬಯ್ಯನಾಯಕ್ ಇತ್ಯಾದಿಯವರಿಗೆ ಅವಕಾಶ ಕೊಡೋಣವೆಂದು ಹೀಗೆ ಮಾಡಿದೆ. ಹೀಗೆ ಮಾಡಿರ ತಕ್ಕದ್ದರ ಅರ್ಥ ಯಾವ ರೂಲ್ಸು ಪ್ರಕಾರ ಎಂದು ತಾವು ಕೇಳಿದ್ದಕ್ಕೆ ಇದು ರೂಲ್ಸಿನಲ್ಲಿರತಕ್ಕಂಥ ವಿಚಾರ ಅಲ್ಲ. ಇದು ಅಧ್ಯಕ್ಷರ ಡಿಸ್ಕ್ರಿಷನ್ನಿನ್ಮೊಳಗಿರತಕ್ಕಂಥ ವಿಚಾರ. ತಾವಾದರೋ ಈ ಸಭೆಗೆ ಇನ್ನೂ ಹೊಸ ಬರು. ನಾನಾದರೋ ಈಗಾಗಲೇ ಹನ್ನೊಂದು ವರ್ಷಗಳಿಂದ ಇಂಥ ಸಭೆಗಳಲ್ಲಿ ಕೆಲಸಮಾಡುತ್ತಿದ್ದೇನೆ.

ಶ್ರೀ ಕುಂದೂರು ರುದ್ರಪ್ಪ.—ತಾವು ನನಗೆ ಮೂರು ದಿವಸಗಳಿಂದಲೂ ಮಾತನಾಡುವುದಕ್ಕೆ ಅವಕಾಶ ಕೊಡುತ್ತಿಲ್ಲವಲ್ಲ ?

ಅಧ್ಯಕ್ಷರು.—ತಾವು ಈ ಪ್ರಕಾರ ವಾದಮಾಡುವು ದಾದರೆ ನಾನು ಯಾರೊಬ್ಬರಿಗೂ ಮಾತನಾಡಲು ಅವಕಾಶಕೊಡುವುದಕ್ಕೆ ಬಹಳ ತೊಂದರೆಯಾಗುತ್ತದೆ. If things were to go on like this I will have to adjourn the House.

ಶ್ರೀ ಎ. ಮುನಿಯಪ್ಪ.—ತಾವು ಮಾತನಾಡತಕ್ಕ ವರಿಗಾದರೂ ಅವಕಾಶಕೊಡಿ ಸ್ವಾಮಿ.

ಅಧ್ಯಕ್ಷರು.—29 ಮಂದಿ ಹರಿಜನ ಸದಸ್ಯರಿರತಕ್ಕ ಕಡೆ ಹೀಗೆ ಪ್ರತಿಯೊಬ್ಬರಿಗೂ ಅವಕಾಶ ಕೊಡುತ್ತಾ ಹೋದರೆ ಕಾಲವೆಲ್ಲದೆ ? ಹೇಗೆ ಸಾಧ್ಯ ಅದು ?

ಶ್ರೀ ಎ. ಮುನಿಯಪ್ಪ.—ಸ್ವಾಮಿ, ಈಗ ತಾವು ಅತ್ತಕಡೆ ಪಾರ್ಟಿಯಲ್ಲಿ ಇಷ್ಟು ಜನ ಇತ್ತಕಡೆ ಪಾರ್ಟಿ ಯಲ್ಲಿ ಇಷ್ಟು ಜನ ಎಂದು ಹೇಳಿ ಹೆಸರನ್ನು ಗುರುತು ಹಾಕಿಕೊಳ್ಳುತ್ತಾ ಹೋದರೆ ಅದರಲ್ಲಿ ನಮ್ಮ ಹೆಸರು ಅತ್ತಕಡೆ ಪಾರ್ಟಿಯಲ್ಲೂ ಇಲ್ಲ, ಇತ್ತಕಡೆ ಪಾರ್ಟಿ ಯಲೂ ಇಲ್ಲ. ಹಾಗಾದಮೇಲೆ ನಾವೇಕೆ ಇಲ್ಲಿ ಇನ್ನು ಕುಳಿತಿರಬೇಕು ? ಇದಕ್ಕೆ ಬದಲಾಗಿ ಹೊರಗಡೆ ಎಲ್ಲಿ ಯಾದರೂ ಹೋಗಿ ಕುಳಿತುಕೊಳ್ಳಬಹುದಲ್ಲ ?

ಅಧ್ಯಕ್ಷರು.—ಇರತಕ್ಕ ಕಾಲ ಪರಿಮಿತಿಯಲ್ಲಿ ಪ್ರತಿ ಯೊಬ್ಬ ಸದಸ್ಯರಿಗೂ ಮಾತನಾಡಲು ಅವಕಾಶ ಕೊಡಲು ಖಂಡಿತ ಸಾಧ್ಯವಿಲ್ಲ. ಆರೀತಿ ಮಾಡಲು ಅವಕಾಶವೇ ಇರುವುದಿಲ್ಲ. ಅದಕ್ಕಾಗಿಯೇ ಈಗ ಮಾತನಾಡತಕ್ಕ 12 ಜನರಲ್ಲಿ 5 ಜನ ಹರಿಜನ ಸದಸ್ಯ ರಿಗೂ ಇಬ್ಬರು ಹಿಂದುಳಿದ ಪಂಗಡದವರಿಗೂ ಅವ ಕಾಶ ಮಾಡಿಕೊಡಲಾಗಿದೆ. ನಾನು ಬಾಕಿ ಇನ್ನು ಯಾರೊಬ್ಬರಿಗೂ ಅವಕಾಶಕೊಡುವುದಕ್ಕೆ ಸಾಧ್ಯವೇ ಇಲ್ಲ. ಈ ವಿಚಾರದಲ್ಲಿ ನೀವು ಬೇಕಾಗಿದ್ದರೆ ಸರ್ಕಾರ ದವರನ್ನು ಕೇಳಿಕೊಳ್ಳಿ. ಹೆಚ್ಚು ದಿನ ಸಭೆ ನಡೆಸಿದರೆ ಆಗಬಹುದು.

ಶ್ರೀ ಎ. ಮುನಿಯಪ್ಪ.—ತಾವು ಈ ಸಭೆಗೆ ಅಧ್ಯಕ್ಷರು. ಆದ್ದರಿಂದ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇವೆ.

ಅಧ್ಯಕ್ಷರು.—ನನಗಾದರೋ ಇದು ಅನಾಧ್ಯ. ಹೀಗೆಲ್ಲ ನೀವು ಮಾಡುತ್ತಾ ಹೋದರೆ ಈ ಸಭೆಯನ್ನು ಒಂದು ಗಾಂಭೀರ್ಯರೀತಿಯಲ್ಲಿ ನಡೆಸಲು ಬಹಳ ಕಷ್ಟ. ಈ ಪ್ರಕಾರ ನೀವು ವಾದಮಾಡುತ್ತಹೋದರೆ 29 ಜನ ಷೆಡ್ಯೂಲ್ಡ್ ಕ್ಯಾಸ್ಟ್ ಮೆಂಬರುಗಳಿಗೂ ನಾನೀಗ ಅವಕಾಶಕೊಡಬೇಕಾಗುತ್ತದೆ. ಇದು ಸಾಧ್ಯವಿಲ್ಲ.

ಶ್ರೀ ಎ. ಮುನಿಯಪ್ಪ.—ನಾನು ಇಲ್ಲಿಯವರೆಗೂ ಯಾವ ಡಿಮ್ಯಾಂಡಿನಮೇಲೂ ಮಾತನಾಡಿಲ್ಲ. ಈ ದಿನವೂ ನನಗೆ ಒಂದು ಅವಕಾಶ ಸಿಕ ಬಾರದೇ ?

ಅಧ್ಯಕ್ಷರು.—ಆ ವಿಚಾರದಲ್ಲಿ ನೀವು ನಿಮ್ಮ ಪಾರ್ಟಿ ಯನ್ನು ಕೇಳಿಕೊಳ್ಳಿ. ಆದರೆ ನೀವೀಗ ನಡೆಯು ತ್ತಿರುವ ರೀತಿ ಸರಿಯಲ್ಲ. ನೀವು ಇಂಥ ಸ್ವಲ್ಪ ವಿಚಾರಕ್ಕಾಗಿ ಇಷ್ಟೊಂದು ಗಡಿಬಿಡಿ ಮಾಡುವುದು ಸರಿಯಾದದ್ದಲ್ಲ. Please take your seat. ಈ House ನಲ್ಲಿ ಇದೇನು ಗದ್ದಲ ? ಈ ಸಭೆ ಹೀಗೆ ನಡೆದರೆ ಇನ್ನು 10 ವರ್ಷಗಳಾದರೂ ಇದಕ್ಕೆ ಒಂದು ಡಿಗ್ನಿಟಿ-ಡೆಕೋರಂ ಬರಲು ಬಹಳ ಕಷ್ಟವಿದೆ.

ಶ್ರೀ ಎಸ್. ಸುಬ್ಬಯ್ಯನಾಯಕ್ (ಪುತ್ತೂರು).—ಅಧ್ಯಕ್ಷರೇ, ಸಭೆಯ ಈ ದಿವಸ ಮುಂದಿರ ತಕ್ಕ 24ನೇ ಡಿಮ್ಯಾಂಡಿನಲ್ಲಿ (ಬಿ) ಮತ್ತು (ಸಿ) ಎಂಬ ಭಾಗದಲ್ಲಿ (ಸಿ) ಭಾಗಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಜನಾಂಗಕ್ಕಿರುವ ಕುಂದುಕೊರತೆಗಳ ಬಗ್ಗೆ ನಾನೀಗ ಒಂದೆರಡು ಸಲಹೆಗಳನ್ನು ಸರ್ಕಾರ ದವರಿಗೆ ಕೊಡಬೇಕೆಂದು ಆಶಿಸುತ್ತೇನೆ. ಈ ಇಡೀ ಸಭೆಯಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್‌ಗಳ ಪರವಾಗಿ ಮೆಂಬ ರಾಗಿ ಬಂದಿರತಕ್ಕವನು ನಾನು ಹುಬ್ಬನೇ ಒಬ್ಬ. ಇತರ ಸದಸ್ಯರುಗಳಾದರೋ ಅವರು ಬಾರಿಬಾರಿಗೂ ಮಾತನಾಡಲು ಅವಕಾಶ ಸಿಕ್ಕುತ್ತದೆ. ಆದರೆ ಇತರೆ ಕೆಲವು ಮಾನ್ಯ ಸದಸ್ಯರು ಮಾತನಾಡುವಾಗ ಎಲ್ಲೋ ಒಂದೆರಡು ಸಾರಿ ಮಾತ್ರ ಈ ನಮ್ಮ ಷೆಡ್ಯೂಲ್ಡ್ ಟ್ರೈಬ್ಸ್‌ಗಳ ವಿಚಾರದಲ್ಲಿ ಮಾತನಾಡಿರಬಹುದೆಂಬ ಜ್ಞಾಪಕ ವಿದ್ದಹಾಗೆ ಕಾಣುತ್ತದೆ. ಈಗ ನನಗೆ ತಿಳಿದ ಮಟ್ಟಿಗೆ ಈ ಷೆಡ್ಯೂಲ್ಡ್ ಟ್ರೈಬ್ಸ್‌ಗಳ ವಿಚಾರ ದಲ್ಲಿ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ.

ಈಗ ರಾಜ್ಯದಲ್ಲಿ ತಾವು ಯಾರು ಯಾರನ್ನು ಷೆಡ್ಯೂಲ್ ಟ್ರೈಬ್ಸ್‌ಗಳೆಂದು ಲೆಕ್ಕಹಾಕಿಕೊಂಡಿದ್ದೀರೋ ಅವರೇ ನಮ್ಮ ಇಂದಿನ ನಾಡಿಗೆಲ್ಲ ಕಾರಣಭೂತರೆಂದು ಹೇಳಿದರೆ ಬಹುಶಃ ಈ ವಿಚಾರ ಇಲ್ಲಿರತಕ್ಕ ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಬಹಳ ಆಶ್ಚರ್ಯವಾಗಿ ಕಾಣಬಹುದು. ಆದಾಗ್ಯೂ ಇವರೇ ನಿಜವಾಗಿಯೂ ಕಾಡನ್ನುನಾಡ

(ಶ್ರೀ ಎಸ್. ಸುಬ್ಬಯ್ಯನಾಯಕ್)

ನ್ಯಾಯಿ ಮಾಡಿದವರು ಎಂಬುದನ್ನು ತಾವೆಲ್ಲರೂ ಅರಿತು ಕೊಳ್ಳಬೇಕಾಗಿದೆ. ಕೊಡಗು-ಸೌತ್‌ಕೆನರಾ ಈ ಪ್ರದೇಶಗಳೆಲ್ಲ ಕಾಡಾಗಿದ್ದು ಇತ್ತೀಚೆಗೆ ನಾಡಾಗಿರ ತಕ್ಕವುಗಳೆಂಬ ಅಂಶ ತಮಗೂ ಗೊತ್ತಿರಬೇಕು. ಹಾಗೆ ಕಾಡನ್ನು-ನಾಡಾಗಿಮಾಡಿರತಕ್ಕಂಥ ಜನರು ಕಾಡಿನಲ್ಲೇ ವಾಸಮಾಡಿಕೊಂಡಿದ್ದು ಈ ದಿವಸ ಅವರೇನು ಒಂದು ಕೃಷಿಯಲ್ಲಿ ಜೀವನೋಪಾಯ ನಡೆಸುತ್ತಿದ್ದಾರೋ ಇಂದಿಗೂ ಅವರು ಅದೇರೀತಿ ಇದ್ದಾರೆಂದು ತಾವು ತಿಳಿಯಬಹುದು. ಈ ದಿವಸ ನಮ್ಮ ಭಾರತ ರಾಜ್ಯಾಂಗದಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್‌ಗಳ ಬಗ್ಗೆ ಕೆಲವು ರಿಯಾಯಿತಿಗಳನ್ನೇನೋ ಕೊಡಲಾಗಿದೆ. ಅದಕ್ಕನುಗುಣವಾಗಿ ಈ ದಿವಸ ಕಾಂಗ್ರೆಸ್ ಸರ್ಕಾರದವರು ನಮ್ಮ ಜನಾಂಗಗಳಿಗೆ ಅಲ್ಲಲ್ಲಿ ಒಂದೊಂದು ಪ್ರತಿನಿಧಿ ಸ್ಥಾನವನ್ನು ಇಂಥ ಸಭೆಗಳಿಗೆ ಬರಲು ಅವಕಾಶಮಾಡಿ ಕೊಟ್ಟಿದ್ದಾರೆ. ಆದರೆ ನಮಗೆ ಈ ವಿಚಾರಗಳಲ್ಲಿ ಯಾವ ಅಧಿಕಾರವೂ ಇಲ್ಲದಿರುವುದರಿಂದ ಜನಾಂಗಗಳ ಬಗ್ಗೆ ರಾಜ್ಯಾಂಗದಲ್ಲಿ ಏನು ಹೇಳಿದ್ದಾರೋ ಅವುಗಳೊಂದೂ ಸರಿಯಾಗಿ ನಡೆಯುತ್ತಿಲ್ಲ. ಅವರ ಜೀವನಮಟ್ಟ ಹಿಂದೆ ಯಾವರೀತಿ ಇತ್ತೋ ಈ ದಿವಸವೂ ಅಷ್ಟೇ ಮಟ್ಟದಲ್ಲಿದೆ. ದೇಶದಲ್ಲಿರತಕ್ಕ ಜನಗಳಿಗೆಲ್ಲರಿಗೂ ಬಹುಮುಖ್ಯವಾಗಿ ಬೇಕಾಗಿರತಕ್ಕಂಥ ಮೂರು ವಿಚಾರಗಳೆಂದರೆ—ಅಶನ, ವಸನ ಮತ್ತು ವಸತಿ. ಈ ಮೂರು ವಿಚಾರಗಳು ಸರ್ವರಿಗೂ ಒಂದೇ ಸಮಾನಾದ ಅನುಕೂಲತೆಗಳನ್ನೊದಗಿಸ ಬೇಕಾದ್ದು ಸರ್ಕಾರದವರ ಕರ್ತವ್ಯ. ಆದರೆ ಷೆಡ್ಯೂಲ್ ಟ್ರೈಬ್ಸ್‌ಗೆ ಸರ್ಕಾರ ಈ ದಿವಸ ನೀಡುತ್ತಿರುವ ಉತ್ತೇಜನದಿಂದ ಏನೂ ಸಾರ್ಥಕವಾಗಿಲ್ಲ. ರಾಜ್ಯಾಂಗದಲ್ಲಿ ಹೇಳಿರತಕ್ಕ ಅಂಶಗಳಲ್ಲಿ ಒಂದು ವಿಚಾರದಲ್ಲಾದರೂ ದೇಶಕ್ಕೆ ಸ್ವಾತಂತ್ರ್ಯ ಬಂದ ಈ ಹತ್ತು ವರ್ಷಗಳ ಅವಧಿಯಲ್ಲಿ ಗುರಿಮುಟ್ಟಲಿಲ್ಲ. ಅಷ್ಟೇಅಲ್ಲ ಅದರ ಗಂಧವೂ ಸಹ ಅವರಿಗೆ ಸೋಕಲಿಲ್ಲ. ದೇಶದಲ್ಲಿರತಕ್ಕ ಸಾಮಾನ್ಯ ಜನರು ರಾಗಿ ಇತ್ಯಾದಿ ದವಸಧಾನ್ಯಗಳನ್ನು ತಿಂದು ಜೀವಿಸುತ್ತಿದ್ದರೆ ಈ ಜನರು ಗುಡ್ಡಗಾಡುಗಳಲ್ಲಿ ಗೆಣಸುಗಳನ್ನು ತಿಂದು ಜೀವಿಸುತ್ತಿದ್ದಾರೆ. ಪ್ರಪಂಚದಲ್ಲಿ ಈ ದಿವಸ ಕೂಡ ದಿನಕ್ಕೆ ಒಂದು ಹೊತ್ತು ಮಾತ್ರ ಊಟಮಾಡತಕ್ಕ ಜನ ಯಾರೆಂದರೆ ಅವರು ಈ ಗುಡ್ಡಗಾಡುಗಳಲ್ಲಿರತಕ್ಕ ರೆಂಬುದನ್ನು ತಾವು ಮರೆಯಬಾರದು. ಈ ಜನರ ಒಂದೇ ಒಂದು ವ್ಯವಹಾರವೆಂದರೆ—ಅದು ಬೇಟೆ. ಅದೊಂದು ಏನಾ ಇನ್ನು ಅವರು ವ್ಯಾಪಾರ, ವ್ಯವಸಾಯ, ವಿದ್ಯೆ ನೌಕರಿ ಇತ್ಯಾದಿ ಯಾವ ಒಂದು ಬಾಬಿನಲ್ಲೂ ಮುಂದುವರಿಯಲು ಅವಕಾಶವಾಗಿರುವುದಿಲ್ಲ. ಮೊನ್ನೆ ಇದೇ ಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಈ ಷೆಡ್ಯೂಲ್ ಟ್ರೈಬ್ಸ್‌ಗಳ ವಿಚಾರ ಬಂದಿದ್ದಾಗ್ಗೆ ಈ ಜನ ಸಂಖ್ಯೆ ಎಷ್ಟಿದೆ ಎಂದು ಪ್ರಶ್ನೆ ಕೇಳಿದ್ದಾಗ ಸರ್ಕಾರದದವರು 29,312 ಜನ ಎಂತ ಉತ್ತರ ಹೇಳಿದ್ದಾರೆ. ಆದರೆ 1941ನೆಯ ಖಾನೇಷ್‌ಮಾರಿ ಲೆಖ್ಖದ ಪ್ರಕಾರ ಈ ಷೆಡ್ಯೂಲ್ಡ್ ಟ್ರೈಬ್ಸ್‌ಗಳ ಜನ ಸಂಖ್ಯೆ 46 ಸಾವಿರ ಎಂದು ತಿಳಿದುಬಂದಿದೆ. ಹೀಗಿರುವಾಗ ಸರ್ಕಾರದವರು ಈ ದಿವಸ ಅಷ್ಟು ಕಡಮೆ ಜನಸಂಖ್ಯೆ ಎಂದು ತಿಳಿಸಿದ್ದಕ್ಕೆ ಸಭೆಯಲ್ಲಿ ನೀವೇಕೆ ಸುಮ್ಮನಿದ್ದಿರಿ ಎಂದು ನನಗೆ ಅನೇಕ ಕಡೆಗಳಿಂದ ಪತ್ರಗಳು ಬಂದಿವೆ. ಆದರೆ ಇತ್ತೀಚೆಗೆ ನಮ್ಮ ಜಿಲ್ಲೆಯಿಂದ ಆ ಕಾನರ ಗೋಡು ಒಂದು ಮಾತ್ರ ನಮ್ಮ ಕೈಬಿಟ್ಟು ಹೋಗಿದೆ. ಈ ದಿವಸ ತಾವು ಷೆಡ್ಯೂಲ್ಡ್ ಟ್ರೈಬ್ಸ್‌ಗಳ ಬಗ್ಗೆ ಸೇರಿಸಿರತಕ್ಕ ಜಾತಿಗಳನ್ನೆಲ್ಲ ಲೆಖ್ಖಕ್ಕೆ ತೆಗೆದುಕೊಂಡರೆ ಈ ಜನರ ಸಂಖ್ಯೆ ಸುಮಾರು ಒಂದು ಲಕ್ಷದ ಹತ್ತತ್ತಿರಕ್ಕೆ ಇರಬಹುದು. ಹೀಗಿರುವಾಗ ಸರ್ಕಾರದವರು ಅಷ್ಟು ಕಡಿಮೆ ಜನ ಸಂಖ್ಯೆ ಏಕೆ ಹೇಳಿದರು ಎಂದು ಪ್ರಶ್ನಿಸಿದ್ದಾರೆ. ವಿದ್ಯಾವಂತರ ವಿಚಾರ ತೆಗೆದುಕೊಂಡರೆ ಈ ಜನಾಂಗದಲ್ಲಿ ಒಬ್ಬನೇ ಒಬ್ಬ ಪದವೀಧರನಿಲ್ಲ. ಒಬ್ಬ ಗೆಜೆಟೆಡ್ ದರ್ಜೆಯ ಅಧಿಕಾರಿಯಿಲ್ಲ. ಆದರೆ ಇತ್ತೀಚೆಗೆ ಪುತ್ತೂರು ತಾಲ್ಲೂಕಿನಲ್ಲಿ ಯಾರೋ ಕೆಲವರು ನೌಕರರು ಇರುವಹಾಗೆ ಕಾಣುತ್ತಿದೆ.

5-30 P.M.

ಇನ್ನೊಂದು ವಿಚಾರ ವಿದ್ಯಾಮಟ್ಟದಲ್ಲಿ ಇನ್ನೂ ಷೆಡ್ಯೂಲ್ಡ್ ಟ್ರೈಬ್ಸ್‌ನವರ ಸುಧಾರಣೆಯಾಗಿಲ್ಲ. ನಮ್ಮ ಈ ಹಿಂದುಳಿದ ಜನಾಂಗದಲ್ಲಿ ಒಬ್ಬ ಆಫೀಸರು ಸಹ ಇಲ್ಲ, ಬಹುಶಃ ಈಗ ಒಬ್ಬರೇ ಒಬ್ಬ ತಹಶೀಲು ದಾರರು ಪುತ್ತೂರು ತಾಲ್ಲೂಕಿನಲ್ಲಿ ಗೆಜೆಟೆಡ್ ಕೇಡರಿನಲ್ಲಿದ್ದಾರೆಂದು ತೋರುತ್ತದೆ. ಮತ್ತೆ ಯಾರೂ ಪದವೀಧರರಾದವರೂ ಇಲ್ಲ. ಗೆಜೆಟೆಡ್ಡು ಕೇಡರಿನಲ್ಲಿಯೂ ಇಲ್ಲ ಎಂದು ನಾನು ತಿಳಿಯುತ್ತೇನೆ. ಅಲ್ಲದೆ S.S.L.C. ಪಾಸು ಮಾಡಿರುವವರು ಶೇಕಡ ಅಲ್ಲ, ನಾವಿರಕ್ಕೆ ಐದು ಅಥವಾ ಹತ್ತು ಮಂದಿ ಸಿಕ್ಕುವುದೂ ಕಷ್ಟ. ಈ ವರ್ಷ ಒಬ್ಬರೇನೋ B.E. ಪರೀಕ್ಷೆಗೆ ಈ ಜನಾಂಗದಿಂದ ಕುಳಿತಿದ್ದಾರೆಂದು ತಿಳಿದು ಬಂದಿದೆ. ಇದೇರೀತಿಯಾಗಿ ಕೊಡಗಿನಲ್ಲಿಯೂ ಕೂಡ ಆಗಿದೆ, ಈ ಹಿಂದುಳಿದ ಗುಡ್ಡಗಾಡಿನ ಜನರಲ್ಲಿ ನೂರಕ್ಕೆ ನೂರು ಜನರೂ ವಿದ್ಯೆಯನ್ನು ಕಲಿತವರಿಲ್ಲ. ಎಲ್ಲೋ ಒಂದು, ಐದು ಅಥವಾ ಹತ್ತು ಜನ ಈ ಜನಾಂಗದಲ್ಲಿ ವಿದ್ಯಾವಂತರು ಸಿಕ್ಕಬಹುದು. ಇದಕ್ಕೊಸ್ಕರ ವಿದ್ಯಾಭ್ಯಾಸಕ್ಕಾಗಿ ಎಷ್ಟೋ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಇವರನ್ನು ಸರಿಯಾಗಿ ಅಭಿವೃದ್ಧಿಗೆ ತರಬೇಕಾದರೆ ಒಳ್ಳೆಯ ಪ್ರಚಾರ ಮತ್ತು ಪ್ರಕಟಣೆಗಳು ಆಗಬೇಕು. ಈ ರೀತಿ ಪ್ರಚಾರಗಳನ್ನು ಮಾಡದೆ ಇರುವುದರಿಂದ ಹಿಂದುಳಿದ ಜನಾಂಗಗಳವರಿಗೆ ಈಗಾಗಲೇ ಎಷ್ಟೋ ಅನಾನುಕೂಲಗಳಾಗಿವೆ. ಈ ವಿಷಯಗಳೆಲ್ಲವೂ ನಮ್ಮ ಮಾನ್ಯ ಆರ್ಥಿಕ ಮಂತ್ರಿಗಳಿಗೂ ತಿಳಿದಿದೆ. ಅಲ್ಲದೆ ನಮ್ಮ ಆರ್ಥಿಕ ಮಂತ್ರಿಗಳು ಈಗಿರುವ ನಮ್ಮ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಟ್ರೈಬ್ಸ್ ಪಂಗಡಗಳಿಗಾಗಿ ಸೆಂಟ್ರಲ್ ಗವರ್ನಮೆಂಟಿನಿಂದಲೂ ಸಾಕಷ್ಟು ಸಹಾಯವು ಒದಗುತ್ತದೆ ಎಂದು ತಿಳಿಸಿದರು, ಆದರೆ ಕಾರ್ಯತಃ ಏನೂ ಆಗಿಲ್ಲ. ಆದ್ದರಿಂದ ನಮ್ಮಕಡೆಯ ಜನರಿಗೆ ನಿರಾಶೆಯುಂಟಾಗಿ, ವಿದ್ಯೆಯಕಡೆಗೂ ಗಮನ ಕೊಡುವುದಕ್ಕೆ ಆಗುತ್ತಿಲ್ಲ. ಆದುದರಿಂದ ತಾವು ಕೇಂದ್ರ ಸರ್ಕಾರಕ್ಕೆ ಪುನಃ ಬರೆದು ತಕ್ಕಷ್ಟು ಸಹಾಯವನ್ನು ಈ ಹಿಂದುಳಿದ ಜನಾಂಗಕ್ಕೆ ದೊರಕಿಸಿ ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಈಗೇನೋ ಸಾಮಾನ್ಯವಾಗಿ ಹಳ್ಳಿಗಳಲ್ಲಿ 20-25 ಮಕ್ಕಳಿದ್ದರೆ ಉಪಾಧ್ಯಾಯರೊಬ್ಬರನ್ನು ಕೊಡಬೇಕೆಂದಿದ್ದಾರೆ. ಆದರೆ ಈ ಹಿಂದುಳಿದ ಜನಾಂಗಕ್ಕೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಈ ಜನಾಂಗದಲ್ಲಿ ಹದಿನೈದು ಮಕ್ಕಳಿದ್ದರೂ ಸರಿ ಅಲ್ಲಿಗೆ ಒಬ್ಬ ಉಪಾಧ್ಯಾಯರನ್ನು ಕೊಡುವುದು ಅಗತ್ಯ. ಹೀಗೆ ಬರುವ ಉಪಾಧ್ಯಾಯರಿಗೆ ಏನಾದರೂ ಸ್ಪೆಷಲ್ ಅಲೋಯನ್ಸನ್ನು ಕೊಟ್ಟು ಈ ಷೆಡ್ಯೂಲ್ಡ್ ಟ್ರೈಬ್ಸ್ ಜನಾಂಗಗಳಲ್ಲಿರುವ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಬೇಕು. ಇದರಿಂದ ವಿದ್ಯೆಯ ನಿಜವಾದ ಉದ್ದೇಶ ಸಾಧನೆಯಾಗುವದಕ್ಕೆ ಸಾಧ್ಯವಾಗುತ್ತದೆ.

ಇನ್ನು ಈ ಜನಾಂಗದ ವಿದ್ಯಾರ್ಥಿಗಳಿಗಾಗಿ stipend ನ್ನು ಕೊಡುತ್ತಿದ್ದಾರೆ, ಇದು ಕೊಡುವುದು ಬಹಳ ನಿಧಾನವಾಗುತ್ತಿದೆ. ಅದರಿಂದ ಈ ವಿದ್ಯಾರ್ಥಿಗಳಿಗೆ ಕೊಡುವ stipend ನ್ನು ಶಾಲೆ ಪ್ರಾರಂಭವಾಗಿ ಒಂದೆರಡು ವಾರದೊಳಗಾಗಿ ಸಿಗುವಂತೆ ಮಾಡಬೇಕು. ಬಹುಶಃ ಅಧಿಕಾರಿಗಳು ಇದಕ್ಕಾಗಿ ಲೆಕ್ಕಪತ್ರಗಳನ್ನು ಮಾಡುವಾಗ ಇದರಕಡೆ ಗಮನ ಕೊಡುವುದಿಲ್ಲ. ಇನ್ನುಮುಂದೆ ಚೆನ್ನಾಗಿ ಗಮನವಿರಿಸಿ ಹಣ lapse ಆಗದಂತೆ ನೋಡಿಕೊಳ್ಳಬೇಕು, ಅಲ್ಲದೆ ಇದರಬಗ್ಗೆ ಪ್ರಚಾರ ಮತ್ತು ಪ್ರಕಟಣೆ ಮಾಡಲಿಕ್ಕೆ ಮನಸ್ಸು ಕೊಡಬೇಕು. ಎಷ್ಟೋ ಕಡೆಗಳಲ್ಲಿ ಇದರ ವಿಷಯ ನಮ್ಮ ಜನರಿರುವ ಕಡೆಯಲ್ಲಿ ತಿಳಿದಿಲ್ಲ. ಇಂತಹ ಕಡೆಗಳಲ್ಲಿ ಈ ರೀತಿಯಾದ ಪ್ರಚಾರ ಮಾಡಬೇಕೆಂದು ನಾನು ಹೇಳುತ್ತೇನೆ. ಇನ್ನು ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ.

ಈಗ ಐವತ್ತುಸಾವಿರ ರೂಪಾಯಿಗಳನ್ನು ಈ ಗುಡ್ಡಗಾಡಿನ ಜನರಿಗಾಗಿ ಎಂದು ಒದಗಿಸಿದೆ. ಈ ಜನಾಂಗದ ಜನಗಳಿಗೆ ಸಾಕಷ್ಟು ವಾಹನ ಸೌಕರ್ಯಗಳಿಲ್ಲ. ಮತ್ತು ಓಡಾಡಲು ಸರಿಯಾದ ರಸ್ತೆಗಳಿಲ್ಲ. ಇದರಿಂದಾಗಿ ಈ ಜನಗಳಿಗೆ ರೋಗ ಬಂದರೆ ಔಷಧಿ ಬೇಕಾದರೆ ಅವರಿಗೇನೂ ಸರಿಯಾಗಿ ಒದಗುತ್ತಿಲ್ಲ, ಈಗ ಇವರಿಗೆ ಏನಾದರೂ ಜ್ವರ ಬಂದರೆ, ಇವರು ಯಾವ ಔಷಧಿಗಳನ್ನೂ ತರಲು ಹೋಗುವುದಿಲ್ಲ. ಇಲ್ಲಿಯ ಜನಗಳು ಯಾವಾಗಲೂ ಮಂತ್ರ, ತಂತ್ರ, ಭಸ್ಮ, ತೆಂಗಿನಕಾಯಿಯನ್ನು ಮಂತ್ರ ಮಾಡುವುದು, ಹರಕೆ ಹೊರುವುದು ಇತ್ಯಾದಿಗಳಲ್ಲಿಯೇ ಆಸಕ್ತರಾಗಿರುತ್ತಾರೆ. ಇಂತಹ ಕಡೆಗಳಲ್ಲಿ ಸಾಕಷ್ಟು ಆಸ್ಪತ್ರೆಯ ಸೌಕರ್ಯಗಳಿಲ್ಲ. ಇಲ್ಲಿಗೆ ಈಗ ಕೆಲವುಕಡೆ ಇರುವಂತೆ Mobile dispensary ಎಂದರೆ ಸಂಚಾರಿ ಆಸ್ಪತ್ರೆಗಳನ್ನು ನೇಮಿಸಿ ಈ ಜನಾಂಗಕ್ಕೆ ಅನುಕೂಲವಾಗುವಂತೆ ಮಾಡಬೇಕು.

ಇನ್ನು ಮನೆ ಕಟ್ಟಲಿಕ್ಕೆ ಹಣವನ್ನೇನೋ ಕೊಡುತ್ತಿದ್ದೀರಿ. ಆದರೆ ಈ ಹಣವು ನಿಜವಾಗಿಯೂ ಸರಿಯಾಗಿ ಉಪಯೋಗವಾಗದೆ ಹೋಗುತ್ತಿದೆ ಎಂದು ನಾನು ಹೇಳುತ್ತೇನೆ. ಇದರಲ್ಲಿ ಸ್ವಂತ ಸ್ಥಳ ಇದ್ದವರು ಇಲ್ಲವೇ ಇಲ್ಲ. ಆದುದರಿಂದ ಈ ಜನಗಳು ಮನೆ ಕಟ್ಟಲಿಕ್ಕೆ ಹೋದಾಗ ಇವರಿಗೆ ಬೇಕಾದ ಮರಗಳನ್ನು ಕಡಿಯಲಿಕ್ಕೆ ಅವಕಾಶವಿಲ್ಲದೆ ಹೋಗಿರುತ್ತದೆ. ಇದರಿಂದ ಇಲ್ಲಿಯ ಜನಗಳಿಗೆ ತೊಂದರೆಯಾಗಿದೆ. ಅದರಿಂದ ಈ ಮನೆಗಳಿಗೆ ಬೇಕಾದಷ್ಟು ಮರವನ್ನು ಕಡಿಯುವದಕ್ಕೆ permission ಕೊಡಬೇಕು. ಚಾಲಗೇಣಿ ಒಕ್ಕಲಿನವರೆಗೂ ಮನೆ ಕಟ್ಟಲು ಅವಕಾಶ ಕೊಡಬೇಕು. ಈ ರೀತಿಯಾದ ಸೌಲಭ್ಯಗಳನ್ನು ಈ ಹಿಂದುಳಿದ ಜನಾಂಗಕ್ಕೆ ಒದಗಿಸಿಕೊಡದೇ ಹೋದರೆ ಇವರು ಮುಂದಕ್ಕೆ ಬರಲು ಸಾಧ್ಯವಿಲ್ಲ. ಈಗ ಶೇಕಡಾ ಐದರಷ್ಟು ಕೂಡ ಸ್ವಂತ ಸ್ಥಳವಿರುವವರೂ ಇಲ್ಲ ಎಂದು ನಾನು ಕೇಳಿದ್ದೇನೆ. ಇಂತಹ ಜನಾಂಗವನ್ನು ಮುಂದಕ್ಕೆ ತರಬೇಕಾದುದು ಅಗತ್ಯ. ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನರ್ಪಿಸಿ ನನ್ನ ಈ ಭಾಷಣವನ್ನು ಮುಗಿಸುತ್ತೇನೆ.

* ಶ್ರೀ ಜಿ. ವೆಂಕಟೇಗೌಡ (ಪಾಳಯಂ).— ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದೆ ಇಟ್ಟಿರತಕ್ಕ ಬೇಡಿಕೆಗಳಲ್ಲಿ ಎಕ್ಸೈಜು ಬಾಬಿಗಾಗಿ ಇಟ್ಟಿರತಕ್ಕ ಬೇಡಿಕೆಗಳನ್ನು ನಾನು ವಿರೋಧಮಾಡಬೇಕಾಗಿದೆ. ಏಕೆಂದರೆ ನಮ್ಮ ಸಂಸ್ಥಾನದವರು ಪೂರ್ಣವಾಗಿ ಈ ಪಾನನಿರೋಧವನ್ನು ಯಶಸ್ವಿಯಾಗಿ ಜಾರಿಗೆ ತರಲಾಗಲಿಲ್ಲ. ಇಡೀ ರಾಜ್ಯದ ದೃಷ್ಟಿಯಿಂದ ಯಾವ ಒಂದು ಕಾರ್ಯಕ್ರಮವನ್ನೂ ಪೂರ್ಣವಾಗಿ ಜಾರಿಗೆ ತರದೆ, ಒಂದು ನಿರ್ದಿಷ್ಟವಾದ ನೀತಿಯನ್ನೂ ಸರಕಾರ ಅನುಸರಿಸದೆ ಇರುವುದರಿಂದ ಜನತೆಗೆ ಅನಾನುಕೂಲಗಳಾಗುತ್ತಲಿರುವುದರಿಂದ ಈ ಬಾಬುಗಾಗಿ ಕೇಳಿರುವ ಗ್ರಾಂಟನ್ನು, ಬೇಡಿಕೆಯನ್ನು ನಮ್ಮ ಮಾನ್ಯ ಮಂತ್ರಿಗಳು ಪಡೆಯಲಿಕ್ಕೆ ಅರ್ಹರಾಗಿಲ್ಲ ಎಂದು ನಾನು ಇಲ್ಲಿ ತಿಳಿಸ ಬಯಸುತ್ತೇನೆ. ಅಲ್ಲದೆ ಒಂದು ತಾಲ್ಲೂಕಿನಲ್ಲಿ ಪಾನನಿರೋಧ ಇರತಕ್ಕದ್ದು, ಮತ್ತೊಂದು ತಾಲ್ಲೂಕಿನಲ್ಲಿ ಇಲ್ಲದೇ ಇರತಕ್ಕದ್ದು ಹೀಗಾಗಿ ಜನಗಳಿಗೆ ಕುಡಿಯಲು ಅನುಕೂಲವಾಗುತ್ತಿದೆ. ಆದುದರಿಂದ ಈ ಪಾನನಿರೋಧವು ಯಶಸ್ವಿಯಾಗಬೇಕಾದರೆ Belt area ವನ್ನೂ ಮಾಡಿದ ಹೊರತು ಇದರಿಂದ ಜನಗಳಿಗೆ ಪ್ರಯೋಜನ ದೊರಕುವುದಿಲ್ಲ. ಎಲ್ಲಿ ಪಾನನಿರೋಧವಿಲ್ಲವೋ ಅಲ್ಲಿಗೆ ಹೋಗಿ ಜನ ಕುಡಿಯಲು ಈಗ ಅವಕಾಶವಾಗಿದೆ. ಹೀಗೆ ಮಾಡುವುದು ಸರಿಯಲ್ಲ. Belt area ವನ್ನು ಈ ಕೂಡಲೇ ನಿರ್ಮಾಣಮಾಡಿದರೆ ಸ್ವಲ್ಪ ಮಟ್ಟಿಗಾದರೂ ಈ ಪಾನನಿರೋಧ ಯಶಸ್ವಿಯಾಗಲು ಸಾಧ್ಯ ಎಂದು ನಾನು ಇಲ್ಲಿ ಹೇಳಲು ಇಚ್ಛೆಪಡುತ್ತೇನೆ.

ಇನ್ನು ರಿಜಿಸ್ಟ್ರೇಷನ್ ಬಾಬಿನಲ್ಲಿ ಆದಾಯವೇನೋ ಬರುತ್ತಿದೆ. ಆದರೂ ಈ ಮೈಸೂರು ಸಂಸ್ಥಾನದಲ್ಲಿ ಈ ಖಾತೆ ಸರಿಯಾಗಿ ಕೆಲಸಮಾಡುತ್ತಿಲ್ಲ. ಅಲ್ಲದೆ ಕೆಲಸಗಳೂ ಜಾಸ್ತಿಯಾಗಿರುವುದರಿಂದ ಜಾಸ್ತಿ ಕೆಲಸ ಮಾಡಲು ಹೇಗೆ ಸಾಧ್ಯ ಎಂದು ಹೇಳುತ್ತಾರೆ. ಮೈಸೂರು ರಾಜ್ಯದಲ್ಲಿ ರಿಜಿಸ್ಟ್ರೇಷನ್ ಖಾತೆಯಲ್ಲಿರತಕ್ಕ ಲಂಚ ರುಷವತ್ತುಗಳು ಮತ್ತೆ ಎಲ್ಲಿಯೂ ಇಲ್ಲ. ಇಂತಹ ಒಂದು ಖಾತೆಯನ್ನು ನೀಯಾಗಿ ದರ್ಪದಿಂದ ನಡೆಸುವ ಜನರು ಆದಳಿತದಲ್ಲೇ ಇಲ್ಲ ಎಂದು ತೋರುತ್ತದೆ ಅದರಿಂದ ಈ ಖಾತೆಯ ಆಡಳಿತ ಹೀಗಾಗಿದೆ ಎಂದು ಕಾಣುತ್ತದೆ. ಇದಕ್ಕೆ ಇರುವ Inspector General of Registration ರವರಿಗೆ ಈಚೆಗೆ ಮೈಸೂರಿನಲ್ಲಿ ಕೆಲಸ ಜಾಸ್ತಿಯಾಗಿದೆ ಎಂದು ತಿಳಿಸಲಾಗಿತ್ತು.

ಮೈಸೂರು ಸಿಟಿಯ ಸಬ್ ರಿಜಿಸ್ಟ್ರಾರ್‌ರವರ ಆಫೀಸಿಗೆ ಬೇಕಾದಷ್ಟು ಡಾಕ್ಯುಮೆಂಟುಗಳು ರಿಜಿಸ್ಟ್ರೇಷನ್ನಿಗೆ ಬರುತ್ತಿವೆ. ಆದರೆ ರಿಜಿಸ್ಟರಾದ ಪತ್ರಗಳು ವಾಪಸು ದೊರೆಯಬೇಕಾದರೆ ಎಂಟು-ಹತ್ತು ಹದಿನೈದು ದಿನಗಳಾಗುತ್ತವೆ. ಇದರಿಂದ ಇಲ್ಲಿಗೆ ಬರುವ ಹಳ್ಳಿಯ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ಸರ್ಕಾರ ಈ ರೀತಿ ಆಗುತ್ತಿರುವ ಕಡೆಗಳಲ್ಲಿ ಶಾಖೆಯ ಮುಖ್ಯಾಧಿಕಾರಿಗಳಾದ Inspector General of Registration ರವರು ಆಯಾ ದಿನಗಳಲ್ಲಿ ರಿಜಿಸ್ಟರಾದ ಪತ್ರಗಳನ್ನು ಒಂದೆರಡು ದಿನಗಳಲ್ಲೇ ವಾಪಸು ದೊರೆಯುವಂತೆ ಆರ್ಡರು ಮಾಡಬೇಕು. ಹೀಗೆ ಮಾಡಿ ಅಲ್ಲಿರತಕ್ಕ ಒತ್ತಡವನ್ನು ಕಡಮೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ಈ ರಿಜಿಸ್ಟ್ರೇಷನ್ನು ಖಾತೆಯಲ್ಲಿ ಕೆಲಸಮಾಡುವವರು ಸಾರ್ವಜನಿಕರ ಹಿತದೃಷ್ಟಿಯಿಂದ ಕಟ್ಟುನಿಟ್ಟಾಗಿ ಕೆಲಸ ಮಾಡುವಂತೆ ಸರ್ಕಾರ ಹೆಚ್ಚಿನ ಗಮನಕೊಡಬೇಕು. ಅಲ್ಲದೆ ನಿಯಮಾನುಸಾರ ಯಾವ ಆಫೀಸರನ್ನೇ ಆಗಲಿ ಎರಡು ವರ್ಷಕ್ಕೆ ಮೇಲ್ಪಟ್ಟು ಒಂದೇ ಸ್ಥಳದಲ್ಲಿ ಇರಬಾರದು ಮತ್ತು ಹೀಗೆ ವರ್ಗಾಯಿಸುವುದರಿಂದ ಈ ಖಾತೆಯ ಕೆಲಸ ಕಾರ್ಯಗಳು ಚೆನ್ನಾಗಿ ಆಗುತ್ತದೆ ಎಂದು ನನಗನ್ನಿಸುತ್ತದೆ. ಸಬ್ ರಿಜಿಸ್ಟ್ರಾರ್ ರವರ ಮೇಲ್ಮಟ್ಟದಲ್ಲಿರುವ Inspector General of Registration ಆಫೀಸಿನಲ್ಲಿರುವ ಅಧಿಕಾರಿ

(ಶ್ರೀ ಜಿ. ವೆಂಕಟೇಗೌಡ)

ಗಳಿಗೂ ಕೆಳಗಿನ ಅಧಿಕಾರಿಗಳಿಗೂ ಒಂದು ರೀತಿಯಾದ ಮಾಮೂಲನ್ನೂ ಕೊಡುತ್ತಾರೆ ಎಂದು ತಿಳಿದು ಬಂದಿದೆ. ಇದು ನಿಜವಾಗಿಯೂ ವಿಷಾದವಾದ ವಿಷಯ. ಇದನ್ನು ನಿರಪಡಿಸಬೇಕು. ಅದಕ್ಕಾಗಿ ಈ ಆಡಳಿತದ ಪುನರ್ ವ್ಯವಸ್ಥೆಮಾಡಿ ಜನತೆಗೆ ಹೆಚ್ಚಿನ ಅನುಕೂಲವಾಗುವಂತೆ ಮಾಡಬೇಕೆಂದು ತಮ್ಮ ಮೂಲಕ ನಾನು ಅರಿಕೆ ಮಾಡಿಕೊಳ್ಳುತ್ತೇನೆ.

ನಮ್ಮ ಹಿಂದುಳಿದ ಕೋಮಿನವರಿಗೆ ಸ್ವಲ್ಪ ಹಣವನ್ನೂ ಒದಗಿಸಿದ್ದಾರೆ. ಇದೇ ರೀತಿ ಹೈದರಾಬಾದಿನ ಭಾಗಗಳಲ್ಲಿ ಹಿಂದುಳಿದವರಿಗಾಗಿ ಮತ್ತು ಬೊಂಬಾಯಿ ಕರ್ನಾಟಕದ ಭಾಗಗಳಲ್ಲಿ ಹಿಂದುಳಿದ ಕೋಮಿನವರಿಗಾಗಿ ಸಹಾಯವನ್ನು ಕೊಡುತ್ತಿದ್ದಾರೆ. ಆದರೆ ಈ ಹೈದರಾಬಾದು ಮತ್ತು ಬೊಂಬಾಯಿ ಭಾಗಗಳಿಗೆ ಎಷ್ಟು ಹಣವನ್ನು ಸಹಾಯವಾಗಿ ಕೊಡುತ್ತಾರೋ ಅದಕ್ಕಿಂತ ಕಡಮೆ ಹಳೆಯ ಮೈಸೂರಿನ ಭಾಗಗಳಿಗೆ ಮತ್ತು ನಮ್ಮ ಮದರಾಸು ಕರ್ನಾಟಕದ ಭಾಗಗಳಿಗೆ ಹಿಂದುಳಿದವರಿಗಾಗಿ ಕೊಡುತ್ತಿದ್ದಾರೆ ಎಂದು ನನಗೆ ತಿಳಿದು ಬಂದಿದೆ. ಇಡೀ ಸಂಸ್ಥಾನದಲ್ಲೇ ಈ ಜನಾಂಗದವರು ಹಿಂದುಳಿದಿರುವುದರಿಂದ ಎಲ್ಲ ಕಡೆಯಲ್ಲಿಯೂ ಇವರ ಸ್ಥಿತಿ ಒಂದೇ ರೀತಿಯಾಗಿದೆ. ಆದ್ದರಿಂದ ಈಗ ಹೈದರಾಬಾದು ಮತ್ತು ಬೊಂಬಾಯಿ ಕರ್ನಾಟಕದ ಭಾಗಗಳಲ್ಲಿ ಹೇಗೆ ಇವರಿಗೆ ಹಣ ಸಹಾಯ ಮಾಡುತ್ತಿದ್ದಾರೋ ಅದೇ ರೀತಿ ಇತರ ಕಡೆಗಳಲ್ಲಿಯೂ ಮಾಡಲೇಬೇಕು. ಹಾಗೆ ಸ್ವಲ್ಪ ಹೆಚ್ಚಿನ ಹಣ ಬೇಕಾದರೆ Supplementary Grant ಗಳನ್ನು ಕೇಳಿ ತೆಗದುಕೊಳ್ಳಬಹುದು ಮತ್ತು ಹೀಗೆಮಾಡಿ ಇವರ ಸ್ಥಿತಿಯನ್ನು ಸುಧಾರಿಸಿ ಸಹಾಯ ಮಾಡಬೇಕು. ಈಗ ನಂಜನಗೂಡಿನಲ್ಲಿ ಇಂತಹ ಪರಿಸ್ಥಿತಿ ಇದೆ. ಅಲ್ಲಿ ಒಂದು ಕಡೆ ಉಪ್ಪಲಿಗರು, ಪರಿವಾರದವರು ಮುಂತಾದ ಹಿಂದುಳಿದ ಜನಾಂಗಗಳಿವೆ. ಇಂತಹವರ ಪರಿಸ್ಥಿತಿಯನ್ನು ಉತ್ತಮ ಪಡಿಸಲಿಕ್ಕೆ ಸಹಾಯ ಮಾಡುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಒದಗಿಸಿರತಕ್ಕ ಹಣವನ್ನು ನಾವು ಸರಿಯಾಗಿ ಖರ್ಚುಮಾಡುತ್ತಿಲ್ಲ. ಮಾನ್ಯ ಮಿತ್ರರಾದ ಶ್ರೀ ಮುನಿಯಪ್ಪನವರು ಈ ವಿಷಯದಲ್ಲಿ ಆಗಲೇ ಅರ್ಥ ಗರ್ಭಿತವಾಗಿ ಮಾತನಾಡಿದ್ದಾರೆ. ಇದಕ್ಕಾಗಿ ಹಣವನ್ನು ಹೆಚ್ಚಿಗೆ ಖರ್ಚು ಮಾಡಿದರೂ ಚಿಂತೆಯಿಲ್ಲ. ಅಲ್ಲದೆ ಈಗ ಇಲ್ಲಿ ಒದಗಿಸಿರುವ 66,55,000 ರೂಪಾಯಿಗಳನ್ನು ಪೂರ್ತಿಯಾಗಿ ಬೇಕಾದರೂ ಈ ಗ್ರಾಮಾಂತರಗಳಲ್ಲಿರುವ ಹಿಂದುಳಿದ ಜನರಿಗಾಗಿ ಖರ್ಚು ಮಾಡಿದರೂ ಚಿಂತೆಯಿಲ್ಲ. ಅದಕ್ಕಾಗಿ ಹೆಚ್ಚಿನ ಹಣ ಬೇಕಾದರೂ ಕೊಡಬಹುದು. ಎಂದು ನನಗನ್ನಿಸುತ್ತದೆ. ಹೋದವರ್ಷ ಈ ನಿಮ್ನ ವರ್ಗದವರಿಗಾಗಿ ಎಷ್ಟು ಹಣವನ್ನು ಒದಗಿಸಿದ್ದರೋ ಅದಕ್ಕಿಂತಲೂ ಕಡಿಮೆ ಒದಗಿಸಿದ್ದಾರೆ. Communitywise ಎಂದು ಹೇಳುತ್ತ ಏಳು ಲಕ್ಷ, ಮೂರು ಲಕ್ಷ, ಎರಡು ಲಕ್ಷ ಹೀಗೆ ಕೊಟ್ಟಿದ್ದಾರೆ. ಮಾನ್ಯ ಮಿತ್ರರು ಈಗಾಗಲೇ ಅನೇಕ ವಿಧವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಬರೀ ಬಾಯಿಯಲ್ಲಿ ಮಾತನಾಡುತ್ತಿದ್ದರೆ ಯಾವ ಕೆಲಸವೂ ಆಗುವುದಿಲ್ಲ.

ನಮ್ಮ ರಾಜ್ಯಾಂಗದ ಕಾನೂನಿನ ಪ್ರಕಾರ ಜಾತ್ಯತೀತ ರಾಷ್ಟ್ರವನ್ನು ಕಟ್ಟಬೇಕೆನ್ನುವ ಘೋಷಣೆಯನ್ನು ಮಾಡುತ್ತಾ ನಿಮ್ಮ ಮನೆಯಲ್ಲೇ ಜಾತೀಯತೆಯನ್ನು ತೋರಿಸುತ್ತಿದ್ದೀರಿ. ಹೇಗೆ ಜಾತ್ಯತೀತ ರಾಷ್ಟ್ರವನ್ನು ಕಟ್ಟುತ್ತೀರಿ ಎನ್ನುವುದುಗೊತ್ತಿಲ್ಲ. ಇವೊತ್ತಿನದಿವನ ರಾಜ್ಯದ ಆಡಳಿತವನ್ನೂ ನಿರೂಪಿಸಬೇಕೆಂದು ನಾವೆಲ್ಲ ಬಂದು ಸೇರಿರುತ್ತೇವೆ. ನಾವು ಗಳೇ ಜಾತೀಯತೆಯ ವ್ಯವಸ್ಥೆಯನ್ನು ಎಲ್ಲ ವಿಷಯಗಳಲ್ಲಿಯೂ ಮಾಡುತ್ತ ಬಂದರೆ ಹಿಂದುಳಿದವರನ್ನು ಯಾರು ಮುಂದಕ್ಕೆ ತರುತ್ತಾರೆಂದು ಯೋಚಿಸಬೇಕು.

ಅಸ್ಪೃಶ್ಯತಾ ನಿವಾರಣೆಯಾಗಬೇಕೆಂಬ ಕೂಗನ್ನು ವಿದ್ಯಾರ್ಥಿದೆಸೆಯಿಂದಲೂ ನಾನು ಕೇಳುತ್ತಿದ್ದೇನೆ. ಅದು ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತಿದೆ ಎಂದು ಯೋಚನೆ ಮಾಡುವುದಾದರೆ ಚಿಂತಾಜನಕವಾದ ಸ್ಥಿತಿಯಲ್ಲಿದೆ. ಅದರಕಡೆಗೆ ಹೆಚ್ಚು ಗಮನ ಕೊಡಬೇಕು. ಮದರಾಸು ಸರ್ಕಾರದವರು ಹರಿಜನರ ಸೇವೆ ಮಾಡುವ ಸವರ್ಣೀಯರಿಗೆ ಬಹುಮಾನ ಕೊಡತಕ್ಕ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದಾರೆ. ಅಂಥ ವ್ಯವಸ್ಥೆಯನ್ನು ಈ ಸರ್ಕಾರದವರೂ ಮಾಡಬೇಕು. ಹರಿಜನರ ಸೇವೆಯಲ್ಲಿ ನಿರತರಾಗುವ ಸವರ್ಣೀಯರಿಗೆ ಮಾನ್ಯತೆಯನ್ನು ಕೊಡತಕ್ಕ ವಿಷಯದಲ್ಲಿ ವ್ಯವಸ್ಥೆಮಾಡಿದರೆ ಸ್ವಲ್ಪಮಟ್ಟಿಗೆ ಸುಧಾರಿಸಬಹುದು ಎಂದು ನನಗನ್ನಿಸುತ್ತದೆ. ಈ ವಿಷಯಕ್ಕೆಲ್ಲ ಸರ್ಕಾರದವರು ಗಮನ ಕೊಡುವುದಲ್ಲದೆ ಹರಿಜನರ ಮಕ್ಕಳ ವಿದ್ಯಾಭ್ಯಾಸದ ಕಡೆಗೂ ಗಮನಕೊಡಬೇಕು. ಹರಿಜನರು ತಮ್ಮ ಮಕ್ಕಳನ್ನು ಸ್ಕೂಲಿಗೆ ಸರಿಯಾಗಿ ಕಳುಹಿಸುತ್ತಿಲ್ಲ. ಅವರನ್ನು ಬೇರೆ ಒಬ್ಬರ ಮನೆಯಲ್ಲಿ ಕೆಲಸಮಾಡಲು ಕಳುಹಿಸಿದರೆ ವರ್ಷಕ್ಕೆ 20-25 ರೂಪಾಯಿ ಅವನಿಗೆ ದೊರೆಯುತ್ತದೆ. ಆದುದರಿಂದ ಸಣ್ಣ ಸಣ್ಣ ಮಕ್ಕಳನ್ನು ಸ್ಕೂಲಿಗೆ ಕಳುಹಿಸುವುದಿಲ್ಲ. ಇಂಥವರಿಗೆ ವರ್ಷಕ್ಕೆ 25 ರೂಪಾಯಿಗಳನ್ನು ಕೊಡುವಂತೆ ವ್ಯವಸ್ಥೆಮಾಡಿದರೆ ಹೆಚ್ಚಾಗಿ ಹರಿಜನ ಬಾಲಕ ಬಾಲಕಿಯರು ಸ್ಕೂಲಿಗೆ ಹೋಗುವುದಕ್ಕೆ ಅವಕಾಶವಾಗುತ್ತದೆ. ಹಿಂದುಳಿದವರನ್ನು ಮತ್ತು ಹರಿಜನರನ್ನು ಆರ್ಥಿಕ ಮತ್ತು ವಿದ್ಯಾಭ್ಯಾಸದ ವಿಷಯದಲ್ಲಿ ಮುಂದೆ ತರಲು ಇದಕ್ಕಾಗಿ ಹೆಚ್ಚು ದುಡ್ಡನ್ನು ಒದಗಿಸಬೇಕು ಮತ್ತು ಒದಗಿಸುವ ದುಡ್ಡನ್ನು ಪೂರ್ತಿಯಾಗಿ ಖರ್ಚುಮಾಡಬೇಕು. ಹೀಗೆ ಮಾಡಿದಲ್ಲಿ ಮುಂದಿನವರ್ಷ ಸ್ವಲ್ಪಮಟ್ಟಿಗಾದರೂ ಪರಿಸ್ಥಿತಿ ಸುಧಾರಿಸಬಹುದು ಎಂದು ತಿಳಿಸಿ, ಇಷ್ಟು ಮಾತ್ರ ಅವಕಾಶಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಹನುಮಯ್ಯ.—ಅಧ್ಯಕ್ಷ ಮಹಾಶಯರೇ, ಈ ದಿವಸ ದೊಡ್ಡ ಮನಸ್ಸುಮಾಡಿ ಮಾತನಾಡಲು ಅವಕಾಶಕೊಟ್ಟಿದ್ದಕ್ಕೆ ಪ್ರಥಮತಃ ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಪ್ರಾರಂಭಮಾಡಬೇಕೆಂದು ಇಚ್ಛಿಸುತ್ತೇನೆ. ಸಾಧಾರಣವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಜನಗಳು ಉತ್ತಮವಾಗಬೇಕಾದುದು ಬಹಳ ಅಗತ್ಯವೆಂದು ನಾನಾದರೂ ಭಾವಿಸಿಕೊಂಡಿದ್ದೇನೆ. ನಮ್ಮ ಮುಂದೆ ಇರುವ ಬಡ್ಜೆಟ್ಟನ್ನು ನೋಡಿದರೆ ಗ್ರಾಮಾಂತರ ಪ್ರದೇಶಗಳಿಗೆ ಕಡಮೆ ದುಡ್ಡನ್ನು ಒದಗಿಸಿದ್ದಾರೆ. 1947ನೆ ಇಸವಿಗೆ ಹಿಂದೆ ಇದ್ದ ಸರ್ಕಾರ ಯಾವ ರೀತಿಯಲ್ಲಿ ಪಟ್ಟಣವಾಸಿಗಳಿಗೆ ಸಿಮೆಂಟ್ ರೋಡು, ಟಾರ್ ರೋಡು ಇವನ್ನು ಮಾಡಿಸುತ್ತಿದ್ದರೋ, ಟ್ಯಾಕ್ಸಿಗಳಿಗೆ ಹೆಚ್ಚಿನ ಪಾತಸ್ತ್ಯ ಕೊಡುತ್ತ ಇದ್ದರೋ, ಅದೇರೀತಿ ಬಡ್ಜೆಟ್ಟಿನ ಯಾವಭಾಗದಲ್ಲಿ ನೋಡಿದರೂ ಈಗಿನ ಸರ್ಕಾರದವರೂ ಕೂಡ ಪಟ್ಟಣವಾಸಿಗಳಿಗೆ ಹೆಚ್ಚಿನ ಹಣವನ್ನು ಒದಗಿಸಿದ್ದಾರೆಯೇ ವಿನಾ ಗ್ರಾಮಾಂತರವಾಸಿಗಳಿಗೆ ಹೆಚ್ಚು ಹಣವನ್ನೊದಗಿಸಿಲ್ಲ ವೆಂದು ನಾನು ಹೇಳುತ್ತಿದ್ದೇನೆ. ನೀವು ಪ್ರತಿ

ಯೊಂದು ಹಳ್ಳಿಗಳಿಗೂ ಹೋದಾಗ ದೇಶದಲ್ಲಿರತಕ್ಕ ಪ್ರಜೆಗಳೆಲ್ಲರೂ ಒಂದೇ ಸಮಾನರು ಎಂದು ಹೇಳುತ್ತೀರಿ. ಆದರೆ ಪಟ್ಟಣವಾಸಿಗಳಿಗೆ ನೀರನ್ನು ಒದಗಿಸಲು ಎಷ್ಟು ದುಡ್ಡನ್ನು ಬೇಕಾದರೂ ಕೊಡುತ್ತೀರಿ. ಅದೇ ಹಳ್ಳಿಗಳಲ್ಲಿ ಭಾವಿಗಳು ಬೇಕು, ಕುಡಿಯುವ ನೀರಿನ ಸೌಕರ್ಯವಿಲ್ಲ ಎಂದರೆ ಸರಿಯಾಗಿ ಹಣವನ್ನು ಒದಗಿಸುತ್ತಿಲ್ಲ. ಹೋದ ವರ್ಷ ದೇಶದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಭಾವಿಗಳಿಗಾಗಿ 2,30,000 ರೂಪಾಯಿ ಒದಗಿಸಿದ್ದರು. ಈ ವರ್ಷ 2,53,000 ರೂಪಾಯಿ ಒದಗಿಸಿದ್ದಾರೆ.

ಶ್ರೀ ಟಿ. ಮರಿಯಪ್ಪ.—ಪಟ್ಟಣಗಳಿಗೆ ಸಾಮಾನ್ಯವಾಗಿ ಸಾಲ ಕೊಡುತ್ತೇವೆ. ಆದರೆ ಗ್ರಾಮಾಂತರ ಪ್ರದೇಶಗಳಿಗೆ ಗ್ರಾಂಟ್ ಕೊಡುತ್ತೇವೆಂಬುದನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ಶ್ರೀ ಟಿ. ಹನುಮಯ್ಯ.—ಹಳ್ಳಿಗಳಿಗೂ ಸಹ ಸಾಲವನ್ನು ಕೊಡಿ. ಅವರು ದೇಶಬಿಟ್ಟು, ಸಾಲ ಕೊಡದೆ ಓಡಿಹೋಗುವುದಿಲ್ಲ. ಅವರೂ ದೇಶದ ಪ್ರಜೆಗಳು; ಕಂದಾಯ ಕೊಡುತ್ತಾರೆ. ಪಟ್ಟಣವಾಸದಲ್ಲಿರುವ ಜನಗಳೇ ಬೇರೆ, ಹಳ್ಳಿಗಳಲ್ಲಿರುವ ಜನಗಳೇ ಬೇರೆ ಎಂದು ತಿಳಿದುಕೊಳ್ಳಬಾರದು, ಪ್ರಜಾಪ್ರಭುತ್ವ ಈಗ ಇದೆ. ದೇಶದಲ್ಲಿ ಇರುವ ಜನರೆಲ್ಲರನ್ನೂ ಸರಿಸಮಾನರು ಎಂದು ತಿಳಿದುಕೊಳ್ಳಬೇಕು. ಪಟ್ಟಣವಾಸಿಗಳಿಗೆ ಮಾತ್ರ ಕೋಟ್ಯಾಂತರ ಲಕ್ಷಾಂತರ ರೂಪಾಯಿಗಳನ್ನು ಸಾಲವಾಗಿ ಕೊಟ್ಟು ಹಳ್ಳಿಗಳನ್ನು ಕಡೆಗಾಣಿಬಾರದು. ಇವೊತ್ತು ಪಂಚಾಯಿತಿಗಳಿಗೆ ಡಿಸ್ಟ್ರಿಕ್ಟ್ ಬೋರ್ಡಿನವರು ತಮ್ಮ ವರಮಾನದಲ್ಲಿ ಶೇಕಡಾ 12½ ಕೊಡಬೇಕು. ಆದರೆ ಸಿಮೆಂಟ್ ರಸ್ತೆ, ಟಾರ್ ರಸ್ತೆ ಮಾಡಿಸಲು ಗ್ರಾಮ ಪಂಚಾಯಿತಿಗಳಿಗೆ ಎಷ್ಟೆಷ್ಟು ದುಡ್ಡು ಕೊಡುತ್ತೀರಿ ಎನ್ನುವುದನ್ನು ದಯವಿಟ್ಟು ತಿಳಿಸಿ. ನಾನು ಓಪ್ಪಿಕೊಳ್ಳುತ್ತೇನೆ.

ಈಗ ಸರ್ಕಾರ ಏನು ಪದ್ಧತಿಯನ್ನಿಟ್ಟುಕೊಂಡಿದೆ ಎಂದರೆ ಸೆಕ್ರೆಟೇರಿಯಟ್ಟಿನಲ್ಲಿ ಸೆಕ್ರೆಟರಿಗಳು ಹಿಂದಿನ ಸರ್ಕಾರವಿದ್ದ ಕಾಲದಿಂದ ಯಾವ ಒಂದು ಫೈಸೀಜರ್ ಹಾಕಿಕೊಂಡು ಬರುತ್ತಿದ್ದರೋ ಅದನ್ನೇ ಈಗಲೂ ಅನುಸರಿಸುತ್ತಿದ್ದಾರೆ. ಪ್ರಜಾ ಪ್ರಭುತ್ವದಲ್ಲಿ ಪ್ರಜೆಗಳು ಹೇಳತಕ್ಕದ್ದನ್ನು ಗಮನಕ್ಕೆ ತೆಗೆದುಕೊಂಡು ಪಾಲಿಸತಕ್ಕದ್ದು ಅಗತ್ಯವೆಂದು ಹಣಕಾಸಿನ ನಚಿವರಲ್ಲಿ ನಾನು ಅತಿ ವಿನಯದಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

All India Scheduled Castes Commissionನವರು ಇಂಡಿಯಾ ದೇಶದಲ್ಲೆಲ್ಲ ಸಂಚಾರಮಾಡಿ ಒಂದು ವರದಿಯನ್ನು ಸಲ್ಲಿಸಿದರು. ಅದು ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುತ್ತಿದೆ. ಅದೇರೀತಿ ಮೈಸೂರು ದೇಶದಲ್ಲಿಯೂ ಕೂಡ ಒಂದು ಕಮಿಟಿಯನ್ನು ಮಾಡಬೇಕು. ಅವರು ದೇಶದಲ್ಲಿ ಸಂಚರಿಸಿ ಜನರಿಗೆ ಏನೇನು ಕಷ್ಟ ನುಖಗಳಿವೆ. ಅದನ್ನು ಯಾವ ರೀತಿ ಪರಿಹರಿನಬೇಕೆಂಬುದಕ್ಕೆ ನಲಹೆಗಳನ್ನು ಕೊಡಬೇಕು. ನಮಗೆ ಸ್ವಾತಂತ್ರ್ಯ ಬಂದು ಹತ್ತು ವರ್ಷಗಳಮೇಲೆ ಆಗಿದೆ. ಇವೊತ್ತು ಹಳ್ಳಿಗಳಕಡೆ ಹೋಗಿ ನೋಡಿದರೆ ಹತ್ತು ವರ್ಷಗಳ ಹಿಂದೆ ಅವು ಹೇಗೆ ಇದ್ದುವೋ ಹಾಗೆಯೇ ಈಗಲೂ ಇವೆ. ಅಧರಲ್ಲಿ ಏನೂ ಬದಲಾವಣೆಯಾಗಿಲ್ಲ. ನನಗೆ ತಿಳಿದಮಟ್ಟಿಗೆ ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷರೂ, ಮತ್ತು ದೊಡ್ಡ ದೊಡ್ಡ ಮುಖಂಡರುಗಳೂ ಹರಿಜನರ ಕಾಲೊನಿಗಳಲ್ಲಿ ವಾನವಾಡುತ್ತಿದ್ದಾರೆ. ನಮ್ಮ ಮುಖಂಡರು ಮತ್ತು ಮಂತ್ರಿಗಳು ಹರಿಜನರ ಕಾಲೊನಿಗಳಲ್ಲಿ ವಾನ ಮಾಡುವ ಮಾತು ಹಾಗಿರಲಿ, ಮಂತ್ರಿಗಳು ಪ್ರವಾನ ಹೋದಕಾಲದಲ್ಲಿ ಹರಿಜನರ ಕಾಲೊನಿಗಳಿಗೆ ಬರುತ್ತೇವೆಂದು ಹೇಳಿದರೂ ಸಾಕು ಅದರಿಂದ ಹರಿಜನರ ಕಾಲೊನಿಗಳು ಬಹಳ ಚೆನ್ನಾಗಿ ಉದ್ಧಾರವಾಗುತ್ತವೆ. ಆದರೆ ಮಂತ್ರಿಗಳು ಹಾಗೆ ಮಾಡುತ್ತಿಲ್ಲ. ಪ್ರವಾನ ಹೋದಾಗ ಟಿ. ಬಿ. ಗಳಲ್ಲಿ ಹೋಗಿ ವಾನಮಾಡುತ್ತಾರೆ. ಮತ್ತೆ ಎಲ್ಲಿಯೂ ಹೋಗುವುದಿಲ್ಲ. ಮಹಾತ್ಮ ಗಾಂಧಿಯವರ ಹೆನರನ್ನು ಹೇಳಿಕೊಂಡು ಇವೊತ್ತಿನ ರಾಜ್ಯಭಾರ ಮಾಡುವ ಜನಗಳು ಅವರು ನಡೆದಂತೆ ನಡೆಯುತ್ತಿಲ್ಲ. ಗಾಂಧೀಜಿಯವರು ಯಾವ ಊರಿಗೆ ಹೋದರೂ ಕೂಡ ಹರಿಜನರ ಕಾಲೊನಿಗೆ ಚಲೋ ಎಂದು ಹೇಳುತ್ತಿದ್ದರು, ತಾವೂ ಅದೇರೀತಿ ವೂಡಿ. ಮಂತ್ರಿಗಳು ಪ್ರವಾನ ಹೋದಕಾಲದಲ್ಲಿ ಹರಿಜನರ ಕಾಲೊನಿಗಳಲ್ಲಿರುತ್ತೇವೆಂದರೆ ಅದರಿಂದ ಆ ಕಾಲೊನಿಗಳು ಎಷ್ಟೋ ಉದ್ಧಾರವಾಗುತ್ತವೆ.

ಆಕ್ಯಿಜಿಷ್ಟ್ ರಿಕಾರ್ಡುಗಳು ಬಹಳ ನಿಧಾನವಾಗುತ್ತಿವೆ ಅದಕ್ಕೆ ಬೇಕಾದಷ್ಟು ಕಾರಣಗಳಿವೆ. ಅನ್ಪೃಶ್ಯತಾ ನಿವಾರಣಾ ಕಾನೂನು ದೇಶಾದ್ಯಂತ ಜಾರಿಗೆ ಬಂದು ಅದರಪ್ರಕಾರ ಎಷ್ಟು ಕೇನುಗಳನ್ನು ಹಾಕಿದ್ದೀರಿ. ಎಷ್ಟು ಜನರಿಗೆ ಶಿಕ್ಷೆಯಾಗಿದೆ ಎಂದು ಐದಾರು ವರ್ಷಗಳಿಂದಲೂ ಕೇಳುತ್ತಿದ್ದೇವೆ. ಇಂದಿಗೂ ಸಹ ಗ್ರಾಮಾಂತರ ಪ್ರದೇಶಗಳಲ್ಲಿ ದೇವಸ್ಥಾನಕ್ಕೆ ಹರಿಜನರ ಪ್ರವೇಶವಿಲ್ಲ. ಎಲ್ಲರೂ ಸರಿಸಮಾನಸ್ಥರು ಎಂದು ಹೇಳಿದರೆ ಸಾಲದು. ಗ್ರಾಮಾಂತರದಲ್ಲಿರತಕ್ಕ 90 ಭಾಗ ಜನಗಳ ಕಷ್ಟ ನಿಷ್ಠುರವೇನೆಂಬುದನ್ನು ಅರಿಯತಕ್ಕದ್ದು ಮುಖ್ಯವಾದುದು. ನಾವುಗಳೆಲ್ಲ ಅವರಿಗೆ ಆಸೆ ಆಕಾಂಕ್ಷೆಗಳನ್ನು ತೋರಿಸಿ, ಓಟುಗಳನ್ನು ತೆಗೆದುಕೊಂಡು ಬಂದು, ಇಲ್ಲಿ ಕುಳಿತುಕೊಂಡು ಇರುತ್ತೇವೆ. ಸ್ವಾತಂತ್ರ್ಯ ಬಂದು ಹತ್ತು ವರ್ಷಗಳಾದರೂ ಕೂಡ ಅವರ ಸ್ಥಿತಿ ಉತ್ತಮವಾಗಿಲ್ಲ. ಷೆಡ್ಯೂಲ್ ಜಾತಿಯವರಿಗೆ ಸಹಾಯಮಾಡಲು Housing Scheme ಮಾತ್ರ ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದೀರಿ. ದೇಶದಲ್ಲಿರುವ ಹರಿಜನರ ಆರ್ಥಿಕ ಅಭಿವೃದ್ಧಿಮಾಡಲಿಕ್ಕೆ, ಸಾಮಾಜಿಕಾಭಿವೃದ್ಧಿ ಮಾಡಲಿಕ್ಕೆ ಯಾವ ಸ್ಕೀಂ ಇದೆ? ಜೊತೆಗೆ ಸರ್ಕಾರದ ನೌಕರಿಗಳಲ್ಲಿ ಷೆಡ್ಯೂಲ್ ಜಂಗಡಗಳವರಿಗೆ ಶೇಕಡಾ 18 ಸ್ಥಾನಗಳನ್ನು ಕೊಡಬೇಕೆಂದಿದ್ದರೂ ಎಷ್ಟೋ ಹುದ್ದೆಗಳಲ್ಲಿ ಶೇಕಡ ಎರಡು ಅಥವ 2·5 ಇದೆ. ಇದು ಸೇಕಡ 18 ರಷ್ಟು ಆಗಬೇಕಾದರೆ • ಎಷ್ಟು ಕಾಲ ಬೇಕಾಗುತ್ತದೆ? ಮೈಸೂರು ದೇಶಕ್ಕೆಲ್ಲ ಒಬ್ಬ ಡಿಸ್ಟ್ರಿಕ್ಟ್ ಜಡ್ಜ್, ಒಬ್ಬ ಮುನ್ಸಿಪ್ ಮಾತ್ರ ಇದ್ದಾರೆ, ನಮ್ಮ ಜನರಲ್ಲಿ law graduates ಇಲ್ಲವೇ? ಅವರಿಗೆ ಏಕೆ ಈ ಹುದ್ದೆಗಳನ್ನು ಕೊಡಬಾರದು? ಇವರಲ್ಲಿ ಯಾರೂ ದಕ್ಷರಾದವರಿಲ್ಲವೇ? ನಮ್ಮ ಜನಗಳಲ್ಲಿ ದಕ್ಷರಾದವರಿದ್ದಾರೆಂಬುದನ್ನು ಸರ್ಕಾರದವರೇ ಒಪ್ಪಿಕೊಂಡಿದ್ದಾರೆ. ಹೀಗಿರುವಾಗ ನಮ್ಮ ಜನಗಳಿಗೆ ನರಿಯಾದ ಪ್ರಾತಿನಿಧ್ಯವನ್ನು ಎಲ್ಲಕಡೆಯೂ ಕೊಡಬೇಕೆಂದು ಹೇಳುತ್ತೇನೆ.

ಆದರೆ ಈ ಹೊತ್ತು ತಾವು ಇದಕ್ಕೆ ಬಹಳ ಕಡಮೆ ಹಣ ಕೊಟ್ಟಿದ್ದೀರಿ. ಒಂದು ಕೋಟಿ ರೂಪಾಯಿಯಾದರೂ ಕೊಡಬೇಕಾಗಿರುವಲ್ಲಿ ಕೇವಲ 22 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ತೀರಾ ಶೋಚನೀಯ. ಇದರಲ್ಲಿ 11 ಲಕ್ಷ ರೂಪಾಯಿಗಳನ್ನು

(ಶ್ರೀ ಟಿ. ಹನುಮಯ್ಯ)

ಇಂಡಿಯಾ ಸರ್ಕಾರದವರು ಕೊಟ್ಟಿದ್ದಾರೆ ತಾವು ಕೇವಲ 11ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇನ್ನು ಹತ್ತು ವರುಷಗಳಲ್ಲಿ ಹರಿಜನರನ್ನು ಇತರ ಮಟ್ಟಕ್ಕೆ ತರಬೇಕೆಂದು ನೀವು ಆಶಿಸುವುದಾದರೆ ನೀವೆಲ್ಲಾ ಬಹಳ ಮುಂದುವರಿದು ಕೆಲಸ ಮಾಡುವುದು ಅವಶ್ಯಕ. ಈ ದೃಷ್ಟಿಯಿಂದ 50 ಲಕ್ಷ ಪ್ರಜಾ ಸಂಖ್ಯೆಯಿರುವ ಈ ಜನಾಂಗಕ್ಕೆ ಅವರ ಸಂಖ್ಯೆಯ ದಾಮಾಷಾ ಪ್ರಕಾರ ಹಣವನ್ನು ಒದಗಿಸಬೇಕು. ಮಾನ್ಯ ಹಣಕಾಸಿನ ಸಚಿವರು ಹೆಚ್ಚಿಗೆ ಕೊಡುತ್ತಿದ್ದರೋ ಏನೋ, ಆದರೆ ನಮ್ಮ ಮಂತ್ರಿಗಳು ನಮಗಾಗಿ ಯಾವಯಾವ ಬಾಬಿಗೆ ಎಷ್ಟೆಷ್ಟು ಬೇಕೆಂಬುದನ್ನು ಹೇಳಿ ಕಿತ್ತುಕೊಳ್ಳುವುದು ಅವರ ಕರ್ತವ್ಯವಾಗಿತ್ತು. ದೇಹದಲ್ಲಿ ಯಾವ ಒಂದು ಭಾಗಕ್ಕೆ ತೊಂದರೆಯಾದರೂ ದೆಹಕ್ಕೇ ಅಪಾಯವೆನ್ನುವಂತೆ ಸಮಾಜದಲ್ಲಿ ಒಂದು ಭಾಗವಾದ ಹರಿಜನರ ಏಳಿಗೆ ಸಾಧನೆಯಾಗದಿದ್ದರೆ, ಇಡೀ ಸಮಾಜ ಮುಂದುವರಿಯುವುದಿಲ್ಲ, ದೇಶ ಮುಂದುವರಿಯುವುದಿಲ್ಲ. ಆದ್ದರಿಂದ ಹರಿಜನರ ಸಮಸ್ಯೆ ಎಲ್ಲಿಯವರೆಗೆ ನಿವಾರಣೆಯಾಗುವುದಿಲ್ಲವೋ ಅಲ್ಲಿಯವರೆಗೂ ದೇಶ ಅಭಿವೃದ್ಧಿಗೆ ಬರುವುದಿಲ್ಲ. ಮಹಾತ್ಮಾಗಾಂಧಿಯವರೂ ತಮಗೆ ಇದನ್ನೇ ಹೇಳುತ್ತಿದ್ದರು. ಇದನ್ನು ಜ್ಞಾಪಕದಲ್ಲಿಟ್ಟುಕೊಂಡು ಅವರನ್ನು ಮುಂದಕ್ಕೆ ತರುವುದು ಅಗತ್ಯವೆಂದು ಹೇಳಿ ಮಾನ್ಯ ಅಧ್ಯಕ್ಷರು ಇಲ್ಲಿಯವರೆಗೂ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಎರಡನೆಯ ಸಲ ಅವರಿಗೆ ನನ್ನ ಎರಡನೆಯ ವಂದನೆಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀಮತಿ ಕೆಂಪಮ್ಮ (ಕೊಳ್ಳೇಗಾಲ).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಹಿಂದುಳಿದ ಪಂಗಡದವರ ಪುರೋಭಿವೃದ್ಧಿಗೆ ಸಂಬಂಧಪಟ್ಟ ಡಿಮ್ಯಾಂಡನ್ನು ಅನುಮೋದಿಸುತ್ತೇನೆ.

ಹಿಂದುಳಿದವರಾಗಿ ಹುಟ್ಟಿ ಮುಂದುವರಿದ ಜನಾಂಗದಿಂದ ದೂರೀಕರಿಸಲ್ಪಟ್ಟು ಬಹಳ ದಿನಗಳಿಂದಲೂ ಸಮಾಜದ ಕುಷ್ಠರೋಗಿಯಂತೆ ಇದ್ದ ಜನಾಂಗಕ್ಕೆ ಸ್ವತಂತ್ರ ಸರ್ಕಾರ ಬರುವುದಕ್ಕಿಂತ ಮುಂಚಿತವಾಗಿ ಮೈಸೂರಿನ ರಾಜ ಮನೆತನದವರೂ ಮತ್ತು ಕೆಲವು ಸವರ್ಣ ಮಹನೀಯರೂ ಈ ಜನಾಂಗದ ಉದ್ಧಾರಕ್ಕೆ ಪ್ರಯತ್ನ ಮಾಡಿದರು. ಹಳೆಯ ಮೈಸೂರಿನ ರಾಜ್ಯದಲ್ಲಿ ನನಗೆ ತಿಳಿದಮಟ್ಟಿಗೆ ದಿವಂಗತ ಡಾ॥ ಸಿ. ಆರ್. ರೆಡ್ಡಿಯವರೂ, ಹಾಗೂ ಆರ್. ಗೋಪಾಲ ಸ್ವಾಮಿ ಅಯ್ಯರ್‌ರವರೂ ಪ್ರಾಮುಖ್ಯರು. ಅವರ ಸಹಾಯದಿಂದಲೇ ನಮ್ಮಲ್ಲಿ ಕೆಲವರು ವಿದ್ಯಾವಂತರಾಗಿರುತ್ತಾರೆ.

ಸಮಾಜದಲ್ಲಿಯ ಜಾತಿಯ ಭಾವನೆ ಹೋಗಬೇಕಾದರೆ, ಮನೆ ಕಟ್ಟಿಸಿಕೊಡುವದು, ಬಾವಿ ತೆಗೆಯಿಸಿಕೊಡುವುದು ಇಷ್ಟರಿಂದ ಆಗುವುದಿಲ್ಲ. ಈ ವಸ್ತುಗಳು ಅವಶ್ಯಕವೇನೋ ನಿಜ. ಆದರೆ ಬಡತನ ನೀಗಿಸಬೇಕಾದರೆ ಅವರಿಗೆ ಎಲ್ಲ ವಿಧದಲ್ಲಿಯೂ ಸಮಾನ ಅವಕಾಶ ದೊರಕಬೇಕು. ಅದಕ್ಕಾಗಿ ಸರ್ಕಾರ ಭೂಮಿ ಹಂಚುವಾಗ ಮೊದಲು ಭೂಮಿಯನ್ನು ಉಳಿಮೆ ಮಾಡಲು ಸಿದ್ಧರಿರುವ ಎಲ್ಲಾ ಹರಿಜನರಿಗೂ ಕಡು ಬಡವರಾಗಿರುವವರಿಗೂ ಕೊಡುವ ವ್ಯವಸ್ಥೆಮಾಡಬೇಕು. ಹಾಗೆ ಭೂಮಿಯನ್ನು ಕೊಡುವಾಗ ಮೊದಲು ಒಂದೊಂದು ಕಡೆ ಹೆಚ್ಚಿಗೆ ಕಾಲೋನಿಗಳನ್ನಾಗಿ ಮಾಡಿ ಅಲ್ಲಿ ವಾಸಿಸಲು ಮನೆ, ಉಳುವುದಕ್ಕೆ ಎತ್ತು ಮತ್ತು ಉಪಕರಣಗಳನ್ನು ಒದಗಿಸಬೇಕು. ಮನೆ ಕಟ್ಟಿಕೊಳ್ಳುವುದಕ್ಕೆ ಈಗ 300 ರೂಪಾಯಿಗಳನ್ನು ಒದಗಿಸುತ್ತಿದ್ದೀರಿ. ಈಗೇನೋ 400 ರೂಪಾಯಿಗಳನ್ನು ಕೊಡುವುದಾಗಿ ಆಲೋಚಿಸಿರುವುದಾಗಿ ತಿಳಿದುಬಂದಿದೆ. ಇದು ಸಾಲದು. ಇದನ್ನು 500 ರೂಪಾಯಿಗಳಿಗೆ ಹೆಚ್ಚಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಎರಡನೆಯದಾಗಿ ವಿದ್ಯೆಯಿಲ್ಲದವರನ್ನು ವಿದ್ಯಾವಂತರನ್ನಾಗಿ ಮಾಡಿ ದೇಶದಲ್ಲಿ ಅವರು ಸುಸ್ಥಿತರಾಗಿ ಬಾಳಿ ದೇಶದ ಆಗು ಹೋಗುಗಳಿಗೆ ಭಾಗಿಯಾಗುವಂತೆ ಮಾಡಬೇಕು. ಸರ್ಕಾರದ ಪೂರ್ಣ ಸಹಾಯದಿಂದ ನಡೆಯುತ್ತಿರುವ ಹಳೆಯ ಮೈಸೂರಿನ ಫ್ರೀ ಬೋರ್ಡಿಂಗ್ ಹೋಂಗಳಲ್ಲಿ ಹುಡುಗರ ಸಂಖ್ಯೆ ಹೆಚ್ಚಿನ ಬೇಕು. ಮತ್ತು ಈಗಿರುವ ಹರಿಜನ ವಿದ್ಯಾರ್ಥಿನಿಯರ ಹಾಸ್ಟೆಲುಗಳ ಸಂಖ್ಯೆಯನ್ನು ಹೆಚ್ಚಿಸಬೇಕು. ಮೈಸೂರು ಸಿಟಿಯಲ್ಲಿರುವ ಹರಿಜನ ವಿದ್ಯಾರ್ಥಿನಿಯರ ಸಂಖ್ಯೆಯನ್ನು ಹೆಚ್ಚಿಸಬೇಕಲ್ಲದೆ ಅವರಿಗೆ ಒಂದು ಸ್ವಂತ ಕಟ್ಟಡವನ್ನು ಕಟ್ಟಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಎಳಂದೂರು ತಾಲ್ಲೂಕಿನಲ್ಲಿರುವ ಹರಿಜನ ವಿದ್ಯಾರ್ಥಿನಿಲಯ ಸ್ಥಾಪಿತವಾಗಿ ಮೂರು ವರ್ಷವಾದರೂ ಅಲ್ಲಿಗೆ ಯಾವವಿಧವಾದ ಗ್ರಾಂಟನ್ನೂ ಕೊಟ್ಟಿಲ್ಲ. ಯಳಂದೂರು ತಾಲ್ಲೂಕಿನಲ್ಲಿ $\frac{1}{3}$ ಭಾಗ ಹರಿಜನರಿದ್ದಾರೆ. ವಿದ್ಯಾರ್ಥಿನಿಲಯಕ್ಕೆ ನುಮಾರು ಪ್ರತಿವರ್ಷವೂ ಐವತ್ತಕ್ಕೆ ಕಡಮೆಯಿಲ್ಲದಷ್ಟು ವಿದ್ಯಾರ್ಥಿಗಳು ಬರುತ್ತಾರೆ. ಈ ಹಾಸ್ಟೆಲಿಗೆ ಗ್ರಾಂಟನ್ನು ಒದಗಿಸಿಕೊಡಬೇಕು.

ಎಳಂದೂರು ತಾಲ್ಲೂಕಿನಲ್ಲಿ ಮಾಂಬಳ್ಳಿ, ಎಳಂದೂರ್ ಟ್ಯಾ, ಹೊನ್ನೂರು ಮತ್ತು ಯರಗಂಬಳ್ಳಿ ಗ್ರಾಮದ ಬಡಾವಣೆಗಳಿಗೆ ರಿಕಾರ್ಡುಗಳೂ ನಡೆದು ಬಹಳ ವರ್ಷಗಳಾದುವು. ಆದರೂ ಬಡವರಿಗೆ ಸೈಟು ಕೊಟ್ಟಿಲ್ಲ.

ಎಳಂದೂರು ತಾಲ್ಲೂಕು ಜಹಗೀರಿ ತಾಲ್ಲೂಕ್ ಆಗಿದ್ದುದರಿಂದ ಅಲ್ಲಿ ಯಾವ ವಿಧವಾದ ರಸ್ತೆ ಕೆಲಸಗಳೂ ನಡೆದಿಲ್ಲ. ಅದಕ್ಕಾಗಿ ನಾನು ಈ ಒಂದೆರಡು ಕಾರ್ಯಗಳನ್ನು ಕೈಕೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಒಂದನೆಯದಾಗಿ ಹೊನ್ನೂರಿನಿಂದ ಕನ್ನಕಳ್ಳಿ ಮಾರ್ಗವಾಗಿ ಅಗರಕ್ಕೆ ಹೋಗುವ ರಸ್ತೆ, ಎರಡನೆಯದಾಗಿ ಮದ್ದೂರಿನಿಂದ ಕೊಮಾರನಪುರಕ್ಕೆ ಹೋಗುವ ರಸ್ತೆ ಮತ್ತು ಎಳಂದೂರಿನಿಂದ ಎರಗೌಯ್ಯನ ಕೆರೆಯೋಗೆ ಹೋಗುವ ರಸ್ತೆ ಇವುಗಳನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮೈಸೂರಿನಲ್ಲಿರುವ ವೃತ್ತಿಶಿಕ್ಷಣ ಶಾಲೆಯಲ್ಲಿ ವಿದ್ಯಾರ್ಥಿನಿಯರಿಗೆ ಹೆಚ್ಚು ಸೀಟುಗಳನ್ನು ಕೊಡಬೇಕು. ಗ್ರಾಮೋದ್ಯೋಗಗಳನ್ನು ಗ್ರಾಮಗಳಲ್ಲಿ ಹೆಚ್ಚಿಗೆ ಬೆಳೆಯಿಸಿ ಕೈಕಸಬುಗಳನ್ನೂ ಕಲಿಸಲು ಅವಕಾಶ ಮಾಡಿಕೊಡಬೇಕು. ಇದರಿಂದ ನಮ್ಮ ಜನಾಂಗದವರಿಗೆ ಹೆಚ್ಚಿನ ಸಹಾಯ ಮಾಡಿದಂತಾಗುವುದು. ಏಕೆಂದರೆ ವಿಶಿಷ್ಟ ಕೈಕಸಬುಗಳನ್ನೂ ನಮ್ಮ ಹರಿಜನರೇ ಮಾಡುವವರು. ಆದ್ದರಿಂದ ಇತ್ತ ಕಡೆಗೆ ಗಮನ ಕೊಡಬೇಕೆಂದು ಪ್ರಾರ್ಥಿಸಿ, ಕೊನೆಯದಾಗಿ ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದನೆಗಳನ್ನರ್ಪಿಸುತ್ತೇನೆ.

*ಶ್ರೀಮತಿ ದ್ಯಾವಮ್ಮ (ಗಂಡಸಿ).—ಅಧ್ಯಕ್ಷರೇ, ನಮ್ಮ ಮುಂದಿರುವ 1958-59ನೆಯ ಸಾಲಿನ ರೂರಲ್ ಡೆವಲಪ್‌ಮೆಂಟ್ ಇಲಾಖೆಯ ಅಂದಾಜು ಬೇಡಿಕೆಗೆ ನನ್ನ ಅನುಮತಿಯನ್ನು ಕೊಡುತ್ತಾ, ಒಂದೆರಡು ಸೂಚನೆಗಳನ್ನು ತಮ್ಮ ಮುಂದಿಡುತ್ತೇನೆ.

ಅನೇಕ ಗ್ರಾಮಾಂತರಗಳಲ್ಲಿ ರಸ್ತೆ ಕಾಮಗಾರಿಗಳು ನಡೆಯದೆ ಸಂಚಾರಕ್ಕೆ ತೊಂದರೆಯಾಗಿರುತ್ತೆ. ನಮ್ಮ ಕ್ಷೇತ್ರದಲ್ಲಿ ಕೆಲವು ಹಳ್ಳಿಗಳಿಗೆ ಕೊಳಾಯಿ

ಮೂಲಕ ನೀಡಲು ಒದಗಿಸುವ ಅಂದಾಜು ನಡೆದು ಕಾರ್ಯಗತವಾಗದೆ ಮೂರು-ನಾಲ್ಕು ವರ್ಷದಿಂದ ಹಾಗೆಯೇ ಉಳಿದಿದೆ. ಎರಡನೆಯದಾಗಿ ಸುಮಾರು 20,000 ರೂಪಾಯಿಗಳ ವಾರ್ಷಿಕ ಆದಾಯವಿರುವ ಗಂಡಸಿ ಸಂತೆಮೈದಾನಕ್ಕೆ ನೀರು ಒದಗಿಸುವ ಅಂದಾಜು 92,000 ರೂಪಾಯಿನ ಕಾಮಗಾರಿಯಾಗಿ ನಾಲ್ಕು-ಐದು ವರ್ಷದಿಂದ ಕಾರ್ಯಗತವಾಗದೆ ನಮ್ಮ ಜಿಲ್ಲೆಯ ಜನರಿಗೆ ನಿರಾಶೆಯಾಗಿರುತ್ತದೆ. ಈ ವಿಷಯವನ್ನು ತಮ್ಮ ಗಮನಕ್ಕೆ ತಂದು ಒಂದು ವರ್ಷವಾದರೂ ಇನ್ನೂ ಏನೂ ಕಾರ್ಯಕ್ರಮ ಕೈಕೊಂಡಿಲ್ಲ. ದಯವಿಟ್ಟು ಸರ್ಕಾರದವರು ಕೂಡಲೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತಾ ನನ್ನ ಭಾಷಣವನ್ನು ಮುಗಿಸುತ್ತೇನೆ.

[Sri J. P. SARWESH (Serum) spoke in Hindi].

6 P.M.

*Sri M. P. PATIL (Minister for Revenue).—Sir, some of the Hon'ble Members raised some points regarding the Registration Department. The one point raised by Hon'ble Member Sri Mallaradhya in the course of his budget speech was that the Government should not make a profit out of the Registration Department. This principle cannot be accepted unless the financial situation of the State improves. It is found that not only in this State but in other States also, which are in a better position financially, such a principle is not followed. For instance in Andhra, revenue out of this Department is 46 lakhs and the expenditure is only 20 lakhs. In Madras revenue is 61 lakhs and expenditure 39 lakhs. In Bombay revenue is 47 lakhs and expenditure 20 lakhs. In Mysore revenue is 21 lakhs and expenditure 13 lakhs. It will therefore be evident that this question is treated as a taxation measure and not as a self-sufficient department.

Hon'ble Member Sri Nagan Gowda raised a question regarding the sub-registry office in Sandur Taluk. That question is under consideration and to the extent possible, unless there are other difficulties, that office will be continued. He also raised the question of appointing District Registrars for inspecting the sub-registries in the districts. That question is under the consideration of Government. Hon'ble Member may be knowing that two such posts have been created, one for Bangalore and one for Mysore, and these posts are continued. The question of appointing such District Registrars for the whole State is under the consideration of Government and the matter has been referred to Sri Gorwala, who is looking into these hings.

Hon'ble Member Sri Venkatai Gowda raised the question of a Sub-Registrar's Office at Mysore. He said that there is more than sufficient work in that office and therefore two offices should be opened. This depends upon the work that is existing in the Sub-Registrar's office. If it is found necessary to open a new office in view of the increase in volume of work, such a suggestion would be considered. But it cannot be done solely with a view to provide more conveniences to the public. It depends on the volume of work.

ಶ್ರೀ ಯು. ಎಂ. ಮಾದಪ್ಪ.—ಮೆದ್ರಾಸ್ ಸ್ಟೇಟ್‌ನಲ್ಲಿ ಎರಡು ಸಾವಿರ ಡಾಕ್ಯುಮೆಂಟಿಗೆ ಒಂದು ಆಫೀಸ್ ಓಪನ್ ಮಾಡಬೇಕೆಂದಿರುವಾಗ ಕಂಪೇರ್ ಮಾಡಬೇಕಲ್ಲವೇ? ಕಂಪೇರ್ ಮಾಡಿ ಹೇಳಿ, ಒಪ್ಪಿಕೊಳ್ಳುತ್ತೇನೆ.

Sri M. P. PATIL.—We have our own standards. This question will be considered according to our standards.

Sri G. VENKATAI GOWDA.—Has not the Inspector General of Registration suggested that this office should be bifurcated?

Sri M. P. PATIL.—That question will be considered on the basis of the volume of work in the office.

Sri U. M. MADAPPA.—My question is whether the Government considers the recommendation of the I. G. of Registration as reasonable or not. Is he not a man of experience and should not his recommendation carry some value?

Sri M. P. PATIL.—That is a matter for opinion. After all the recommendations have to be considered by Government, keeping all the points in view.

Sri U. M. MADAPPA.—As Head of the Department, does he not have full knowledge of the work in the office?

Sri M. P. PATIL.—Ultimately it is the Government that decides. We cannot accept a thing simply because the Head of the Department has suggested it.

ಶ್ರೀ ಯು. ಎಸ್. ನಾಯಕ್.—ಸ್ವಾಮಿ, Registration Manual, Sub-Registrar ರವರ ಆಫೀಸಿಗೆ ಕಳುಹಿಸುವ ಕ್ರಮವಿಲ್ಲವೇ?

Sri M. P. PATIL.—I think so.

The other question was about corruption prevailing in the Department. Government is taking all possible steps to eradicate corruption, not only in this department but in all departments and if in any case it is found that a particular officer is corrupt, severe punishment is meted out to him.

ಶ್ರೀ ಇ. ಪುಂಡಲೀಕಪ್ಪ.—ಬೆಳಗಾಂವಿ, ಧಾರವಾಡ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಪ್ರತಿಯೊಂದು ಸಬ್ ರಿಜಿಸ್ಟ್ರಾರರ ಆಫೀಸಿನಲ್ಲಿಯೂ 100 ರೂಪಾಯಿ extra money ಕೊಡಬೇಕೆನ್ನುತ್ತಾರೆ. ಅದನ್ನು ಕಡಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ಪಿ. ಪಾಟೀಲ್.—ಹಾಗೆ ಇಲ್ಲ.

ಶ್ರೀ ಯು. ಎಂ. ಮಾದಪ್ಪ.—ಶ್ರೀ ಮಲ್ಲಾರಾಧ್ಯರು ಹೇಳಿದರು—ಸಬ್‌ರಿಜಿಸ್ಟ್ರಾರ್ ಆಫೀಸಿನಿಂದ ಬರತಕ್ಕಂಥ ಹಣವನ್ನು ಉತ್ಪತ್ತಿಯಾಗಿ ಪರಿಗಣಿಸಬಾರದೆಂದು. ಈ ಹಣವನ್ನು ಟ್ಯಾಕ್ಸ್ ಎಂದು ಕನ್ಸಿಡರ್ ಮಾಡುತ್ತೀರೋ ಅಥವಾ ಫೀಸ್ ಎಂದು consider ಮಾಡುತ್ತಿರೋ? Are the Government collecting fees with the intention that it should serve at cost?

Sri M. P. PATIL.— There is no such distinction. The fees are levied and collected ; whether it is treated as fees or tax, it does not matter. I can give the instances of other States also.

Sri U. M. MADAPPA.—Was it not, at the time this piece of legislation was brought forward, the intention, that it should serve at cost?

Sri M. P. PATIL.—No.

Sri T. MARIAPPA (Minister for Finance).—Mr. Speaker, Sir, I am mainly concerned with the Demands Nos. 1 and 8. Demand No. 1 relates to Taxes and Income Other than Corporation Tax and Estate Duty and Demand No. 8 relates to Other Taxes and Duties. I thought there would be some discussion on these every vital taxation measures, raising some vital ponits about taxation policy. I am glad that on the whole the members are satisfied with the policy that we have been following and I take it that therefore they have not raised fundamental questions about it. But all the same I have taken note of the underlying principles of those cut motions. Therefore, I would like to say briefly what exactly was the policy that prompted us to give these figures and to include certain provisions under those heads. With a full sense of responsibility I make this statement. I do not deny that Hon'ble Members have a right to criticise. In fact, we invite construc- tive criticisms so that we may know where we stand and we may assess opinion in this House and accordingly modify our policies. Even if the House had given time for further discussion, I am quite certain that vital questions could not have arisen out of the policies that we have been following with regard to these items covered by Demands Nos. 1 and 8. So far as Demand No. 1 is concerned, only two items are included in it, namely, taxes on agricultural income and share of net proceeds assigned to the State. Nobody has bothered with regard to Estate Duty because it is collected under a Central Act. Therefore, the House is vitally concerned with taxes on agricultural income. After all, it is only recently during the last session that the House has approved of a common taxation measure so far as Agricultural Income Tax is concerned. In this brief time I do not think any member has discovered any vital difficulty either in the law or in the administration to air his grievance. But I particularly noticed Sri Narasimhe Gowda, who is always vigilant about things other than what particularly relates to him, making a reference to this subject. With all respect to him, he seems to be most concerned with the Agricultural Income-Tax on poor peasants in Channarayapatna Taluk Constituency. His constituency is the one where except for cocoanuts all other things are dry lands. Therefore, there are not many people who are subject to the assessment of agricultural income-tax. If coffee planters had raised this question, I would have seen the

validity of the objection, but my friend comes from a constituency like mine, namely, Nagamangala, where once in six months there will be famine. Therefore, I am glad that at least he is vigilant with regard to the poor peasants elsewhere who are subject to agricultural income-tax, but he has not given me even one instance where there has been arbitrary assessment or where poor peasants have been subjected to harassment. I would positively enquire into that matter. I have issued very strict instructions that the officers should not unnecessarily harass the poor peasants. Below the minimum prescribed in the Act they need not bother about. They must only bestow a little more care on people who came under marginal assessment. Above that margin, they must take particular care to see that every rich man pays his tax to the Treasury. Therefore, so far as the poor peasants are concerned, he may rest assured—I give this assurance through the Speaker—that no poor peasants will be harassed.

He has also raised the question of corruption.

When the peasants are poor, the question of corruption does not arise because how can they afford to pay? Another fact is that the power to assess agricultural income-tax is given only to the Assistant Commissioner and not to his hirelings or to any subordinate or non-gazetted officer. The Assistant Commissioner is a sufficiently high and well-placed Gazetted Officer. If the Hon'ble Member can pass on one instance of an Assistant Commissioner who was had recourse to corruption, we will give him leave and immediately order an enquiry. I would, therefore, beg of him to remember that fewer such baseless allegations the better it will be for the country.

I will now pass on to my friend Dr. Nagan Gowda who is very familiar with the administrative machinery and how it functions. He has raised the question of sugarcane cess and he wanted a fund to be created for the sugarcane cess collected perhaps in his home constituency. In fact, I may assure my Hon'ble friend that a uniform Sugarcane Cess Bill is ready and under that Bill we want to have a fund created for this purpose so that all the collections can go to it.

I will now pass on to Demand No. 8 Other Taxes and Duties. Even here I expected a lot of constructive suggestions but the members are thoroughly satisfied because even during the budget I find not much criticism directed against this particular Demand. This Demand relates to taxes on luxuries, to taxes on entertainments, amusements, betting and gambling.

My friend Sri Muniraju raised question with regard to electricity duties based perhaps on a promise made by a distinguished colleague of mine between 1947 to 1952, the late lamented Sri Bhashyam. It is true that then we were in a very happy position and we were really in an affluent condition in those days when development plans had not taken shape. Now, we want to push on with development projects and want to raise the maximum internal resources. If the House can give me any alternative income, then I have no objection at all to that. Therefore, there is no alternative but to explore fully the possibilities under the Electricity Duties Act. We cannot go beyond this without the permission of house. Without coming to you, we have explored it to the maximum extent. Therefore, we have extended it to domestic consumption of electricity. After all, we do not get much from it. Our revised estimate was Rs. 36 lakhs and the budget estimate is only Rs. 40 lakhs. I think the House will bear with me and grant this particular request and need not raise much criticism against this particular electricity duty.

Moreover, all other States are falling in line with us. In fact, Mysore was perhaps the first to introduce electricity duty long before the other States thought of. I think, Sir, by this time, people have got accustomed to this and therefore the House will bear with me in voicing any trenchant criticism so far as this item is concerned.

There are no other criticisms, I would like only to conclude by saying that

(SRI T. MARIAPPA)

our taxation policy is sound. I would only quote a few figures for the year 1957-58 the percentage of per capita taxation with regard to other States. Sri M. C. Narasimhan is not here. I would like to tell him that our policy is more progressive than he wants the country to believe. The percentage of direct taxation to total revenue in a few other states is as follows:

State	*Percentage of direct taxation to total Revenue*	*Percentage of indirect taxation to total Revenue.*	*Total taxes to total Revenue*
Andhra ...	29	36·3	65·3
Bombay ...	28·9	40·2	69·1
Mysore ...	27·7	26·9	54·6

Sri G. ANNA RAO.—If the Hon'ble Minister compares U.K. and America, he will find that there the direct taxation is 56 per cent to the total revenue.

Sri T. MARIAPPA.—Sir, it takes another 50 years to compare with U.K. or America. The percentage of western countries will give us a totally distorted picture.

Sri U. M. MADAPPA.—The per capita in other States can be given, Sir.

Sri T. MARIAPPA.—While the percentage of direct taxation as against the indirect taxation is less in Andhra and Bombay, in Mysore, the percentage of direct taxation is a little more than indirect taxation. The figures are 27 per cent and 26·9 per cent. Any prudent person who is very well conversant with any taxation measures and holds progressive views, would certainly appreciate the position of taxation policy in Mysore which is 27·7 and 26·9. Sir, in indirect taxation as my Hon'ble friends are aware, even the poorest is made to pay. In direct taxation, you know how to catch the richest man. Therefore, it is a little higher and it falls on the higher slab income. Even the agricultural income tax falls on higher slab income. Therefore I say Sir, that if Sri Narasimhan had been here now in this House, he would have appreciated the position better.

AN HON'BLE MEMBER.—What about Kerala ?

Sri T. MARIAPPA.—Even in Kerala indirect taxation is higher. I knew that some Hon'ble Members would be interested in what is happening in Kerala. In Kerala, direct taxation is 25·9 per cent and indirect taxation 32·8 per cent. Therefore, in Kerala the poorest contribute to the State Exchequer. That is why I say that our policy is more progressive, more enlightened and less irksome than the one followed either Andhra or Bombay.

I therefore feel certain that the House will vote this Demand without any hesitation.

Sri F. H. MOHSIN.—On a point of order, Sir. My point of order is that the Hon'ble Minister for L.S.G. was found drinking water when the Finance Minister was replying.

Mr. SPEAKER.—After all, Members are allowed to drink water while they are on their legs. But they are not allowed to drink water while they are sitting. That is the circular that has been issued. Of course by chance it may have happened. I hope the rules will be observed properly.

Sri R. CHENNIGARAMAIAH.—I wat preparing for my speech, Sir.

Sri G. VENKATAI GOWDA.—I want to know whether the Government has appointed the agricultnral income-tax officers.

Sri T. MARIAPPA.—All the officers contemplated under the Act the appointed or are invested with powers

Sri B. G. KHOT.—What is the normal conception of the percentage, Sir. The Hon'ble Minister was just quoting figures in regard to the financial postition and was pleased to say that the direct and indirect taxation would amount to 55 per cent. I ask

what should be the normal conception of the percentage of taxation ?

Sri T. MARIAPPA.—Sir, I should say the capacity to bear is the barometer with which we have to measure. To the extent to which we are accustomed, we cannot go beyond 55·6 per cent for the year 1957-58. As the national income increases, the capacity to bear also increases.

Sri G. B. SHANKAR RAO.—So far as agricultural income-tax is concerned in Bombay, it is a new levy I want to ask the Hon'ble Finance Minister whether in the light of the experience that we have gained, he would adopt a modified policy of levying the tax on agricultural income in the near future ?

Sri T. MARIAPPA.—In fact, Sir, hereafter even Madras wants to follow our procedure. They have only what was known as plantation tax. Now they want to levy agricultural income-tax even on foodgrains. Therefore it is a progressive tax.

Sri G. ANNA RAO.—May I know what is the real saving in Mysore and what is left for taxation and what is left for investment ?

Sri T. MARIAPPA.—Sir, in my budget speech itself, I have indicated that we have to set up an organisation to know exactly the position in the Mysore State as such. Against the background of the Indian economic situation which has been given by the Prime Minister in his Budget speech, we have decided our policy. Therefore, we have not got that organisation and the elaborate method of calculating the per capita figures to answer the Hon'ble Members question.

ಶ್ರೀ ಯು. ಎಂ. ಮಾದಪ್ಪ.—1957-58ರಲ್ಲಿ ಸ್ಟೇಟ್ ಫಂಡ್ ರೋಡಿಗೆ 10 ಲಕ್ಷ ರೂಪಾಯಿಗಳನ್ನು ಒತ್ತೆ ಇಟ್ಟಿದ್ದೀರಿ. ಈವರ್ಷ ಏಕೆ ಇಟ್ಟಿಲ್ಲ ?

ಶ್ರೀ ಟಿ. ಮರಿಯಪ್ಪ.—ಅದಕ್ಕೆ ನೋಟೀಸ್ ಬೇಕು.

6-30 P.M.

* ಶ್ರೀ ಆರ್. ಚೆನ್ನಿಗರಾಮಯ್ಯ.—ಅಧ್ಯಕ್ಷರೇ, ನನಗೆ ಸಂಬಂಧಪಟ್ಟ ಇಲಾಖೆಯ ವಿಚಾರದಲ್ಲಿ ಅನೇಕ ಮಹನೀಯರು ಜೋತಾ ಸೂಚನೆಗಳನ್ನು ಕಳಿಸಿದ್ದಾರೆ. ಈ ರೀತಿ ಜೋತಾ ಸೂಚನೆ ಕಳಿಸಿದ ಅನೇಕರಿಗೆ ಇಂದು ಸಭೆಯಲ್ಲಿ ಮಾತನಾಡಲು ಅವಕಾಶ ಸಿಕ್ಕಲಿಲ್ಲ. ಶ್ರೀಮಾನ್ ಮಲ್ಲಾರಾಧ್ಯರವರು, ಶ್ರೀನಿವಾಸ ಶೆಟ್ಟಿಯವರು, ಎಂ. ಲಿಂಗೇಗೌಡರು, ರಾಜಯ್ಯಶೆಟ್ಟಿ, ನಾರಾಯಣಸ್ವಾಮಿ, ಜಿ. ಎನ್. ಪುಟ್ಟಣ್ಣ, ಮಾದಪ್ಪ, ಸುಂತಣಕರ್ ಇವರು ಜೋತಾ ಸೂಚನೆಯನ್ನು ಕಳಿಸಿದ್ದಾರೆ. ಪ್ರತಿಯೊಂದು ಜೋತಾ ಸೂಚನೆಯ ಮೇರೆ ಈಗ ಮಾತನಾಡಲು ಅವಕಾಶವಿಲ್ಲ. ಕೆಲವು ಸದಸ್ಯರಿಗೂ ಸಹ ಮಾತನಾಡಲು ಅವಕಾಶ ದೊರೆಯಲಿಲ್ಲ. ಆದರೆ ಅವರ ತಿಳಿಸಿರತಕ್ಕಂಥ ಅಂಶಗಳನ್ನು ಗಮನಿಸಿ ಎಷ್ಟರ ಮಟ್ಟಿಗೆ ಅವುಗಳನ್ನು ಸರಕಾರದವರು ನಿವಾರಣೆಮಾಡಬಹುದು ಎಂಬುದಕ್ಕೆ ಸರ್ವ ಪ್ರಯತ್ನ ಪಡುತ್ತೇನೆ ಎಂದು ನಾನು ಹೇಳುತ್ತೇನೆ.

ಇಪ್ಪೊತ್ತಿನ ದಿವಸ ಮಾತನಾಡಲಿಕ್ಕೆ ಅವಕಾಶ ಸಿಕ್ಕದೇ ಇದ್ದ ಮಹನೀಯರು ಕೆಲವರು ತಮ್ಮ ಸೂಚನೆಗಳಲ್ಲಿ ತಿಳಿಸಿದ ಅಂಶಗಳನ್ನು ನನಗೆ ತಿಳಿದ ಮಟ್ಟಿಗೆ ಗುರುತುಹಾಕಿಕೊಂಡಿದ್ದೇನೆ. ನನಗೆ ಸಂಬಂಧಪಟ್ಟ ಇರಾಖೆಯ ಈ ಸಮಸ್ಯೆಗಳು ಒಂದೆರಡು ದಿವಸಗಳಲ್ಲಾಗಲೀ ಅಥವಾ ಒಂದೆರಡು ವರ್ಷಗಳಲ್ಲಾಗಲೀ ತೀರ್ಮಾನ ಮಾಡತಕ್ಕಂಥ ಸಮಸ್ಯೆಗಳು ಅಲ್ಲವೇ ಅಲ್ಲ. ಪಂಚಾಯಿತಿ, ರೂರಲ್ ಡೆವಲಪ್‌ಮೆಂಟ್ ಇವು ಒಂದು ದಿವಸದಲ್ಲಿ ಪೂರೈಸಲು ಸಾಧ್ಯವಿಲ್ಲ. ಪಂಚಾಯಿತಿ ಇಷ್ಟು ಜಾಗ್ರತೆ ಪೂರೈಸಲು ಬರುವದಾದರೆ ಆದು ಪಂಚಾಯಿತಿ ಆಗುವುದಿಲ್ಲ. ರೂರಲ್ ಡೆವಲಪ್‌ಮೆಂಟ್ ಯಾವಾಗಲೂ ನಡೆಯತಕ್ಕಂಥಾದ್ದು. ಅದು ನಡೆಯುತ್ತಲೇ ಇರಬೇಕು. ಅದು ಮುಗಿಯುವಂಥದಲ್ಲ. ಯಾವ ಒಂದು ವರ್ಷದಲ್ಲಿ ಬಡ್ಜೆಟ್ ಹಣ ಸಂಪೂರ್ಣವಾಗಿ ರೂರಲ್ ಡೆವಲಪ್‌ಮೆಂಟ್ ಕಾರ್ಯದಲ್ಲಿ ಆಗಲೀ ಪಂಚಾಯಿತಿ ಕಾರ್ಯದಲ್ಲಿ ಆಗಲೀ ರಸ್ತೆಗಳ ಕಾರ್ಯದಲ್ಲಾಗಲೀ ಪೂರೈಸಲಾಗುತ್ತದೆಂದು ಹೇಳಲು ಸಾಧ್ಯವಾಗುವದಿಲ್ಲ. ಅದು ಯಾವ ಸರಕಾರಕ್ಕೂ ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಹೇಳಿರತಕ್ಕಂಥ ನ್ಯೂನತೆಗಳು ವಾಸ್ತವವಾಗಿವೆ. ಅದರಲ್ಲಿ ಏನೂ ತಪ್ಪಿಲ್ಲ. ಕೆಲಸ ಕಾರ್ಯಗಳು ವಿಳಂಬವಾಗಿ ಕೆಲವು ಕಡೆಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಸಕಾಲದಲ್ಲಿ ಕೆಲಸ ನಡೆಸದೆ ಉದಾಸೀನರಾದದ್ದು, ದುರುಪಯೋಗವಾದುದು ಇಂತಹ ನ್ಯೂನತೆಗಳನ್ನು ಸರಕಾರದ ಗಮನಕ್ಕೆ ತರುವುದು ನ್ಯಾಯವಾಗಿದೆ. ನ್ಯೂನತೆಗಳನ್ನು ಸರಿಪಡಿಸುವುದು ನಮ್ಮ ಕರ್ತವ್ಯವಾಗಿದೆ. ಈ ಸಂದರ್ಭದಲ್ಲಿ ಭಾಷಣ ಮಾಡಿದಂಥ ಸದಸ್ಯರು ಅನೇಕ ವಿಷಯಗಳನ್ನು ಹೇಳಿದ್ದಾರೆ.

ಶ್ರೀಮಾನ್ ಚಾಮಯ್ಯನವರು ಮಾತನಾಡುತ್ತಾ ಹಳ್ಳಿಗಾಡಿನಲ್ಲಿ ಕುಡಿಯುವ ನೀರಿನ ಭಾವಿಗಳನ್ನು ಮಾಡಿಕೊಡಬೇಕು, ಪಂಚಾಯಿತಿ ಮಾಡತಕ್ಕಂಥ ಡ್ರೇನೇಜ್ ಕೆಲಸವನ್ನು ಸಂಪೂರ್ಣವಾಗಿ ಸರಕಾರದ ದುಡ್ಡಿನಿಂದ ಮಾಡಬೇಕು, ಪಂಚಾಯಿತಿ ದುಡ್ಡಿನ ನಿರೀಕ್ಷಣೆ ಮಾಡಬಾರದು ಎಂದು ಅಭಿಪ್ರಾಯ ಕೊಟ್ಟರು. ಈಗಾಗಲೇ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಅರ್ಥ ಸಚಿವರು, ಹಳ್ಳಿಗಾಡಿನಲ್ಲಿ ನೀರಿನ ಸೌಕರ್ಯ ಕಲ್ಪಸಿ ಕೊಡುವುದಕ್ಕಾಗಿ ಕುಡಿಯುವ ಭಾವಿಗಳನ್ನು ಮಾಡಿಸಿಕೊಡುವುದಕ್ಕಾಗಿ ಸರಕಾರ 20 ಲಕ್ಷ ರೂಪಾಯಿಗಳನ್ನು ಈ ವರ್ಷದ ಬಡ್ಜೆಟ್ಟಿನಲ್ಲಿ ಇಟ್ಟಿದ್ದಾರೆ. ಹಿಂದಿನ ವರ್ಷ 12ಲಕ್ಷ ರೂಪಾಯಿ ಇದ್ದಿತು. ಹಳ್ಳಿಗಳಲ್ಲಿ ಕುಡಿಯುವ ನೀರಿನ ಭಾವಿಗಳ ಸೌಕರ್ಯವನ್ನು ಒದಗಿಸಿಕೊಡಲು ಪಂಚಾಯಿತಿಗಳಿಂದ ಏನೂ ಹಣ ನಿರೀಕ್ಷಣೆ ಮಾಡದೆ ಸರ್ಕಾರದ ಖರ್ಚಿನಿಂದಲೇ ಕೆಲಸ ನಡೆಯುತ್ತಾ ಇದೆ. ಪಂಚಾಯಿತಿಗಳಿಂದ ಹಣ ಕೇಳುತ್ತಿಲ್ಲ. ಸಂಪೂರ್ಣವಾಗಿ ಸರಕಾರದ ಖರ್ಚಿನಿಂದಲೇ ಮಾಡುತ್ತಿದ್ದೇವೆ. ಡ್ರೇನೇಜ್ ಕೆಲಸಕ್ಕೆ ಮಾತ್ರ ಪಂಚಾಯಿತಿಗಳಿಂದ

(ಶ್ರೀ ಆರ್. ಚೆನ್ನಿಗರಾಮಯ್ಯ)

ಸ್ವಲ್ಪ ಹಣ ಕೇಳಲಾಗುತ್ತದೆ. ಕೆಲವು ಕಡೆ lumpsum grant ಆಗಿ ಡ್ರೇನೇಜ್ ಕೆಲಸವನ್ನು ಸಹ ಮಾಡಿಸುತ್ತಿದ್ದೇವೆ.

ಒಬ್ಬ ಸದಸ್ಯರು.—ಸ್ವಾಮಿ, Water supply scheme ಗಾಗಿ ¼ quota ಕೇಳುತ್ತಿರಲಿಲ್ಲವೇ?

ಶ್ರೀ ಆರ್. ಚೆನ್ನಿಗರಾಮಯ್ಯ.—National Water Supply Scheme ಕೇಂದ್ರ ಸರ್ಕಾರದವರ ದ್ದಾಗಿರುವುದರಿಂದ ಅದಕ್ಕಾಗಿ 1/3 ಭಾಗ local contribution ಕೊಡಬೇಕಾಗುತ್ತದೆ.

ಒಬ್ಬ ಸದಸ್ಯರು.—National Water Supply Scheme ಅಂತೂ ಸರಿ. ಸಾಮಾನ್ಯವಾಗಿ water supply schemeಗೂ ಸಹ contribution ಕೇಳುತ್ತೀರಿ.

ಶ್ರೀ ಆರ್. ಚೆನ್ನಿಗರಾಮಯ್ಯ.—ಹಾಗಿದ್ದರೆ ಅದನ್ನು ಪರಿಶೀಲನೆ ಮಾಡುತ್ತೇನೆ. ಈ ವರ್ಷ ಈ ಕೆಲಸಕ್ಕಾಗಿ 20 ಲಕ್ಷ ರೂಪಾಯಿಗಳನ್ನು ಬಡ್ಜೆಟ್ಟಿನಲ್ಲಿ ಒದಗಿಸಿದೆ.

Sri J. P. SARWESH.—Does this include separate wells for Harijans also?

Sri R. CHENNIGARAMAIAH.—Separate wells wherever possible. Otherwise common wells.

ಇನ್ನು ಬೋರ್‌ವೆಲ್ಸ್ ತೆಗೆಸಬೇಕೆಂಬ ವಿಚಾರವನ್ನು ಶ್ರೀಮಾನ್ ಕೆಂಚಪ್ಪನವರು ಮತ್ತು ಶ್ರೀಮಾನ್ ಚಾಮಯ್ಯನವರು ಹೇಳಿದರು. ಬೋರ್‌ವೆಲ್ಸ್ ತೆಗೆಸುವ ಕೆಲಸವನ್ನು ಮಾಡುತ್ತಾ ಇದ್ದೇವೆ.

ಒಬ್ಬ ಸದಸ್ಯರು.—ಎಷ್ಟು ತೆಗೆಸಿದ್ದೀರಿ? ಒಂದು ಕಡೆ ಮಾತ್ರ ಕೆಲಸ ನಡೆಯುತ್ತಿದೆ ಅಲ್ಲವೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಪಂಚವಾರ್ಷಿಕ ಯೋಜನೆಯಲ್ಲಿ ನಿಯೋಜಿತ ಮಾಡಿದ ಹಾಗೆ ಕುಡಿಯುವ ನೀರಿನ ಬಾವಿಗಳ ಸೌಕರ್ಯವನ್ನು ದೇಶದ ಎಲ್ಲಾ ಭಾಗದಲ್ಲೂ ಒದಗಿಸಲಾಗುತ್ತದೆ.

ಒಬ್ಬ ಸದಸ್ಯರು.—ಹಾಗಾದರೆ ಎಲ್ಲಾ ಭಾಗದಲ್ಲೂ ಒದಗಿಸುತ್ತೀರಾ? ಈ ಎರಡನೆಯ ಯೋಜನೆಯ ಎರಡು ವರ್ಷಗಳಲ್ಲಿ ಯಾವ ಯಾವ ಊರುಗಳಲ್ಲಿ ಎಷ್ಟೆಷ್ಟು ಕೆಲಸ ನಡೆದಿದೆ ಹೇಳುತ್ತೀರಾ?

ಅಧ್ಯಕ್ಷರು.—ಈ ರೀತಿ ಪ್ರಶ್ನೋತ್ತರಗಳಿಗೆ ಅವಕಾಶ ಕೊಡುವುದು ಸರಿಯಲ್ಲ. ಮಾನ್ಯ ಮಂತ್ರಿಗಳು ತಮ್ಮ ಭಾಷಣವನ್ನು ಮುಂದುವರಿಸಬೇಕು.

ಶ್ರೀ ಆರ್. ಚೆನ್ನಿಗರಾಮಯ್ಯ.—ಕಡಮೆ ಖರ್ಚಿನಲ್ಲಿ National Rural Water Supply Scheme ಪ್ರಕಾರ ಸಾಮಿರಕ್ಕೆ ಮೇಲ್ಪಟ್ಟು ಜನ ವಸತಿ ಇರತಕ್ಕ ಹಳ್ಳಿಗಳಲ್ಲಿ ಈ ಯೋಜನೆಯನ್ನು ಕಾರ್ಯಗತ ಮಾಡತಕ್ಕದ್ದಾಗಿದೆ. ಶೇಕಡ 75ರಷ್ಟು ಭಾಗ ಅಂದಾಜಾಗಿ ಸ್ಕೀಮು ಜಾರಿಗೆ ತರಲಾಗುತ್ತಿದೆ. ಈಗಾಗಲೇ 17 ಲಕ್ಷ ರೂಪಾಯಿ ಖರ್ಚಾಗಿದೆ. ಪೂರ್ತಿ ಹಣ ಬಾವಿಗಳಿಗಾಗಿಯೇ ಕೊಟ್ಟಿದೆ. ಇದಕ್ಕಾಗಿ ಮೊಟ್ಟ ಮೊದಲನೆಯದಾಗಿ ಒಂದು ಲಿಸ್ಟು ತಯಾರುಮಾಡಿ ಕಳಿಸಲಾಗಿದೆ. ಕೇಂದ್ರ ಸರ್ಕಾರಕ್ಕೆ ಎರಡನೆಯ ಲಿಸ್ಟನ್ನೂ ಸಹ ಕಳಿಸಿದ್ದೇವೆ. ಈ ಸ್ಕೀಮು 100 ಹಳ್ಳಿಗಳಿಗೆ ಅನ್ವಯಿಸುತ್ತದೆ. ಸ್ವಲ್ಪ ದಿವಸಗಳಲ್ಲಿಯೇ ಅದು ಮಂಜೂರಾಗಿ ಬರುತ್ತದೆಂಬ ಭರವಸೆಯಿದೆ. ಈಗಾಗಲೇ 20 ಲಕ್ಷ ರೂಪಾಯಿ ಅಡ್‌ವಾನ್ಸ್ ಕೊಟ್ಟಿದ್ದೇವೆ. ಹಳೆಯ ಮೈಸೂರಿಗೆ ಸಂಬಂಧಪಟ್ಟ ಹಾಗೆ ಮೂರನೆಯ ಲಿಸ್ಟನ್ನು ತಯಾರುಮಾಡಲಾಗುತ್ತಿತ್ತು. ಆದರೆ, ಅಷ್ಟರಲ್ಲಿಯೇ ಹೊಸಪ್ರದೇಶಗಳು ಬಂದು ವಿಶಾಲ ಮೈಸೂರು ನಿರ್ಮಾಣವಾದುದರಿಂದ ಅದನ್ನು ಪುನಃ ಪರಿಶೀಲಿಸಿ ತಯಾರು ಮಾಡಬೇಕಾಯಿತು. ಅದಕ್ಕಾಗಿ ಸ್ವಲ್ಪ ಕಾಲ ವಿಳಂಬವಾಗಿದೆ. ಆದಷ್ಟು ಜಾಗ್ರತೆ ಈ ಮೂರನೆಯ ಲಿಸ್ಟನ್ನು ಕೇಂದ್ರ ಸರ್ಕಾರಕ್ಕೆ ಮಂಜೂರಾತಿಗಾಗಿ ಕಳುಹಿಸಿಕೊಡುತ್ತೇವೆ.

ಇನ್ನು ಶ್ರೀಮತಿ ದ್ಯಾವಮ್ಮನವರು ಗಂಡಸಿಯಲ್ಲಿ ಕುಡಿಯುವ ನೀರಿನ ಬಾವಿಗಳ ಸೌಕರ್ಯ ಬಹಳ ಅಗತ್ಯವಾಗಿದೆ ಎಂದು ಹೇಳಿದ್ದಾರೆ. ಇದು ಎರಡನೆಯ ಲಿಸ್ಟ್‌ನಲ್ಲಿ ಸೇರ್ಪಡೆಯಾಗಿದೆ. ಆದಷ್ಟು ಜಾಗ್ರತೆ ಅಲ್ಲಿರುವ ತೊಂದರೆಯನ್ನು ನಿವಾರಿಸಲಾಗುವುದು ಎಂದು ನಾನು ಭರವಸೆಯನ್ನು ಕೊಡುತ್ತೇನೆ.

ಶ್ರೀ ಮಾ ಕ ಮಲ್ಲಿಕಾರ್ಜುನಸ್ವಾಮಿಯವರು ಪ್ರಥಮವಾಗಿ ಈ ಸಭೆಯಲ್ಲಿ ಬಹಳ ಉತ್ಕೃಷ್ಟವಾಗಿ ಮಾತನಾಡಿದರು. ಅವರ ಭಾಷಣವನ್ನು ಕೇಳಿ ನನಗೆ ಬಹಳ ಆನಂದವಾಯಿತು. ಅವರು ಪ್ಲಾಟ್‌ಫಾರ್ಮ್ ಮೇಲೆ ಬಹಳ ಚೆನ್ನಾಗಿ ಮಾತನಾಡುತ್ತಾರೆಂದು ನಾನು ಕೇಳಿದ್ದೆ. ಇಂದು ಈ ಸಭೆಯಲ್ಲಿ ಅವರ ಭಾಷಣವನ್ನು ಕೇಳುವ ಸನ್ನಿವೇಶ ದೊರೆಯಿತು. ನಮ್ಮ ಜನರಲ್ಲಿ ಇಷ್ಟು ಚೆನ್ನಾಗಿ ಮಾತನಾಡುವವರು ಇಷ್ಟ ಅರ್ಥಪೂರ್ಣವಾಗಿ ಚರ್ಚೆ ಮಾಡುವ ವ್ಯಕ್ತಿ ಇದ್ದಾರೆಂದು ನನಗೆ ಬಹಳ ಸಂತೋಷವಾಗಿದೆ. ಅವರು ಅನೇಕ ಒಳ್ಳೆಯ ವಿಷಯಗಳನ್ನು ತಿಳಿದುಕೊಂಡಿದ್ದಾರೆಂದು ಅವರ ಇಂದಿನ ಮೊಟ್ಟಮೊದಲನೆಯ ಭಾಷಣ ಈ ಸಭೆಯಲ್ಲಿ ಕೇಳಿದ ಮೇಲೆ ನನಗೆ ಗೊತ್ತಾಯಿತು. ಅವರು ತಮ್ಮ ಭಾಷಣದಲ್ಲಿ ಅನೇಕ ಮಹತ್ವ ವಿಷಯಗಳನ್ನು ಹೇಳಿದ್ದಾರೆ.

ಮೊಟ್ಟ ಮೊದಲನೆಯದಾಗಿ ಹಾಸ್ಟೆಲ್ ವಿಚಾರದಲ್ಲಿ ಹರಿಜನರಿಗಾಗಿ ಪ್ರತ್ಯೇಕ ಹಾಸ್ಟೆಲ್ ಮಾಡದೆ, ಸವರ್ಣೀಯರ ಹಾಸ್ಟೆಲುಗಳಲ್ಲಿ ಹರಿಜನರನ್ನೂ ಸೇರಿಸಿ ಒಂದೇ ಹಾಸ್ಟೆಲಿನ ವಿಸ್ತಾರ ಮಾಡಬೇಕೆಂದೂ ಅದರಿಂದ ಖರ್ಚೂ ಸಹ ಸರಕಾರಕ್ಕೆ ಕಡಮೆಯಾಗುತ್ತದೆಂದೂ ಅವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಶ್ರೀಮಾನ್ ಮಲ್ಲಿಕಾರ್ಜುನ ಸ್ವಾಮಿಯವರು ಹೇಳಿದ ಅಂಶವನ್ನೇ ಶ್ರೀಮಾನ್ ಬಿ. ರಾಚಯ್ಯನವರು ಸಹ ಪುಷ್ಟೀಕರಿಸಿ ಹೇಳಿದ್ದಾರೆ. ಇದು ಬಹಳ ಪ್ರಮುಖ ವಿಚಾರ ಆಗಿರುವುದರಿಂದ ನಾವು ಅದನ್ನು ಗಮನಿಸುತ್ತೇವೆ.

ಇನ್ನು ಹಿಂದುಳಿದವರಿಗೆ ಪ್ರತ್ಯೇಕ ಕಾಲೊನಿಗಳನ್ನು ನಿರ್ಮಿಸುವುದನ್ನು ವಿರೋಧಿಸಿ ಸವರ್ಣೀಯರೊಂದಿಗೆ ಬೆರೆತನವಾಗಿ ವಾಸಿಸುವಂತೆ common colony ವ್ಯವಸ್ಥೆ ಮಾಡಬೇಕೆಂದು ಅವರು ಹೇಳಿದ್ದಾರೆ. ನಮ್ಮ ಸರಕಾರದ ಮತ್ತು ಕೇಂದ್ರ ಸರಕಾರದ ತತ್ವ ವಾದರೂ ಅದೇ ಆಗಿದೆ. ಇದನ್ನ ಮಾಡಲು ಸ್ವಲ್ಪ ಕಷ್ಟವಿದೆ. ಈ ವಿಷಯದಲ್ಲಿ ಸಾಧ್ಯವಾದ ಮಟ್ಟಿಗೆ ಪ್ರಯತ್ನ ಮಾಡುತ್ತೇವೆ. ಅನೇಕ ಕಡೆಗಳಲ್ಲಿ ಜನರು ತಾವಾಗಿಯೇ ಈ ರೀತಿ ವಾಸಮಾಡಲು ಮುಂದೆ ಬಂದಿದ್ದಾರೆ. ಇಂಥ ಸಾಮಾಜಿಕ ಸುಧಾರಣೆಯಾಗ ಬೇಕಾದರೆ ಜನರು ತಾವಾಗಿಯೇ ಮುಂದೆ ಬರ ಬೇಕು. ನಿರ್ಬಂಧದಿಂದ common colony ಮಾಡಲು ಆಗುವುದಿಲ್ಲ. ನಿರ್ಬಂಧದಿಂದ ಅಷ್ಟಾಗಿ social reforms ಆಗುವುದು ಸಾಧ್ಯವಾಗುವುದಿಲ್ಲ. ಸರ್ವರೂ ಇದಕ್ಕೆ ಉತ್ತೇಜನವನ್ನು ಕೊಡುತ್ತಾರೆಂದು ನಾನು ಹೇಳುತ್ತೇನೆ.

ಇನ್ನು ಶ್ರೀಮಾನ್ ಎಚ್. ಕೆ. ಸಿದ್ದಯ್ಯನವರು ಕುಡಿಯುವ ನೀರಿನ ಬಾವಿಗಳ ವ್ಯವಸ್ಥೆ ಮಾಡತಕ್ಕ

ವಿಚಾರದಲ್ಲಿ ಬಹಳ ಒತ್ತಾಯಪೂರ್ವಕವಾಗಿ ಹೇಳಿದ್ದಾರೆ. ಈಗಾಗಲೇ ಈ ವರ್ಷ ಬಜೆಟ್ಟಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆಯ ಯೋಜನೆಗಾಗಿ 20ಲಕ್ಷ ರೂಪಾಯಿಗಳನ್ನು ಒದಗಿಸಿ ಕೊಟ್ಟಿದ್ದೇವೆ. ಕುಡಿಯುವ ನೀರಿನ ಬಾವಿಗಳನ್ನು ಹರಿಜನರಿಗೆ ಒದಗಿಸಿ ಕೊಡುತ್ತೇವೆ. ಮುಂದಿನ ವರ್ಷ ಇನ್ನೂ ಹೆಚ್ಚಿಗೆ ಒದಗಿಸಿಕೊಡುತ್ತೇವೆ. ಬಹು ಮಟ್ಟಿಗೆ ಎಲ್ಲಾ ಕಡೆಗೂ ಹರಿಜನರಿಗೆ ಕುಡಿಯುವ ನೀರಿನ ಬಾವಿಗಳ ಸೌಕರ್ಯವನ್ನು ಒದಗಿಸಿಕೊಡುತ್ತಾ ಇದ್ದೇವೆ. ನಮ್ಮ ದೇಶ ದೊಡ್ಡದು. 28ಸಾವಿರ ಹಳ್ಳಿಗಳು ನಮ್ಮ ದೇಶದಲ್ಲಿವೆ. ಎಲ್ಲಾ ಕಡೆಗೆ ಒಂದೇ ಸಾರಿ ಮಾಡಿಕೊಡುವುದು ಸಾಧ್ಯವಾಗುವುದಿಲ್ಲ. ಆದರೂ ಸಹ ಈ ತೊಂದರೆಯನ್ನು ನಿವಾರಣೆ ಮಾಡಲು ನಾವು ಆದಷ್ಟು ಜಾಗ್ರತೆ ಸರ್ವ ಪ್ರಯತ್ನ ಮಾಡುತ್ತೇವೆ ಎಂದು ನಾನು ಭರವಸೆಯನ್ನು ಕೊಡುತ್ತೇನೆ.

ಶ್ರೀ ಜಂಬಣ್ಣನವರು ಹರಿಜನರಿಗೆ ಇರತಕ್ಕ ನ್ಯೂನತೆಗಳನ್ನು ಹೇಳಿದ್ದಾರೆ. ಇತರ ಮಾನ್ಯ ಸದಸ್ಯರೂ ಹೇಳಿದ್ದಾರೆ. ಆ ನ್ಯೂನತೆಗಳನ್ನು ಬಗೆಹರಿಸಲು ಸರ್ಕಾರ ಹಿಂಜರಿಯುವುದಿಲ್ಲ. ಶ್ರೀ ಸುಬ್ಬಯ್ಯ ನಾಯಕ್ ಅವರು ಏತಕ್ಕೆ ಹೆಲ್ತ್ ಯೂನಿಟ್ಟುಗಳನ್ನು ಒದಗಿಸುತ್ತಿದ್ದಾರೆ, ಎಲ್ಲಿ ಒದಗಿಸುತ್ತಿದ್ದಾರೆ ಎಂಬುದಾಗಿ ಹೇಳಿದರು. ಮುಖ್ಯವಾಗಿ ಹೆಲ್ತ್ ಯೂನಿಟ್ಟುಗಳ ಪ್ರಯೋಜನ ಹಿಲ್ ಟ್ರೈಬ್ಸ್ ಇರುವಕಡೆ ಎಂದು ಹೇಳಬಹುದು. ಅದು ಕೊಳ್ಳೇಗಾಲ, ಕೂರ್ಗ್ ಮುಂತಾದ ಕಡೆಗಳಲ್ಲಿ. ಈ ವರ್ಷ ಈ ಬಾಬಿಗೆ 50 ಸಾವಿರ ರೂಪಾಯಿಗಳನ್ನು ಮಿಸಲಾಗಿಡಲಾಗಿದೆ. ಮುಖ್ಯವಾಗಿ ಹಿಲ್‌ಟ್ರೈಬ್ಸ್ ಕಾಡಿನ ಮಧ್ಯದಲ್ಲಿರುತ್ತಾರೆ. ಅಂತಹ ಕಡೆಗಳಲ್ಲಿರುವವರಿಗೆ ಮೊಬೈಲ್ ಯೂನಿಟ್ಟುಗಳೆಂದು ಮಾಡಿ ಅದರಿಂದ ಪ್ರಯೋಜನವಾಗುವಂತೆ ಮಾಡಬೇಕು. ಅಲ್ಲಿಗೆ ಜೀಪ್‌ನಲ್ಲಿ ಹೋಗಬೇಕಾಗುತ್ತದೆ. ಅವರನ್ನು ಕೇಳುವವರೇ ಇರುವುದಿಲ್ಲ. ಕಾಡಿನಲ್ಲಿ ವಾಸ ಮಾಡುವ ಜನರಿಗೆ ಸೌಕರ್ಯವನ್ನು ಒದಗಿಸಲು ಮೊಬೈಲ್ ಯೂನಿಟ್ಟುಗಳು ಅತ್ಯಾವಶ್ಯಕ. ಇದಕ್ಕಾಗಿ ಈ ವರ್ಷದಲ್ಲಿ 50 ಸಾವಿರ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಒದಗಿಸಲಾಗಿದೆ.

ಅವರು ದಾವಣಗೆರೆಯಲ್ಲಿ ಉಂಟಾಗುತ್ತಿರುವ ಕೆಲವು ನ್ಯೂನತೆಗಳನ್ನೂ ಸಹ ಹೇಳಿದ್ದಾರೆ. ಟ್ರಾನ್ಸ್‌ಫರ್‌ಗಳಿಂದ ಉಪಾಧ್ಯಾಯರಿಗೆ ತೊಂದರೆಯಾಗಿದೆ. ಮನೆಗಳು ಸಿಕ್ಕುವುದಿಲ್ಲ. ಅನೇಕ ಕಡೆಗಳಲ್ಲಿ ಈ ರೀತಿ ತೊಂದರೆ ಇದೆ. ಹರಿಜನ ಉಪಾಧ್ಯಾಯರಿಗೆ ಮಾನ್ಯತೆ ಸಿಕ್ಕುತ್ತಿಲ್ಲ. ಎಲ್ಲರನ್ನೂ ಟೌನಿನಲ್ಲಿಟ್ಟುಕೊಂಡರೆ ಸಾಧ್ಯವಾಗುತ್ತದೆ. ಅವರ ನ್ಯೂನತೆಗಳೆಲ್ಲಾ ಬಗೆ ಹರಿಯುತ್ತವೆ ಎಂಬುದಾಗಿ ಹೇಳಿದರು. ಟೌನಿನಲ್ಲೇ ಆಗಲೀ, ಹಳ್ಳಿಯಲ್ಲೇ ಆಗಲೀ ಈಗ ಮನೆಗಳು ಸಿಕ್ಕುವುದು ಬಹಳ ಕಷ್ಟ. ಆದಷ್ಟು ಶೀಘ್ರವಾಗಿ ಈ ಸಮಸ್ಯೆಯನ್ನು ನಿವಾರಣೆಮಾಡುವುದಕ್ಕೆ ಪ್ರಯತ್ನಪಡುತ್ತೇವೆ. ಎಲ್ಲರಿಗೂ ಮನೆಗಳನ್ನು ಕಟ್ಟಿಸಿಕೊಡುವುದೇ ಒಂದು ದೊಡ್ಡ ಸಮಸ್ಯೆಯಾಗುತ್ತದೆ. ಟೌನಿನಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಹರಿಜನರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಇಟ್ಟುಕೊಳ್ಳುತ್ತೇವೆ. ಪ್ರತ್ಯೇಕವಾಗಿ ಮನೆಗಳನ್ನು ಕಟ್ಟಿ ಕೊಡುವುದಕ್ಕೆ ಸರ್ಕಾರಕ್ಕೆ ಈಗಿನ ಪರಿಸ್ಥಿತಿಯಲ್ಲಿ ಬಹಳ ಕಷ್ಟವಾಗುತ್ತದೆ ಎಂದು ನಾನು ತಿಳಿಸ ಬೇಕಾಗುತ್ತದೆ.

ಇನ್ನು ಶ್ರೀ ದಾನಪ್ಪನವರು ಸ್ವಲ್ಪ ಗುಡುಗು ಮಿಂಚಿನೋಪಾದಿಯಲ್ಲಿ ಭಾಷಣವನ್ನು ಮಾಡಿದರು. ಅದು ಅವರ ಮನಸ್ಸಿಗೆ ಬಹಳ ಒಳ್ಳೆಯ ಭಾಷಣವೆಂದು ತೋರಿರಬಹುದು; ಬಹಳ ಸಿಹಿಯಾಗಿಯೂ ಹಿತವಾಗಿಯೂ ಇತ್ತೆಂದು ತಿಳಿಯಬಹುದು. ಆ ವಿಷಯ ಎಲ್ಲರಿಗೂ ಗೊತ್ತಿದೆ. ಇಲ್ಲಿರತಕ್ಕ ಸದಸ್ಯರಲ್ಲಿ ಯಾರೊಬ್ಬರೂ ಹರಿಜನರ ಮೇಲ್ಮೆಗೆ ವ್ಯತಿರಿಕ್ತವಾಗಿ ಹೇಳುವವರು ಇಲ್ಲ. ಹರಿಜನರಿಗೆ ಎಲ್ಲಾ ವಿಧದಲ್ಲೂ ಸಹಾನುಭೂತಿಯನ್ನು ತೋರಿಸುವವರು ಇದ್ದಾರೆ. ಅವರಿಗೆ ವ್ಯತಿರಿಕ್ತವಾಗಿ ಹೇಳುವವರು ಒಬ್ಬರೂ ಇಲ್ಲ.

Sri J. P. SARWESH.—Yet, the Harijans are where they were.

ಶ್ರೀ ಆರ್. ಚೆನ್ನಿಗರಾಮಯ್ಯ.—ಸದಸ್ಯರು ಹೇಳಿದ ಮಾತು ಎಲ್ಲರಿಗೂ ಗೊತ್ತಿದೆ. ಆ ವಿಷಯ ಸರ್ಕಾರದ ಗಮನದಲ್ಲಿದೆ. ನನ್ನ ಮನಸ್ಸಿನಲ್ಲಿಯೂ ಇದೆ. ಆದರೆ ಶ್ರೀ ದಾನಪ್ಪನವರು ಗುಡುಗು ಮಿಂಚಿನೋಪಾದಿಯಲ್ಲಿ ಜೋರಾಗಿ ಭಾಷಣ ಮಾಡಿದ್ದರಿಂದ ಮೂರು ಕಾಸೂ ಪ್ರಯೋಜನವಾಗಲಿಲ್ಲವೆಂದು ನಾನು ತಿಳಿದಿದ್ದೇನೆ. ಭಾಷೆಯೇ ವ್ಯತ್ಯಾಸವಾಗುವ ಹಾಗೆ ಏನೂ ತೆಲುಗು ಮಾತನಾಡುವವರಂತೆ ಕನ್ನಡದಲ್ಲಿ ಕೆಲವು ಪದಗಳನ್ನು ಭಾಷಣದ ಮಧ್ಯೇ ಮಧ್ಯೇ ಚೌಚೌ ಮಾಡುತ್ತಿದ್ದರು. ಅವರ ಒಂದು ಆರ್ಭಟ ಭಾಷಣದಿಂದ ಇಂತಹ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ನಾವಿರಾರು ವರ್ಷಗಳಿಂದ ಬಂದಿರುವ ಸಮಸ್ಯೆ ತಕ್ಷಣ ಪರಿಹಾರಮಾಡುತ್ತೇವೆಂದರೆ ಅದು ಬರಿಯ ಭ್ರಾಂತಿಯಾಗುತ್ತದೆ. ಕೇವಲ ಇಂತಹ ಭಾಷಣದಿಂದ ಕೆಲಸ ಸಾಧನೆಯಾಗುವುದಿಲ್ಲ. ಇರತಕ್ಕ ಸಮಸ್ಯೆಯನ್ನು ತಿಳಿಸಿ ಕೆಲಸ ಸಾಧನೆಯಾಗುವ ಕ್ರಮವನ್ನು ಕೈಗೊಳ್ಳಬೇಕು. ಅದಕ್ಕಾಗಿ ಎಲ್ಲರ ಸಹಕಾರವನ್ನು ಪಡೆಯಬೇಕು. ಸವರ್ಣ ಹಿಂದೂಗಳು ಮತ್ತು ಅವರು ಒಂದೇ ಎಂದು ಭಾವನೆ ಮಾಡಬೇಕು. ಹಿಂದಿನ ಕಾಲದಲ್ಲಿ ಮಾಡಿದ ತಪ್ಪಿಗೆ ಇವೊತ್ತಿನ ದಿವಸ ಅವರ ಮನಸ್ಸನ್ನು ಚುಚ್ಚುವಂತೆ ಮಾಡುವುದು ಚೆನ್ನಾಗಿಲ್ಲ. ಎಲ್ಲರ ಸಹಕಾರವನ್ನು ತೆಗೆದುಕೊಂಡು ಕೆಲಸವನ್ನು ಮಾಡೋಣ. ಸವರ್ಣ ಹಿಂದುಗಳು ಹಿಂದೆ ಏನು ತಪ್ಪು ಮಾಡಿದ್ದರೂ ಅವರನ್ನು ನಮ್ಮ ಜೊತೆಯಲ್ಲಿ ಕರೆದುಕೊಳ್ಳಬೇಕು. ಲಕ್ಷಾಂತರ ಪ್ರಜೆಗಳು ನೂರಾರು ವರ್ಷಗಳಿಂದ ಈ ಒಂದು ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ನತತವಾಗಿ ದುಡಿದಿದ್ದಾರೆ. ಇನ್ನೊಂದು ಅಂಶವನ್ನು ಅವರು ಹೇಳಿದ್ದಾರೆ. ಕಾಂಗ್ರೆಸ್‌ನವರು ಸ್ವಾತಂತ್ರ್ಯವನ್ನು ಪಡೆದಮೇಲೆ ಎಲ್ಲ್ಲೂದರಲ್ಲಿಯೂ ಮೋಸ ಮಾಡುತ್ತಿದ್ದಾರೆಂದು ಕೆಲವು ಪದಗಳನ್ನು ಉಪಯೋಗಿಸಿದರು. ಅವರಿಗೆ ಎಜುಕೇಷ್ಟ್ ಸಿಕ್ಕುವುದಿಲ್ಲ. ಅದರಿಂದ ಏನೂ ಪ್ರಯೋಜನವಾಗುತ್ತಿಲ್ಲ ಎಂಬುದಾಗಿ ಹೇಳಿದರು. ಈ ಸಮಸ್ಯೆಗಳನ್ನೆಲ್ಲಾ ಬಗೆಹರಿಸುವುದಕ್ಕೆ ಪ್ರಯತ್ನ ಪಡೋಣ. ಶ್ರೀ ದುಗ್ಗಪ್ಪನವರು ಭಾಷಣ ಮಾಡುತ್ತಾ ಕೆಲವು ಅಂಶಗಳನ್ನು ಹೇಳಿದರು. ಹರಿಜನರನ್ನು ವಿದ್ಯಾವಂತರನ್ನಾಗಿ ಮಾಡುವುದಕ್ಕೆ ಧನಸಹಾಯ ಬಹಳ ಮಟ್ಟಿಗೆ ಕಡಮೆ ಇದೆ. ಅವರ ಸಮಸ್ಯೆ ಪರಿಹಾರವಾಗಬೇಕಾದರೆ, ಅವರಿಗೆ ಮೊದಲು ಶಿಕ್ಷಣಕ್ಕೆ ಸಹಾಯಧನ ನೀಡಬೇಕು. ಅವರ ವಸತಿ ಸೌಕರ್ಯಕ್ಕಾಗಿ ಸರ್ಕಾರ ಸಾಲದ ರೂಪವಾಗಿ ಧನ ಸಹಾಯ ಮಾಡಬೇಕು. ಅವರಿಗೆ ಸ್ಕಾಲರ್‌ಷಿಪ್‌ಗಳನ್ನು ಕೊಡಬೇಕೆಂಬುದಾಗಿ ಹೇಳಿದರು. ಅದು ಒಂದು ತರಹ ಒಳ್ಳೆಯ ಸಲಹೆ. ಕೆಲವರ ದೃಷ್ಟಿಯಲ್ಲ ಸಾಮಾನ್ಯವಾಗಿ ಗಂಭೀರವಾಗಿ ಮತ್ತು ಲಕ್ಷಣವಾಗಿ ವಾಸಮಾಡುವುದಕ್ಕೆ ಒಂದು ಮನೆ ಇಲ್ಲದಿದ್ದರೆ, ಅವರು ಕೇವಲ ಹಂದಿ, ನಾಯಿಗಳಂತೆ ಗುಡಿಸಲಿನಲ್ಲಿ, ಇಲಿಯ

(ಶ್ರೀ ಆರ್. ಚೆನ್ನಿಗರಾಮಯ್ಯ)

ಬಿಲದೋಪಾದಿಯಲ್ಲಿರಬೇಕಾದ ಪರಿಸ್ಥಿತಿ ಬರುತ್ತದೆ. ಮಕ್ಕಳು ಮರಿಗಳ ಜೀವನ ನಡೆಸುವುದಕ್ಕೆ ಅವರಿಗೆ ದುಡ್ಡು ಇಲ್ಲ, ಹಣವಿಲ್ಲ. ಬಹಳ ಕಷ್ಟ. ಮನೆ ಕಟ್ಟಿಕೊಳ್ಳುವುದಕ್ಕೆ ಅವರಿಗೆ ಅವಕಾಶ ಸಿಕ್ಕುತ್ತಿಲ್ಲವೆಂದು ಹೇಳತಕ್ಕವರು ಬಹಳವಾಗಿದ್ದಾರೆ. ಮನೆ ಕಟ್ಟುವುದಕ್ಕೆ ನರ್ಕಾರದವರು ಪ್ರಯತ್ನ ಮಾಡಿದ ಮೇಲೆ ನಮ್ಮ ಮೈನೂರಿನಲ್ಲಿ ಸುಮಾರು 50 ಸಾವಿರಕ್ಕೆ ಮೇಲ್ಪಟ್ಟು ಮನೆಗಳು ತಯಾರಾಗಿವೆ.

ಒಬ್ಬ ಸದಸ್ಯರು.—ಮನೆಕಟ್ಟುವುದಕ್ಕೆ ಜಾಸ್ತಿ ಹಣಬೇಕು.

ಶ್ರೀ ಆರ್. ಚೆನ್ನಿಗರಾಮಯ್ಯ.—ಎಷ್ಟು ಸಾಧ್ಯವೋ ಅಷ್ಟನ್ನು ಕೊಡುತ್ತೇವೆ. ಈ ವರ್ಷ ಮನೆಕಟ್ಟುವುದಕ್ಕೆ 28 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಅದರ ಜೊತೆಗೆ ಬೇಕಾದಷ್ಟು ಅವರ ಉನ್ನತಿಗಾಗಿ ಶೀಘ್ರ ಶೀಘ್ರವಾಗಿ ಯೋಜನೆಗಳನ್ನು ಕೈಗೊಳ್ಳುತ್ತಿದ್ದೇವೆ.

ಶ್ರೀ ಎಂ. ಹನುಮಂತಯ್ಯ.—ಮನೆ ಕಟ್ಟಿಕೊಳ್ಳಲು ಕೊಡುವ ಹಣವನ್ನು ಕಾಲಕ್ಕೆ ನರಿಯಾಗಿ ಕೊಡಬೇಕು.

ಶ್ರೀ ಆರ್. ಚೆನ್ನಿಗರಾಮಯ್ಯ.—ಹಿಂದಿನ ವರ್ಷ ಕಾಲಕ್ಕೆ ನರಿಯಾಗಿ ಕೊಡಲಲ್ಲ. ಸ್ವಲ್ಪ ನಿಧಾನವಾಯಿತು. ಹಣ ಮಂಜೂರಾದ ತಕ್ಷಣ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ನಾನಾ ಕಾರಣಗಳಿಂದ ವಿಳಂಬವಾಯಿತು. ಹಿಂದಿನ ವರ್ಷ ಈ ಬಾಬಿಗೆ ಎಷ್ಟು ಹಣವನ್ನು ಕೊಟ್ಟಿತ್ತೋ ಅದರಲ್ಲಿ ಶೇ. 99 ಭಾಗ ಖರ್ಚಾಗಿದೆ ಎಂದು ಭರವಸೆಯನ್ನು ಕೊಡುತ್ತೇನೆ. ಮೂರು ಲಕ್ಷ ಎಂಟು ಸಾವಿರ ರೂಪಾಯಿಗಳಲ್ಲಿ ಮೂರು ಲಕ್ಷ ಐದು ಸಾವಿರ ರೂಪಾಯಿಗಳು ಖರ್ಚಾಗಿವೆ ಎಂದು ಡೆಪ್ಯುಟಿ ಕಮಿಷನರ್ ವರದಿಮಾಡಿದ್ದಾರೆ. ಎಲ್ಲಾ ಜಲ್ಲೆಗಳಲ್ಲೂ ಖರ್ಚಾಗಿದೆಯೆಂದು ವರ್ತಮಾನ ಬರುತ್ತಿದೆ. ಶೇ. 90 ರಷ್ಟು ಭಾಗ ಹಿಂದಿನ ವರ್ಷ ಈ ಬಾಬಿಗೆ ಒದಗಿಸಿದ ಹಣದಲ್ಲಿ ಖರ್ಚಾಗಿದೆಯೆಂದು ಹೇಳಬಹುದು. ಈ ವರ್ಷ ತಡವಾಗುವುದಕ್ಕೆ ಅವಕಾಶವಿಲ್ಲದ ಹಾಗೆ ಈ ತಿಂಗಳು 12ನೆಯ ತಾರೀಖಿನಲ್ಲಿ ಒಂದು ನರ್ಕಾರೀ ಆಜ್ಞೆಯನ್ನು ಇಷ್ಯೂ ಮಾಡಿದ್ದೇವೆ. ನಾಲ್ಕು ತಿಂಗಳ ಗ್ರಾಂಟನ್ನು ಹಂಚಿದ್ದೇವೆ. ಏಪ್ರಿಲ್ ತಿಂಗಳೊಳಗೆ ಎಲ್ಲಾ ಕಡೆಯೂ ಹಣ ಹಂಚಿಕೆಯಾಗಬೇಕೆಂದು ಒಂದು ಆಜ್ಞೆಯನ್ನು ಹೊರಡಿಸಲಾಗಿದೆ. ಕಾಲಕ್ಕೆ ನರಿಯಾಗಿ ಹಂಚಿಕೆಯಾಗುತ್ತದೆಂದು ಭರವಸೆಯನ್ನು ಕೊಡುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಂಚಿಕೆ ಮಾಡುವಾಗ ಹಣವನ್ನು ಒಂದು ತಾಲ್ಲೂಕಿಗೆ ಕೊಡುತ್ತಾರೆ; ಇನ್ನೊಂದು ತಾಲ್ಲೂಕಿಗೆ ಕೊಡುವುದಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ.—ಈ ವಿಚಾರದಲ್ಲಿ ಅಂತಹ ನ್ಯೂನತೆಗಳಿದ್ದರೆ ಅಲ್ಲಲ್ಲಿಯೇ ನರಿಮಾಡಬೇಕು ಹೊಸದಾಗಿ ಕಮಿಟಿ ಮಾಡುವ ಉದ್ದೇಶವೇ ಅದು. ಅವರ ಸಹಕಾರ ತೆಗೆದುಕೊಂಡು ನರಿಮಾಡಬೇಕು. ಎಲ್ಲವೂ ಅವರ ಇಷ್ಟಾನುಸಾರವಾಗಿ ಮಾಡತಕ್ಕದ್ದು. ಪ್ರತಿಯೊಂದು ತಾಲ್ಲೂಕಿನಿಂದ ತಾಲ್ಲೂಕಿಗೆ ಹಣ ಹಂಚುವುದಕ್ಕೆ ನರ್ಕಾರಕ್ಕಾಗುವುದಿಲ್ಲ. ಕ್ರಮ ಕ್ರಮವಾಗಿ ಅದರಲ್ಲಿರುವ ನ್ಯೂನತೆಗಳನ್ನು ನರಿಪಡಿಸೋಣ.

ಇನ್ನು ರೂರಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ಶ್ರೀ ಹನುಮಯ್ಯನವರು ಗುಡುಗಿನಂತೆ ಆರ್ಭಟ ಭಾಷಣ ಮಾಡಿದರು. ಅವರು ಯಾವಾಗಲೂ ಮಂತ್ರಿಗಳು ಹಳ್ಳಿಗಳಿಗೆ ಹೋದಾಗ ಹರಿಜನರ ಕಾಲೋನಿಗಳಲ್ಲಿ ಕ್ಯಾಂಪ್ ಮಾಡಲಿ. ಮೊದಲು ಮಾದರ ಕೆಳಗೆ ಇರುತ್ತೇವೆ ಎನ್ನುತ್ತಿದ್ದವರು ಈಗ ಟಿ.ಬಿ.ಗಳಿಗೇಕೆ ಹೋಗುತ್ತಾರೆ? ಅವರು ಆ ಪ್ರವಾಸ ಮಂದಿರಗಳಲ್ಲಿರುವುದು ಬೇಡ ಎಂಬುದಾಗಿ ಹೇಳಿದರು. ಅದು ಒಳ್ಳೆಯ ಅಭಿಪ್ರಾಯ. ಸುದುದ್ದೇಶದಿಂದ ಹೇಳಿದರು. ಆದರೆ ಎಲ್ಲರೂ ಮಹಾತ್ಮ ಗಾಂಧಿಯವರಂತೆಯೇ ಆಗಿಬಿಟ್ಟರೆ, ಇನ್ನು ಗಾಂಧಿಯವರ ಹೆಸರೇ ಇಲ್ಲದಂತಾಗುತ್ತದೆ.

ಅವರನ್ನು ದೇವರೆಂದು ಪೂಜೆ ಮಾಡುವುದಿಲ್ಲ. ಶ್ರೀ ಹನುಮಯ್ಯನವರು ಗಾಂಧಿಯವರ ಶಿಷ್ಯರು. ಗಾಂಧಿ ಟೋಪಿಯನ್ನು ಹಾಕಿದ್ದಾರೆ. ಎಲ್ಲರೂ ಗಾಂಧಿ ತತ್ವವನ್ನು ಅನುನರಿನುತ್ತಾರೆ. ಒಪ್ಪಿಕೊಳ್ಳುತ್ತೇನೆ. ಹರಿಜನರ ಕೇರಿಯಲ್ಲಿ ಮಿನಿಸ್ಟರು ಕ್ಯಾಂಪ್‌ಮಾಡಿ ಒಂದು ರಾತ್ರಿ ಅಲ್ಲಿದ್ದರೆ ಮಿಂಚಿನ ಹಾಗೆ ನರ್ರನೆ ಅವರಿಗೆ ಇರತಕ್ಕ ಬಡತನ ಹೋಗುತ್ತದೆಯೇ? ನ್ಯೂನತೆಗಳು ಹೋಗುತ್ತವೆಯೇ! ಆರ್ಥಿಕ ಸ್ಥಿತಿ ನರ್ರನೆ ಮೇಲೆ ಏರುತ್ತದೆಯೇ! ಈ ರೀತಿ ತಪ್ಪು ಭಾವನೆ ಇಟ್ಟುಕೊಂಡರೆ ಏನು ಹೇಳುವುದಕ್ಕಾಗುತ್ತದೆ? ಒಂದು ವೇಳೆ ಮಿನಿಸ್ಟರು ಹೋಗಿ ಹರಿಜನರ ಕೇರಿಯಲ್ಲಿ ಕ್ಯಾಂಪು ಮಾಡುತ್ತಾರೆಂದರೆ ಹರಿಜನರೆಲ್ಲರೂ ಸ್ನಾನಮಾಡಿ ಸಾಲ ಸೋಲ ಮಾಡಿ ಬಟ್ಟೆಬರೆತಂದು ಹಾಕಿಕೊಂಡು ಒಂದು ದಿವನ ಶುಭ್ರವಾಗಿರುತ್ತಾರೆ. ಮಿನಿಸ್ಟರು ಹೊರಟುಹೋದ ಮೇಲೆ ಯಥಾ ಪ್ರಕಾರ ಅದೇ ಸ್ಥಿತಿ ಇರುತ್ತದೆ. ಇತ್ತಲಾಗಿ ಇವರು ಸಾಲಮಾಡಿಕೊಂಡು ಪಾಪರ್ ಆಗುತ್ತಾರೆ. ಅಷ್ಟೇ ಹೊರತು ಇನ್ನೇನೂ ಯಾವ ವಿಧವಾದ ಪ್ರಯೋಜನವೂ ಅವರಿಗೆ ಆಗುವುದಿಲ್ಲ.

ಶ್ರೀ ಆಲೂರು ಹನುಮಂತಪ್ಪ.—ಹೋದ ಕಡೆ ಮಂತ್ರಿಗಳು ಬರುತ್ತಾರೆ ಎಂದರೆ ಕೂಡಲೇ ಮುನಿಸಿಪಾಲಿಟಿಗಳು ಏರ್ಪಾಟು ಮಾಡಿಕೊಡುತ್ತಾರೆ. ಅವರು ಎತಕ್ಕೆ ಮಾಡುವುದಿಲ್ಲ?

ಶ್ರೀ ಆರ್. ಚೆನ್ನಿಗರಾಮಯ್ಯ.—ಮುನಿಸಿಪಾಲಿಟಿಯವರು ಮಾಡತಕ್ಕ ಕೆಲನವನ್ನು ಮಾಡಲ, ಎಷ್ಟು ಗ್ರಾಂಟು ಕೊಟ್ಟರೂ ಟೌನಿಗೆ ಉಪಯೋಗಿಸಿ ಹರಿಜನ ಕೇರಿಗೆ ಏನೂ ಮಾಡುವುದಿಲ್ಲ. ಅನೇಕ ಕಡೆ ಮೆಂಬರುಗಳು ಇದ್ದರೂ ಏನೂ ಮಾಡಿನುವುದಿಲ್ಲ. ಮಾಡಿನುವುದಕ್ಕೆ ಏರ್ಪಾಡು ಮಾಡೋಣ. ಹರಿಜನ ಕೇರಿಗೆ ಪ್ರತಿಯೊಬ್ಬ ಮಂತ್ರಿಗಳು ಹೋಗಬೇಕು. ನ್ಯೂನತೆಗಳನ್ನು ನರಿಪಡಿನಬೇಕು. ಒಪ್ಪಿಕೊಳ್ಳೋಣ, ಅದು ನಮ್ಮ ಕರ್ತವ್ಯ, ಡ್ಯೂಟಿ. ಪ್ರತಿಯೊಬ್ಬರೂ ಹೋಗಬೇಕು. ಆದರೆ ಬರಿಯ ಕ್ಯಾಂಪು ಮಾಡುವುದರಿಂದ ಎಲ್ಲಾ ನರಿಹೋಗುವುದಿಲ್ಲ.

ರೂರಲ್ ಡೆವಲಪ್‌ಮೆಂಟ್ ಗ್ರಾಂಟ್ ವಿಚಾರದಲ್ಲಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಅದು ಇಷ್ಯೂ ಆಗುವುದಕ್ಕೆ ಡಿಲೇ ಆಗಿದೆಯೆಂದು ದೊಡ್ಡ ಆಪಾದನೆ ಬಂದಿದೆ. ಮಾನ್ಯ ಸದಸ್ಯರಿಗೆ ತಿಳಿನಬೇಕಾಗಿದೆ. 1955-56, 1956-57, 1957-58 ಈ ಇನಿವಿಗಳಲ್ಲಿ ಯಾವ ಯಾವ ತಾರೀಖಿನಲ್ಲಿ ರೂರಲ್‌ಕಮ್ಯುನಿಕೇಷನ್ ಮತ್ತು ರೂರಲ್ ಹೆಲ್ತ್ ಸ್ಯಾನಿಟೇಷನ್, ಮಿನಲೇನಿಯನ್ ವಾಟರ್ ನಪ್ಲೈ ಗ್ರಾಂಟು ಇಷ್ಯೂ ಆಗಿದೆ ಎಂಬುದನ್ನು ತಿಳಿಸಿದರೆ ಸದಸ್ಯರಿಗೆ ಸ್ವಲ್ಪ ನಮಾಧಾನವಾಗುತ್ತದೆ. ಒಂದೇ ಸಾರಿ ಇಷ್ಯೂ ಮಾಡಿದ್ದಾರೆ. 1955-56ನೆಯ ಜೂಲೈ ತಿಂಗಳಲ್ಲಿ 15ನೆಯ ತಾರೀಖು ಇಷ್ಯೂ ಆಗಿದೆ. ರೂರಲ್ ಕಮ್ಯುನಿಕೇಷನ್ ಡಿನೆಂಬರ್ ತಿಂಗಳಲ್ಲಿ ಒಂದು ಸಾರಿ ಇಷ್ಯೂ ಆಗಿದೆ. ನಾನು ಹೇಳತಕ್ಕದ್ದು ಈ ರೀತಿ ಡಿಲೇ ಮಾಡುವುದರಿಂದ ಜಸ್ಟಿಫೈ ಮಾಡಿಕೊಳ್ಳುತ್ತೇನೆಂದು

ಅಲ್ಲ. ಯಾವುದೂ ಆಗದೆಇರುವುದನ್ನು ಮಾಡಿ ಬಿಟ್ಟಿದ್ದೇವೆ ಎಂದು ಅಲ್ಲ. ಏನೋ ಕಾರಣಗಳಿಂದ ಆಡಳಿತದಲ್ಲಿ ತೊಂದರೆಗಳು ಬಂದರೆ ಆರ್ಥಿತಿ ಡಿಲೇ ಆಗಿವೆಯೇ ಏನಾ ಉದ್ದೇಶಪೂರ್ವಕವಾಗಿ ಡಿಲೇ ಮಾಡುವುದಿಲ್ಲ. ಸ್ಯಾಕ್ಷನ್ ಆದ ತಕ್ಷಣ ಆರ್ಡರ್ ಮಾಡಿದ್ದೇವೆ. ವಾಟರ್ ನಸ್ಸೈ ಸ್ಕೀಮ್ ಗೌರ್ನಮೆಂಟ್ ಆರ್ಡರ್ 12ನೆಯ ತಾರೀಖು ಇಷ್ಯೂ ಮಾಡಿದ್ದೇವೆ. ಡಿಲೇ ಆಗುವುದಕ್ಕೆ ಅವಕಾಶವಿಲ್ಲ. ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಕೊಟ್ಟಿರತಕ್ಕ ವಿಚಾರದಲ್ಲಿ ಮಾನ್ಯ ಸದಸ್ಯರಿಗೆ ಅಂಕಿ ಅಂಶಗಳನ್ನು ಹೇಳಬೇಕಾದರೆ 1944-45ರಲ್ಲಿ ಇದು ಮೊಟ್ಟಮೊದಲು ಪುರುಆಯಿತು. 75 ಸಾವಿರ ಕೊಟ್ಟರು.

ಶ್ರೀ ಜಿ. ದುಗ್ಗಪ್ಪ.—ಈಚಿನ ಅಂಕಿ ಅಂಶಗಳನ್ನು ಹೇಳಿದರೆ ಸಾಕು.

ಶ್ರೀ ಆರ್. ಚೆನ್ನಿಗರಾಮಯ್ಯ.—ಹಳೆಯ ಮೈಸೂರಿನಲ್ಲಿ 1951-52ರಲ್ಲಿ ಕಡಮೆ ದುಡ್ಡು ಕೊಡುತ್ತಿದ್ದು ಹೊಸ ಮೈಸೂರು ಆದಮೇಲೆ 70 ಲಕ್ಷ ಕೊಡುತ್ತಾ 1958-59ರ ಹೊತ್ತಿಗೆ 76 ಲಕ್ಷ 35 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದನ್ನೆಲ್ಲಾ ಮನೆಕಟ್ಟಿಕೊಳ್ಳುವುದಕ್ಕೆ ಕೊಟ್ಟಿದೆ.

ಶ್ರೀ ಟಿ. ಹನುಮಯ್ಯ.—ಈಗ ಸ್ಪೇಟ್ ಡಬರ್ ಆಗಿದೆ. ಮೊದಲು ಮೈಸೂರು ಎಷ್ಟು ಇತ್ತು ? ಅದು ಹೇಳಿ. ಈಗ ಎಲ್ಲಾ ಸೇರಿಸಿ ಹೇಳುತ್ತೀರಿ.

ಶ್ರೀ ಆರ್. ಚೆನ್ನಿಗರಾಮಯ್ಯ.—ಸ್ಟೇಟು ದೊಡ್ಡದಾಗಿದೆಯೇ ಏನಾ ಹರಿಜನರ ಸಂಖ್ಯೆ, ಷೆಡ್ಯೂಲ್ಡ್ ಕ್ಯಾಸ್ಟ್ಸ್ ಸಂಖ್ಯೆ ಡಬರ್ ಆಗಿಲ್ಲ. ಹಳೆಯ ಮೈಸೂರಿನಲ್ಲಿ ಷೆಡ್ಯೂಲ್ ಕ್ಯಾಸ್ಟ್ಸ್ ಎಂದರೆ ಹರಿಜನರು, ಕೊರಚ, ಕೊರಮ, ಲಂಬಾಣಿ ಇವರೆಲ್ಲರೂ ಬರುತ್ತಾರೆ. ಆದರೆ ಬೊಂಬಾಯಿ, ಮದ್ರಾಸು ಹೈದರಾಬಾದ್ ಕರ್ನಾಟಕದಲ್ಲಿ ಇವರು ಸೇರುವುದಿಲ್ಲ. ಆದ್ದರಿಂದ ಜನಸಂಖ್ಯೆ ಕಡಮೆ ಇದೆ. ದೇಶ ಡಬರ್ ಆದರೂ ಅವರ ಜನಸಂಖ್ಯೆ ಡಬರ್ ಆಗಿಲ್ಲ. ಹಳೆಯ ಮೈಸೂರಿನಿಂದ ಅಸೆಂಬ್ಲಿಯ ಮೆಂಬರು ಎಷ್ಟು ಜನ ಇದ್ದಾರೆ, ಹೊಸ ಪ್ರಾಂತದಿಂದ ಎಷ್ಟುಜನ ಇದ್ದಾರೆ. ಎನ್ನುವುದನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀ ಟಿ. ಹನುಮಯ್ಯ.—ಪೋಯಿಂಟ್ ಆಫ್ ಆರ್ಡರ್ ಹೇಳಿ.

Sri N. RACHIAH.—On a point of order. Parliament has passed an Act with regard to the inclusion or exclusion of communities among the scheduled castes and scheduled tribes as applicable to the entire country. Those communities, castes and tribes which were included by the Parliament have not been taken into consideration because the Government are basing their figures on the Census of 1951. But after 1956, these figures have not been included. In fact the number has doubled. The Hon'ble the Chief Minister Sri S. Nijalingappa felt sorry that only 29 seats were reserved for these classes. I had enunciated the entire formula on the floor of the House in the Parliament and according to that it has doubled. So, what the Minister is telling is certainly wrong and false and he does not know what it is.

Sri S. NIJALINGAPPA (Chief Minister).—The word 'false' is not correct.

Mr. SPEAKER.—The word 'false' is not unparliamentary; but it is not in good taste. It should not be used as far as possible. The Hon'ble Member may say "it is not correct" or "it is incorrect". But use of the word 'false' will show rather something which is not in good taste.

Sri N. RACHIAH.—The information he has furnished is false.

Mr. SPEAKER.—Again the Hon'ble Member is committing the same mistake. The word 'false' is not unparliamentary but it is not right to use it in the sense it carries a bad taste.

Sri N. RACHIAH.—I am seeking the protection of the Chair. ಅದು ಇದು ಎಂದು ಕೈ ಕುಣಿಸುವುದಲ್ಲ. ಈಗ ಏನು ಮಾಡಿದ್ದೀರಿ, ಮುಂದೆ ಏನು ಮಾಡುತ್ತೀರಿ ಎನ್ನುವುದನ್ನು ಸ್ವಲ್ಪ ಹೇಳಿ.

ಅಧ್ಯಕ್ಷರು.—ತಾವು ತಮ್ಮ ಸ್ಟೇಟ್‌ಮೆಂಟ್ ಎಕ್ಸ್‌ಪ್ಲೈನ್ ಮಾಡುತ್ತಿದ್ದೀರಿ. ಪ್ರೊಟೆಕ್ಷನ್ ಕೇಳುತ್ತಿಲ್ಲ.

ಶ್ರೀ ಆರ್. ಚೆನ್ನಿಗರಾಮಯ್ಯ.—ಆರ್ಗ್ಯೂ ಮಾಡುತ್ತಿದ್ದಾರೆ.

ಶ್ರೀ ಎನ್. ರಾಚಯ್ಯ.—ಆರ್ಗ್ಯೂ ಎಂಬುದು ಅವರ ಅಭಿಪ್ರಾಯ.

ಅಧ್ಯಕ್ಷರು.—'False' ಎನ್ನುವುದು ತಮ್ಮ ಅಭಿಪ್ರಾಯ. ಆಡರೂ ಕೂಡ ಯಾರಾದರೂ ಶಬ್ದಗಳನ್ನು ಉಪಯೋಗ ಮಾಡುವ ಮೊದಲು ಸ್ವಲ್ಪ ಜಾಗರೂಕತೆಯಿಂದ ಉಪಯೋಗಮಾಡಬೇಕು. ಮಂತ್ರಿಗಳಾಗಲಿ, ಯಾರಾದರಾಗಲೀ ಎಲ್ಲರೂ ಸ್ವಲ್ಪ ಜಾಗರೂಕತೆಯಿಂದ ಶಬ್ದಗಳನ್ನು ಉಪಯೋಗ ಮಾಡಬೇಕು. ಏನೋ ಒಂದು ತರಹ ತಿಕ್ಕಾಟ ನಡೆಯುತ್ತದೆ ಎನ್ನುವ ತರಹದಲ್ಲಿ ಶಬ್ದಗಳನ್ನು ಪ್ರಯೋಗಿಸಬಾರದು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಗುಡುಗು ಮಿಂಚಿನಂತೆ, ಸರ್ಪನೆ ಏರುತ್ತದೆ ಎಂದು ಹೇಳಿದರು. Is that parliamentary?

ಅಧ್ಯಕ್ಷರು.—ಹಳೆಯ ಮೈಸೂರು ಭಾಷೆಯಲ್ಲಿ ಸರ್ಪನೆ ಏರುತ್ತದೆ ಎನ್ನುವುದು ಒಂದು ಆಗುತ್ತದೆ. ನಮ್ಮ ಕಡೆ ಆ ರೀತಿ ಅರ್ಥ ಇಲ್ಲ.

ಆ ರೀತಿ ಭಾಷಣ ಮಾಡಿದವರು ಹ್ಯೂಮರಸ್ ಆಗಿ ಹೇಳಿದ್ದರೂ ಕೂಡ ಅವರು ಉತ್ತರ ಕೊಡುವಾಗ ಹಾಜರಿರಬೇಕೆಂಬ ದೃಷ್ಟಿಯಿಂದ ಹೇಳುತ್ತಾ ಇದ್ದೇನೆ. ಯಾರಿಗೆ ಯಾವ ಪದ ಜೆನ್ಯಾಗಿರುತ್ತದೆಯೋ ಅವರೇ ಟೀಕೆ ಮಾಡಿದರೆ ಏನು ಹೇಳುವುದು ! ನಾನು ಯಾರನ್ನಾದರೂ ಒಂದು ರೀತಿಯಂದ ಟೀಕೆ ಮಾಡಬೇಕೆಂಬ ದೃಷ್ಟಿಯಿಂದ ಹೇಳಿದ್ದರೆ ತಪ್ಪಾಗುತ್ತಿತ್ತು. ಖಂಡಿತ ಆ ಉದ್ದೇಶ ಇಲ್ಲ. ಕೆಲವರಿಗೆ ಕೆಲವು ಪದ

(ಅಧ್ಯಕ್ಷರು)

ಗಳನ್ನು ಉಪಯೋಗಿಸಿದರೆ ಮಾತ್ರ ಹಿತವಾಗುತ್ತದೆ. ಏನು ಮಾಡುವುದು? ಯಾರೂ ತಪ್ಪು ಒಪ್ಪಿಕೊಳ್ಳುವುದಿಲ್ಲ.

ಶ್ರೀ ಜಿ. ದುಗ್ಗಪ್ಪ.—ಮುಖ್ಯವಾಗಿ ಹೊಸ ಭಾಗಗಳು ಸೇರಿರತಕ್ಕ ಪ್ರಾಂತಗಳಲ್ಲಿ ಹಿಂದಿನ ಮೈಸೂರಿನಲ್ಲಿದ್ದಂಥ ಅನೇಕ ಸೌಲಭ್ಯಗಳಿರಲಿಲ್ಲ. ಹೀಗಾಗಿ ಹೊಸ ಮೈಸೂರಿನಲ್ಲಿ ಈ ಪ್ರಶ್ನೆ ಇನ್ನೂ ಹೆಚ್ಚಾಗಿದೆ. ಇದರ ಆವಶ್ಯಕತೆ ಎರಡರಷ್ಟು ಮೂರರಷ್ಟು ಹೆಚ್ಚಾಗಿದೆ. ಈ ವಿಚಾರವನ್ನು ಮಾನ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಶ್ರೀ ದುಗ್ಗಪ್ಪನವರು ಹೇಳಿದ್ದನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. ಇದನ್ನು ಜನಸಂಖ್ಯೆಯ ಮೇಲೆ ಮಾಡುವಂತೆ ಇಲ್ಲ. ಹೊಸ ಪ್ರಾಂತದಲ್ಲಿ ಎಂದರೆ ಬೊಂಬಾಯಿ ಕರ್ನಾಟಕ, ಹೈದರಾಬಾದು ಕರ್ನಾಟಕದಲ್ಲಿ ಹರಿಜನರ ಸಮಸ್ಯೆ ಇನ್ನೂ ಹೊದ್ದದಾಗಿದೆ. ಗುಲ್ಬರ್ಗ, ಮಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ನಾನು ನೋಡಿದ್ದೇನೆ. ಈ ಸಮಸ್ಯೆ ಬಹಳ ಬ್ಯಹದಾಕಾರವಾಗಿದೆ. ಇದನ್ನು ಪರಿಹರಿಸುವುದು ಮಾನ್ಯ ಸದಸ್ಯರ ಮತ್ತು ಸರ್ಕಾರದವರ ಕರ್ತವ್ಯವಾಗಿದೆ. ಮಾನ್ಯ ಸದಸ್ಯರು ಜನ ಸಂಖ್ಯೆ ಎಷ್ಟಿದೆ ಎಂದು ಕೇಳಿದರು. 25,80,000 ಷೆಡ್ಯೂಲ್ ಕ್ಯಾಸ್ಟ್‌ನವರು; ಷೆಡ್ಯೂಲ್ ಟ್ರೈಬ್ಸ್‌ನವರು 80 ಸಾವಿರ ಜನ ಇದ್ದಾರೆ. ಇವರಿಗಿರತಕ್ಕ ಸಮಸ್ಯೆಯನ್ನು ನಿವಾರಣೆ ಮಾಡಲಿಕ್ಕೆ ನಾವೆಲ್ಲರೂ ಪ್ರಯತ್ನ ಮಾಡೋಣ. ಈಗ ಈ ವರ್ಷ ಮನೆಕಟ್ಟಲಿಕ್ಕೆ 22 ಲಕ್ಷ, ಆರು ಲಕ್ಷ ಮತ್ತು 28 ಲಕ್ಷ ರೂಪಾಯಿ ಇದೆ. ಮೊದಲೇ ನಾನು ಬಜೆಟ್ ಚರ್ಚೆಯ ಮೇಲೆ ಉತ್ತರ ಕೊಡುವಾಗ ಹೇಳಿದೆ. ಹಿಂದಿನ ವರ್ಷವೂ ಸಹ 19 ಲಕ್ಷ ರೂಪಾಯಿ ಮಾತ್ರ ಪೊಟ್ಟಪೊದಲು ಇತ್ತು. ಕೇಂದ್ರ ಸರ್ಕಾರದವರನ್ನು ಕೇಳಿದಮೇಲೆ ಇದರ ವಿಚಾರದಲ್ಲಿ ಹೆಚ್ಚು ಹಣ ಕೊಡುವುದು ನ್ಯಾಯವಾಗಿದೆ ಎಂದು ತಿಳಿದು ಮತ್ತೆ ಸಪ್ಲಿಮೆಂಟರಿ ಗ್ರಾಂಟ್ ಕೊಟ್ಟರು. ಈ ವರ್ಷವೂ ಸಹ ಅದೇ ದೃಷ್ಟಿಯನ್ನಿಟ್ಟುಕೊಂಡು ಕೆಲಸಮಾಡುತ್ತಾ ಇದ್ದೇವೆ. ಎಲ್ಲಾ ಡಿಪಾರ್ಟ್‌ಮೆಂಟಿನಲ್ಲೂ ಸ್ವಲ್ಪ ಹಣ ಖೋತಾ ಮಾಡಿದ್ದಾರೆ. ಅದೇ ರೀತಿ ಇದಕ್ಕೂ ಖೋತಾ ಮಾಡಿದ್ದಾರೆ. ಆದರೆ ನಮಗೆ ಭರವಸೆ ಇದೆ, ಕೇಂದ್ರ ಸರ್ಕಾರದವರಿಗೆ ತಿಳಿಸಿ ಹೆಚ್ಚು ಕೊಡಿಸಲಿಕ್ಕೆ ಪ್ರಯತ್ನ ಪಡುತ್ತೇವೆ. ಆ ಸಂದರ್ಭದಲ್ಲಿ ಮ್ಯಾಚಿಂಗ್ ಗ್ರಾಂಟ್ ಮೈಸೂರು ಸರ್ಕಾರದವರು ಕೊಡಬೇಕಾಗುತ್ತದೆ. ಹೆಚ್ಚು ಮಾಡಲಿಕ್ಕೆ ಅವಕಾಶವಿದೆ ಎಂದು ನಂಬಿಕೊಂಡಿದ್ದೇವೆ. ಈ ಭರವಸೆಯನ್ನು ಮಾನ್ಯ ಸ್ನೇಹಿತರಿಗೆ ಕೊಡುತ್ತೇನೆ. ವಾಟರ್ ಸಪ್ಲೆ ಬಗ್ಗೆ 1957-58ನೇ ಸಾಲಿನಲ್ಲಿ ಶ್ರೀ ಮುನಿರಾಜು ಅವರು ಕೋಲಾರ ಜಿಲ್ಲೆಯಲ್ಲಿ ಬಾಗೇಪಲ್ಲಿ-ಗುಡಿಬಂಡೆ ತಾಲ್ಲೂಕುಗಳಿಗೆ ಏನೂ ಸಹಾಯ ಮಾಡಲಿಲ್ಲವೆಂದು ಒಂದು ಆಪಾದನೆಯನ್ನು ಮಾಡಿದ್ದಾರೆ. ಕೋಲಾರ ಜಿಲ್ಲೆಯ ಬಗ್ಗೆ ಎಲ್ಲೆಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ ಎಂಬುದರ ಬಗ್ಗೆ ನನ್ನಲ್ಲಿ ಒಂದು ಪಟ್ಟಿಯೇ ಇದೆ. ಕೋಲಾರ ಜಿಲ್ಲೆಗೆ ನಾಲ್ಕು ಲಕ್ಷ 15 ಸಾವಿರ ರೂಪಾಯಿಗಳನ್ನು ಒದಗಿಸಲಾಗಿತ್ತು. ಈ ಬಗ್ಗೆ ಒಂದು ದೊಡ್ಡ ಯೋಜನೆಯನ್ನು ತಯಾರಿಸಲಾಗಿದೆ. ಈಗಾಗಲೇ ಬಹಳ ಹಣ ಕೂಡ ಖರ್ಚಾಗಿದೆ. ಈ ಹಿಂದೆ ಒಂದು ಪ್ರಶ್ನೆಗೆ ಇಲ್ಲೇ ಉತ್ತರ ಕೊಡುವಾಗ ಗುಡಿಬಂಡ-ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಬಾವಿಗಳ ವಿಚಾರವಾಗಿ ಈಗಾಗಲೇ ಮಂಜೂರಾಗಿರತಕ್ಕ ಬಾವಿಗಳಲ್ಲಿ ಕೆಲವು ಬಾವಿಗಳನ್ನು ತೋಡಿನಲಾಗಿದೆಯೆಂದೂ ಇನ್ನು ಕೆಲವು ಬಾವಿಗಳ ಕೆಲಸ ನಡೆಯುತ್ತಿದೆಯೆಂದೂ ತಿಳಿಸಿದ್ದೇನೆ. ಆದಾಗ್ಯೂ ಮಾನ್ಯ ಸದಸ್ಯರು ಅಲ್ಲಿ ಏನೂ ಕೆಲಸಗಳೇ ನಡೆದಿಲ್ಲವೆಂದು ಹೇಳುತ್ತಿದ್ದಾರೆ, ನಮಗೀಗ ಬಂದಿರತಕ್ಕ ವರದಿಯ ಪ್ರಕಾರ ಅದರಲ್ಲಿ ತಿಳಿಸಿರುವ ಪ್ರಕಾರ ಅಂಕಿಅಂಶಗಳನ್ನು ತಿಳಿಸಿದ್ದೇನೆ. ಮತ್ತೊಮ್ಮೆ ಜಿಲ್ಲಾಧಿಕಾರಿಗಳಿಗೆ ಈ ವಿಚಾರ ತಿಳಿಸಿ ಅವರ ವರದಿಯಲ್ಲಿ ನಮಗೆ ತಿಳಿಸಿರತಕ್ಕ ಅಂಶಗಳು ಸರಿಯೇ ಅಲ್ಲವೇ ಎಂಬುದನ್ನು ಪರಿಶೀಲನೆ ಮಾಡಲು ಹೇಳುತ್ತೇನೆ. ನಮಗೆ ಬಂದಿರತಕ್ಕ ವರದಿಯಲ್ಲಿ ಕೆಲವು ಬಾವಿಗಳ ಕೆಲಸ ಪೂರ್ತಿಯಾಗಿದೆ ಎಂದೂ, ಇನ್ನು ಕೆಲವು ಬಾವಿಗಳ ಕಾಂಗ್ರಾರಿ ನಡೆಯುತ್ತಿದೆಯೆಂದೂ ತಿಳಿಸಿದೆ. ಇನ್ನು ಇಲ್ಲಿಯತನಕ ಮಾನ್ಯ ಸದಸ್ಯರು ಕೊಟ್ಟಿರತಕ್ಕಂಥ ಎಲ್ಲ ಸಲಹೆಗಳನ್ನೂ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಈ ಬಗ್ಗೆ ಸಾಧ್ಯವಿರತಕ್ಕ ಸರ್ವಪ್ರಯತ್ನಗಳನ್ನೂ ಮಾಡುತ್ತಾರೆಂಬುದಾಗಿ ನಾನು ತಮಗೆಲ್ಲರಿಗೂ ಭರವಸೆಕೊಡುತ್ತೇನೆ. ಆ ಭರವಸೆಯಮೇಲೆ ತಾವೆಲ್ಲರೂ ಈಗ ನಭೆಯ ಮುಂದಿರತಕ್ಕ ಡಿಮ್ಯಾಂಡ್‌ಗಳಿಗೆ ತಮ್ಮ ಅನುಮತಿಯನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

Sri J. P. SARWESH.—I would like to know about the suggestion I made in the matter of putting boards near the hotels and wells. It is essential in Hyderabad Karnatak because there are no such things there.

Sri R. CHENNIGARAMAIAH.—It is a very good point for consideration, Sir.

ಶ್ರೀ ಬಿ. ರಾಚಯ್ಯ.—ಅನ್‌ಟಚಬಲಿಟಿ ನೀಗತಕ್ಕ ಬಗ್ಗೆ ಪ್ರತಿಯೊಂದು ಪೋಲೀಸ್ ಸ್ಟೇಷನ್ ಮತ್ತು ಗ್ರಾಮಪಂಚಾಯಿತಿ ಇತ್ಯಾದಿ ಸ್ಥಳಗಳಲ್ಲಿ ಕನ್ನಡದಲ್ಲಿ ಬೋರ್ಡ್ ಬರೆಸಿಹಾಕುವಂತೆ ಏರ್ಪಾಡು ಮಾಡಬೇಕು. ಇನ್ನೊಂದು ವಿಚಾರವೇನೆಂದರೆ ಈ ದಿವಸ ಹರಿಜನರಿಗೆ ಮನೆಗಳನ್ನು ಕಟ್ಟಿಕೊಳ್ಳಲು ನಿವೇಶನಗಳನ್ನು ಸರ್ಕಾರದವರು ಕೊಡುತ್ತಿದ್ದಾರೆ. ಹಾಗೆ ಕೊಡತಕ್ಕ ನಿವೇಶನಗಳ ವಿಚಾರದಲ್ಲಿ ಸರ್ಕಾರದವರೇ ಈ ದಿವಸ ಟ್ರಸ್ಟ್‌ಬೋರ್ಡಿನವರು ಸ್ಕೈಟುಗಳನ್ನು ಫಾರಂ ಮಾಡತಕ್ಕ ರೀತಿಯಲ್ಲಿ ರಸ್ತೆ, ಡ್ರೈನೇಜ್, ಪೋರಿ ಇತ್ಯಾದಿಗಳನ್ನು ಮಾಡಿಕೊಡಬೇಕೆಂದು ಸೂಚಿಸುತ್ತೇನೆ.

ಶ್ರೀ ಆರ್. ಚೆನ್ನಿಗರಾಮಯ್ಯ.—ಕೇಂದ್ರ ಸರ್ಕಾರದಿಂದ ಹಣ ಸಹಾಯ ದೊರೆಯತಕ್ಕ ಸ್ಕೀಂನಲ್ಲಿ ಅದೆಲ್ಲವನ್ನೂ ಮಾಡಲಾಗುತ್ತಿದೆ. ಬೇರೆ ವಿಚಾರಗಳಲ್ಲಿ ಆ ರೀತಿಯ ಸ್ಕೀಂ ಇಲ್ಲ. ಇದೊಂದು ಒಳ್ಳೆಯ ಅಭಿಪ್ರಾಯ—ಇದನ್ನು ಸರ್ಕಾರದವರು ಸಹಾನುಭೂತಿಯಿರದ ಪರಿಶೀಲಿಸುತ್ತಾರೆಂದು ತಿಳಿಸುತ್ತೇನೆ. ಇನ್ನು ಅಸ್ಪೃಶ್ಯತೆ ನಿವಾರಣೆಯ ಬಗ್ಗೆ ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರದಲ್ಲಿ ಸೂಕ್ತ ಏರ್ಪಾಡುಗಳನ್ನು ಕೈಕೊಳ್ಳಲಾಗುತ್ತದೆ.

*Sri MOHAMED ALI (Minister for Excise and Rural Industries).—So far as the Demand 'State Excise Duties' is concerned, two cut motions have been tabled, one to discuss the failure of Government either to enforce prohi-

bition throughout the State or scrap the same in view of its failure in the State and the other to discuss the need for strict prohibition of drinking. No cut motion has been tabled so far as Excise Duty is concerned, although a few members have offered their remarks about the procedure of excise sales or disposing of excise privileges. Criticism was levelled against Government in regard to their policy of enforcing prohibition in the wet areas of the new Mysore State and it was said that the policy of Government was not definite, firm and clear. I would like to submit that this criticism of the Hon'ble Member seems to be based on certain misunderstanding. The policy of Government about enforcement of total prohibition in the remaining wet districts of the State is a determined one and according to the directive principles of the Constitution it is clearly the duty of every State Government to bring about total prohibition of intoxicating liquors, drugs and drinks and to protect the health of the people. The Government is committed to the policy of total prohibition in the State. The question of implementing a certain policy is distinct from the question of laying down a determined policy and it is there exactly where the Hon'ble Members of this House are confused. The Government never said that it had gone back on the policy of total prohibition that had been laid down long ago. What was repeatedly said on the floor of this House was that the Government was committed to that policy but that Government would introduce total prohibition after very careful and cautious consideration of the various aspects relating to this problem. The question of introducing prohibition in the wet districts involves various problems, social, administrative and financial and much has been done for introducing prohibition in those areas also. The Government has taken a decision to introduce total prohibition on the consumption of ganja from June this year and this year there will be total prohibition on the consumption of opium. I do not feel there is any necessity to clarify the policy of Government in this respect in view of the very clear statement made by the Hon'ble the Chief Minister in reply to the General Discussion. We have to consolidate our position in the dry areas; we have to take effective measures for the enforcement of prohibition in the dry areas and at the same time we have to evolve a policy in order to ensure the greatest success in future.

This question involves financial implications also; particularly after reorganisation there have been many problems. The Prohibition Acts are different in the different parts of the integrating areas. The rules, and bye-laws and are different. The question of introducing a uniform Prohibition Act has been taken up by the Department. A Bill has been drafted, but it has to undergo some formalities. The Drug, Medicine and Toilet Preparations Act has been made applicable. There were serious difficulties in the way of Government to stop the misuse of the licences of rectified spirits and also preparation of Ayurvedic medicines, which contained a very high percentage of alcohol. In view of the constitutional difficulties and the difficulties arising out of the decisions of the Supreme Court, whatever action could be taken has been taken. The two Acts mentioned by me have been made applicable to the State and the rules thereunder have been made applicable and this year, as against last year, there is not a single complaint of misuse of these licences. In this way, Government hope to consolidate the position and work the Prohibition Act bit by bit, and though the process may be slow, Government want to be steady and sure.

It has been said that prohibition has failed, completely failed. It has been also said that illicit distillation is rampant. I am not prepared to accept this. Prohibition has benefited a good number of people, particularly young, poor and Depressed Classes people in the rural areas. There are substantial savings in the income of the poor and prohibition has helped to increase their economic standards. Nobody can deny this and in fact, Hon'ble Sri Mallikarjunaswamy has

(SRI MOHAMED ALI)

said that the addicts belonging to the Depressed Classes have benefited enormously by prohibition. Of course, there is some difficulty in respect of the labour classes in big towns. All the Enquiry Committees set up till now have given reasons for this. I do not want to undermine the role of the officers, so far as enforcement of prohibition is concerned. But I would like to place my views. This is a reformative measure and our aim is to change the fundamental habits of our people. We cannot rely too much on law or coercive measures. But people's co-operation is not forthcoming. We have to take to preventive measures and also educate the people. The Government is now thinking of a Prohibition Board at the State level to devise ways and means to conduct educational programmes and divert the attention of the addicts and if necessary such Boards may be set up at District levels also.

So far as corruption and police *mamuls* are concerned, I am sorry for the sweeping remarks that have been made. There are some officers who have taken positive action for implementing prohibition effectively. It is very difficult to deal with corruption so far as illicit distillation is concerned. Illicit smugglers and drunkards are all offenders and illicit smuggling and drinking take place in secrecy and so it is very difficult to bring those people to book. Very few complaints are there so far as *mamuls* are concerned. There may be some substance in those complaints. They have given rise to so many doubts and speculations because everything takes place under a veil of secrecy. Illicit distillation is not rampant and I would like to make it clear that it has not originated from prohibition. It might have increased to some extent in view of the increased area under prohibition, but I can safely say that the progress of prohibition is satisfactory. About 5 to 6 crores of gallons of liquor were being consumed before the enforcement of prohibition. How is it possible now for anybody to say that about 6 crores of gallons of illicit liquor are being manufactured in the State? The real difficulty about prohibition is to assess in precise terms the results of prohibition and as illicit distillation takes place in some obscure corner, it has become a matter of speculation. Some legislative changes will play a very important role. Non-officials have to arouse the conscience of the people against this evil. Now, the Government is contemplating some legislative changes to prescribe a minimum punishment. And who is to enforce this law? That is another question. As the Chief Minister has clarified the position in his reply to the general discussion, I need not say anything more in this respect.

About neera centres, I have to submit this much that the position was somewhat difficult in the new State. The administrative set up was different in the different integrating areas. In Bombay, the palmgur and neera centres were managed by the Khadi Board. In Madras, they were managed by the Co-operative Department and in old Mysore they were managed by the Industries Department. The rules and regulations were different and all the aspects relating to the Neera Centres have been examined by the Department and the proposals are under active consideration of the Government.

About excise sales, the Government have not got all the discretionary powers. The Legislature has laid down certain provisions under the Excise Act, and the Department has to abide by the rules laid down under the Act. I assure the House that there has been no deviation from the procedure laid down under the rules. During the year 1956-57, the Government realised maximum rentals so far as Bangalore shops are concerned. The procedure that was adopted in 1956-57 was adopted in the year 1957-58. So, it will not be correct to say that there has been a fall in this respect. The Government have disallowed tapping of toddy trees in dry areas and therefore contractors have to tap toddy trees in Mysore District which is 150 miles away. The cost of transportation has gone up and consequently there was a fall in toddy revenue particularly in

Bangalore. I assure the House that there will be no deviation from the rules laid down by the Legislature.

So far as Sri N. G. Narasimhegowda's objection is concerned, for holding sales at District Headquarters, I have to say that previously sales were held at Taluk headquarters and in some places sales were held on the same dates and consequently contractors had no time and chance to go and bid in other places. If the sales are held in District Headquarters all the contractors will be in one place and there will be a chance for all the contractors to bid. This will also give a chance for fair competition. Keeping in view all these considerations, some changes are to be effected.

I thank all the hon'ble members who made many useful suggestions and all those suggestions will be considered. I hope the members will support the Demand.

Mr. SPEAKER.—Before I put the Demands to the House, I would like to say for future guidance that Ministers should not make any policy statement while replying to the discussion on the Demands. But, if they want to make a policy statement, they must take the first opportunity to do so. It is not proper to use the time set apart for reply to the discussions of Demands to make policy statements. I am just requesting the Ministers that they must bear this fact in mind. If they want to make a policy statement, I shall certainly give them the first opportunity to do so.

The question is:

"That a sum not exceeding Rs. 66,300 be granted to the Government to defray the charges which will come in course of payment during the year ending 31st day of March 1959, in respect of 'Taxes on Income other than Corporation Tax and Estate Duty'."

The motion was adopted.

Mr. SPEAKER.—The question is:

"That a sum not exceeding Rs. 28,61,000 be granted to the Government to defray the charges which will come in course of payment during the year ending 31st day of March 1959, in respect of 'State Excise Duties'."

The motion was adopted.

Mr. SPEAKER.—The question is:

"That a sum not exceeding Rs. 2,49,000 be granted to the Government to defray the charges which will come in course of payment during the year ending 31st day of March 1959, in respect of 'Stamps'."

The motion was adopted.

Mr. SPEAKER.—The question is:

"That a sum not exceeding Rs. 13,43,000 be granted to the Government to defray the charges which will come in course of payment during the year ending 31st day of March 1959, in respect of 'Registration'."

The motion was adopted.

Mr. SPEAKER.—The question is:

"That a sum not exceeding Rs. 47,22,000 be granted to the Government to defray the charges which will come in course of payment during the year ending 31st day of March 1959, in respect of 'Other Taxes and Duties'".

The motion was adopted.

Mr. SPEAKER.—The question is:

"That a sum not exceeding Rs. 1,46,90,000 be granted to the Government to defray the charges which will come in course of payment during the year ending 31st day of March 1959, in respect of 'Rural Development'."

The motion was adopted.

Mr. SPEAKER.—The House now rises and will meet to-morrow at 1 P.M.

The House adjourned at Thirty-five Minutes past Seven of the Clock to meet again at One of the Clock on Friday, the 18th April 1958.

Karnataka State Archives,
(Departmental Library)
ಕರ್ನಾಟಕ ರಾಜ್ಯ ಪತ್ರಾಗಾರ
(ಇಲಾಖಾ ಗ್ರಂಥಾಲಯ)
ಪುಸ್ತಕ ಸಂಖ್ಯೆ Accession No. (E) 4789
ದಿನಾಂಕ Date.....

WD 1064—GPB—900—3-10-58